ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ 24ನೇ ಮಾರ್ಚ್ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು : ಪ್ರಶ್ನೋತ್ತರವನ್ನು ನಂತರ ತೆಗೆದುಕೊಳ್ಳೋಣ, ಮೊದಲಿಗೆ ಚರ್ಚೆಯನ್ನು ಪ್ರಾರಂಭ ಮಾಡಿ.

ಆಲಮಟ್ಟಿ ಡ್ಯಾಂ ವಿವಾದದ ಬಗ್ಗೆ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ಈ ಸದನದಲ್ಲಿ ನಾನು ಒಂದು ನಿಲುವಳಿ ಸೂಚನೆಯನ್ನು ತಂದಿದೆ. ಈ ಆಲಮಟ್ಟಿ ಡ್ಯಾಂ ಎತ್ತರ ಮಾಡತಕ್ಕಂಥ ವಿಷಯದಲ್ಲಿ ಉದ್ಭವವಾದಂಥ ಏನೊಂದು ಸಮಸ್ಯೆ ಇದೆ, ಆ ಸಮಸ್ಯೆ ಇನ್ನಷ್ಟು ಜಟಿಲವಾಗುವುದಕ್ಕೆ ಕಾರಣಕರ್ತರು ಯಾರು, ಇದು ಹೇಗೆ ಜಟಿಲವಾಯಿತು, ಇದಕ್ಕೆ ಕಾರಣಗಳೇನು ಮತ್ತೆ ಯಾವ ಸಮಸ್ಯೆ ಇವೊತ್ತು ಬಚಾವತ್ ತೀರ್ಪಿನ ಪ್ರಕಾರ ಅದಕ್ಕೆ ಸಂಪೂರ್ಣವಾಗಿ ಒಂದು ನ್ಯಾಯಾಲಯದ ತೀರ್ಪು ಸಿಕ್ಕಿತು, ಅದು ಸಂಪೂರ್ಣವಾಗಿ ನಮ್ಮ ಫೇವರ್‌ನಲ್ಲಿ ಇದ್ದಾಗಲೂ ಕೂಡ ಪುನಃ ಇವೊತ್ತು ಏಕಾಏಕೀ ಈ ಪ್ರಶ್ನೆ ಇಷ್ಟೊಂದು ಉಲ್ಬಣಗೊಳ್ಳತಕ್ಕಂಥ ಸಮಸ್ಯೆ ಏಕೆ ಬಂತು, ಇದನ್ನು ಸರ್ಕಾರ ಏಕೆ ಇಷ್ಟೊಂದು ಲಘುವಾಗಿ ತೆಗೆದುಕೊಂಡಿತು ಎಂಬ ಪ್ರಶ್ನೆ ಇವೊತ್ತು ನಮ್ಮ ಮುಂದೆ. ಇದೆ. ಅದಕ್ಕಾಗಿ ನಾನು ಈ ಒಂದು ಕೃಷ್ಣಾ ಜಲಾನಯದ ಬಗ್ಗೆ ಕಾನೂನುಬಾಹಿರವಾಗಿ ರಚಿಸಲ್ಪಟ್ಟ ಅನಧಿಕೃತ ಸಮಿತಿಯು ಒಪ್ಪಿಸಲಾದ ವರದಿಯ ಆಧಾರದಮೇಲೆ ರಾಜ್ಯದ ನೀರಾವರಿ ಪ್ರಗತಿ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮ ಮತ್ತು ರಾಜ್ಯದ ಜನತೆಯ ಹಿತಾಸಕ್ತಿಗೆ ಧಕ್ಕೆ ಉಂಟಾಗುವ ಬಗ್ಗೆ ಸದನದಲ್ಲಿ ಚರ್ಚಿಸಲು ಎಂದು ಈ ಪ್ರಸ್ತಾವನೆಯನ್ನು ಮಂಡಿಸಿದ್ದೆ. ಆದರೆ ತಾವು ಈಗಾಗಲೇ ಅಪ್ಪಣೆ ಕೊಟ್ಟಹಾಗೆ ನಮ್ಮ ರೆಸಲ್ಯೂಷನ್ ಅನ್ನು ಈ ಸದನದಲ್ಲಿ ಒಮ್ಮತದಿಂದ ಒಪ್ಪಿಕೊಳ್ಳಲಾಗಿದೆ. ಇದರ ಬಗ್ಗೆ ಚರ್ಚೆಯನ್ನು ತಾವು ಪ್ರಾರಂಭಮಾಡಬಹುದು ಎಂದು ಹೇಳಿದಮೇಲೆ ನಾನು ಚರ್ಚೆ ಪ್ರಾರಂಭ ಮಾಡುತ್ತಿದ್ದೇನೆ. ಅಧ್ಯಕ್ಷರೇ, ತಮಗೆಲ್ಲಾ ಚೆನ್ನಾಗಿ ಗೊತ್ತಿದೆ, ಪುನಃ ಈ ಸದನದ ಗಮನಕ್ಕೆ ಹಿಂದಿನ ಎಲ್ಲಾ ವಿಚಾರಗಳನ್ನು ಪುನರುಚ್ಚಾರ ಮಾಡುವುದಕ್ಕೆ ನಾನು ತಯಾರಿಲ್ಲ. ಆದರೂ ಕೂಡ ದೇಶದ ಜನರಿಗೆ, ರಾಜ್ಯದ ಜನರಿಗೆ ಮತ್ತು ಸದನದ ಗಮನಕ್ಕೆ ಕೂಡ ಕೆಲವು ಅಂಶಗಳನ್ನು ತರತಕ್ಕಂಥ ಅವಶ್ಯಕತೆ ಇದೆಯೆಂದು ನಾನು ಭಾವಿಸಿದ್ದೇನೆ. ಕಾರಣ ಇಷ್ಟೆ, ನಮಗೆ ಇರತಕ್ಕಂಥ ಏನು ರೆಕಾರ್ಡ್ಸ್ ಇದೆ, ಅಥವಾ

ವರದಿಗಳು ಏನು ಇದೆ ಅಥವಾ ಜಡ್ಜಮೆಂಟ್ ಏನು ಇದೆ ಇದನ್ನು ಸರಿಯಾಗಿ ಜನರಿಗೆ ತಿಳಿಸದೆ ಹೋದರೆ ಜನರಿಗೂ ಕೂಡ ಒಂದು ತಪ್ಪು ಭಾವನೆ, ಅಥವಾ ತಪ್ಪು ಕಲ್ಪನೆ ಬರತಕ್ಕಂಥ ಸಾಧ್ಯತೆ ಇದೆ. ಅದೇ ರೀತಿಯಾಗಿ ದೇಶದ ಜನರಿಗೆ ಕೂಡ ಕರ್ನಾಟಕ ರಾಜ್ಯದವರು ಏನೋ ಒಂದು ಮಹಾ ಅಪರಾಧವನ್ನು ಮಾಡುತ್ತಿದ್ದಾರೆ, ಅವರು ಯಾವಾಗಲೂ ಸಮಸ್ಯೆಯನ್ನು ಉದ್ಭವ ಮಾಡುತ್ತಾರೆ ಮತ್ತು ಸರಳವಾಗಿರತಕ್ಕಂಥ ಸಮಸ್ಯೆಗೆ ಯಾವಾಗಲೂ ಅವರು ಸ್ಪಂದಿಸುವುದಿಲ್ಲ ಅಥವಾ ದೇಶದ ಹಿತದೃಷ್ಟಿಯಿಂದ ಅವರು ಯಾವಾಗಲೂ ಮನ್ನಣೆ ಕೊಡುವುದಿಲ್ಲ ಎನ್ನುವ ಮಾತು ಬರತಕ್ಕಂಥ ಸಾಧ್ಯತೆ ಇದೆ. ಅದಕ್ಕಾಗಿ ದೇಶದ ಜನರಿಗೂ ಕೂಡ ಗೊತ್ತಾಗಬೇಕು ನಾವು ಯಾವರೀತಿಯಾಗಿ ನಡೆದುಕೊಂಡು ಬಂದಿದ್ದೇವೆ ಎಂದು. ಮತ್ತು ಈಗ ನಡೆದುಕೊಂಡು ಬಂದಂಥ ದಾರಿ ಏನು, ನಾವೇ ಕೆಲವು ಸಮಸ್ಯೆಗಳನ್ನು ಸೃಷ್ಟಿ ಮಾಡಿಕೊಂಡು ನಮ್ಮ ಕಡೆ ಹೇಳುತ್ತಾರೆ "ಹಗ್ಗ ಕೊಟ್ಟು ಕೈಕಟ್ಟಿಸಿಕೊಂಡಿದ್ದಾರೆ ಎಂದು" ಆ ರೀತಿಯಲ್ಲಿ ಇವೊತ್ತು ಆಲಮಟ್ಟಿ ಸಮಸ್ಯೆ ವಿಶೇಷವಾಗಿ ಕೃಷ್ಣಾಜಲಾನಯನ ಪ್ರದೇಶದಲ್ಲಿ ಇರತಕ್ಕಂಥ ಪ್ರಾಜೆಕ್ಟ್‌ಗಳ ಸಮಸ್ಯೆ ಇವೊತ್ತು ಆಗಿದೆ. ಸುಮಾರು 1951ರಲ್ಲಿ ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ಇವು ಮೂರು ರಾಜ್ಯಗಳು ಸೇರಿ ಈ ಕೃಷ್ಣಾ ನೀರನ್ನು ಯಾವರೀತಿಯಾಗಿ ನಾವು ಬಳಕೆ ಮಾಡಿಕೊಳ್ಳಬೇಕು ಎಂಬತಕ್ಕಂಥದ್ದರ ಬಗ್ಗೆ ಮೆಮೋರ್‍ಯಾಂಡಂ ತಯಾರು ಮಾಡಿ ಅದರ ಆಧಾರದ ಮೇಲೆ ನೀರನ್ನು ಬಳಕೆ ಮಾಡಿಕೊಳ್ಳತಕ್ಕಂಥದ್ದು ಮತ್ತು ಅಲೋಕೇಷನ್ ಮಾಡಿಕೊಳ್ಳತಕ್ಕಂಥದ್ದು ಪ್ರಾರಂಭವಾಯಿತು. ಆದರೆ ಮುಂದೆ ರಾಜ್ಯಗಳ ಪುನರ್ ವಿಂಗಡಣೆ 1956ರಲ್ಲಿ ಆದಮೇಲೆ ಈ ಒಂದು ಅಂತರರಾಜ್ಯ ನದಿನೀರಿನ ವಿವಾದದಲ್ಲಿ, Krishna Water Dispute Tribunal - popularly known as Bachawat Tribunal ಎಂದು ಹೇಳಿ ಕಾನ್‌ಸ್ಟಿಟ್ಯೂಟ್ ಮಾಡಿದರು. ಏಕೆಂದರೆ ಕರ್ನಾಟಕದ ಕೆಲವು ಭಾಗ ಕರ್ನಾಟಕಕ್ಕೆ ಬಂತು, ಕೆಲವು ಭಾಗ ಆಂಧ್ರಕ್ಕೆ ಹೋಯಿತು, ಬಾಂಬೆ ಕರ್ನಾಟಕದಲ್ಲಿ ಇರತಕ್ಕಂಥದ್ದು ಬಾಂಬೆ ಪ್ರಾಂತ್ಯಕ್ಕೆ ಸೇರಿತ್ತು. ಹೀಗೆ ಅನೇಕರೀತಿಯಿಂದ ಹೆಚ್ಚುಕಡಿಮೆ ಆದಮೇಲೆ 10.04.1969ರಲ್ಲಿ ಬಚಾವತ್ ಯಾರ್‍ಯಾರಿಗೆ ಎಷ್ಟೆಷ್ಟು ಕೊಡಬೇಕೆಂಬುದೂ ಕೂಡ ಸ್ಕೀಂ (ಎ) ನಲ್ಲಿ ಅದು ಸುಮಾರು 2060 ಟಿಎಂಸಿ ನೀರನ್ನು ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಕ್ಕೆ ಅಲೋಕೇಷನ್ ಮಾಡತಕ್ಕಂಥದ್ದು ಈ ಒಂದು ಸ್ಕೀಂನ ಕೆಳಗೆ ಆಯಿತು. ಸುಮಾರು 2060 ಟಿ.ಎಂ.ಸಿ ಯಲ್ಲಿ ಆವರೇಜ್ ಅಂದರೆ 75 ಫರ್ಸೆಂಟ್ ಡಿಪೆಂಡ್‌ಬಿಲಿಟಿ ಮೇಲೆ ಈ ಒಂದು ಅಂಕಿ ಅಂಶಗಳನ್ನು ತೆಗೆದುಕೊಂಡಿದ್ದಾರೆ ಸುಮಾರು 2060 ಟಿ.ಎಂ.ಸಿ.ಎಂದು. ಇದರಲ್ಲಿ ಸುಮಾರು ಆಂಧ್ರಪ್ರದೇಶಕ್ಕೆ 800 ಟಿ..ಎಂ.ಸಿ., ಕರ್ನಾಟಕಕ್ಕೆ ಸುಮಾರು 700 ಟಿ.ಎಂ.ಸಿ., ಮಹಾರಾಷ್ಟ್ರಕ್ಕೆ ಸುಮಾರು 560 ಟಿ.ಎಂ.ಸಿ., ಪುನಃ ಇದರಿಂದ ಉತ್ಪತ್ತಿ ಆದಂಥದ್ದು ರೀಜನರೇಟೆಡ್ ಎಂದು ಏನು ಹೇಳುತ್ತೇವೆ.

ಅದರಿಂದ ಸಿಗುವಂತಹ ನೀರನ್ನು ಪುನಃ ಕರ್ನಾಟಕಕ್ಕೆ ಸುಮಾರು 344 ಟಿ.ಎಂ.ಸಿ. ಅದೇ ರೀತಿಯಾಗಿ ಉಳಿದ ರಾಜ್ಯಗಳಿಗೂ ಕೂಡ ಆಂಧ್ರಪ್ರದೇಶಕ್ಕೆ ಸುಮಾರು 11 ಟಿ.ಎಂ.ಸಿ, ಮಹಾರಾಷ್ಟ್ರಕ್ಕೆ 25 ಟಿ.ಎಂ.ಸಿ. ನೀರನ್ನು ಈ ರೀ-ಜನರೇಟ್ ಸ್ಕೀಂನಲ್ಲಿ ಅಂದರೆ ಸ್ಕೀಮ್ 'ಎ' ನಲ್ಲಿ ಸುಮಾರು 734ಟಿ.ಎಂ.ಸಿ. ನೀರನ್ನು ಕೊಡುವಂತಹ ತೀರ್ಪು ಬಚಾವತ್ ಟ್ರಿಬ್ಯೂನಲ್‌ನವರು ನಮಗೆ ಕೊಟ್ಟರು. ಅವರು ಅದನ್ನು ಕೊಟ್ಟಮೇಲೆ ಏನು ಹೇಳಿದರೆಂದರೆ ಮುಂದ ಸ್ಕೀಂ 'ಬಿ' ಯಲ್ಲಿ ಇದರ ಬಗ್ಗೆ

ರೆಸಲ್ಯೂಷನ್ ಪಾಸ್ ಮಾಡಿದ್ದೇವೆ. ಈ ಸ್ಕೀಂ (ಬಿ) ಯನ್ನು ನಾವು ಇಂಪ್ಲಿಮೆಂಟ್ ಮಾಡಬೇಕೆಂದು ಏನು ಹೇಳುತ್ತಿದ್ದೇವೆ, ಆ ಸ್ಕೀಮ್ ಬಗ್ಗೆ ಅವರು ಹೇಳಿದರು. ಇದು ಕರ್ನಾಟಕಕ್ಕೆ ಅಂದಾಜು 165 ಟಿ.ಎಂ.ಸಿ, ಮಹಾರಾಷ್ಟ್ರಕ್ಕೆ 89 ಟಿ.ಎಂ.ಸಿ. ಹಾಗೂ ಆಂಧ್ರಪ್ರದೇಶಕ್ಕೆ 75 ಟಿ.ಎಂ.ಸಿ. ಆವರೇಜ್ ನೀರು ಬರತಕ್ಕಂಥ ಸಾಧ್ಯತೆಗಳಿವೆ. ಆ ಒಂದು ಫೈನಲ್ ಆರ್ಡರ್‌ನಲ್ಲಿ ಈ ರೀತಿಯಾಗಿ ಸ್ಪಷ್ಟವಾಗಿ ಹೇಳಿದ್ದಾರೆ.

"The final order should contain only such provisions as may be implemented independently of any agreement or law made by Parliament"

ಅಂದರೆ ನಾವು ನಾವೇ ಇಂಡಿಪೆಂಡೆಂಟ್ ಆಗಿ ಒಂದು ಅಗ್ರಿಮೆಂಟ್‌ಗೆ ಬಂದರೆ ಬೇಸಿನ್ ಸ್ಟೇಟ್‌ಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ಹಾಗೂ ಕರ್ನಾಟಕ ಈ ಮೂರು ರಾಜ್ಯಗಳು ಸೇರಿ ಒಂದು ಒಪ್ಪಂದಕ್ಕೆ ಬಂದರೆ ಅದು ಆಗಬಹುದು ಇಲ್ಲದಿದ್ದರೆ ಪಾರ್ಲಿಮೆಂಟರಿ ಕಾನೂನು ಪ್ರಕಾರ ಇದನ್ನು ಹಂಚಿಕೊಳ್ಳತಕ್ಕಂಥಾದ್ದು ಕೂಡ ಆಗಬಹುದು. ಈ ರೀತಿಯಾಗಿ ಬಚಾವತ್ ಅವಾರ್ಡ್‌ನಲ್ಲಿ ಸ್ಪಷ್ಟವಾಗಿ ಒಂದು ಹೇಳಿಕೆ ಇದೆ. ಇದು ಆದಮೇಲೆ ಸ್ಪಷ್ಟವಾಗಿ ನೀರಿನ ಅಲೊಕೇಷನ್ ಆದಮೇಲೂ ಕೂಡ ಇವತ್ತು ಏನಾಗಿದೆ. ಒಂದು ಕಾರಣದಿಂದ ಈ ಪ್ರಾಜೆಕ್ಟ್ ಅನ್ನು ಇಂಪ್ಲಿಮೆಂಟ್ ಮಾಡುವುದರಲ್ಲಿ ಸ್ವಲ್ಪ ನಿಧಾನವಾಗಿದ್ದರಿಂದ ಇವತ್ತು ನಮ್ಮ ಪಾಲಿಗೆ ಬರುವಂತಹ ನೀರನ್ನು ನಾವು ಬಳಕೆ ಮಾಡುವುದಕ್ಕಾಗುತ್ತಾ ಇಲ್ಲ, ಆಗಿಲ್ಲ ಎನ್ನುವಂತಹ ಮಾತನ್ನು ನಾವು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ಸುಮಾರು 1951 ರಿಂದ ಅಥವಾ ನಮ್ಮ ರಾಜ್ಯ ಕರ್ನಾಟಕವಾದ ಮೇಲೆ ಅಂದರೆ 1956ರಿಂದ ಇಲ್ಲಿಯವರೆಗೆ ಕೂಡ ನಾವು ಹಿಂದೇಟು ಹಾಕಿದ್ದೇವೆಂದರೆ ತಪ್ಪಾಗಲಾರದು.

ಅದರಲ್ಲಿ ನಾವು ಎಲ್ಲರೂ ಭಾಗಗಿಗಳಾಗಿದ್ದೇವೆ. ಆದರೆ ಇವತ್ತು ಕರ್ನಾಟಕಕ್ಕೆ ಬರತಕ್ಕಂಥ 734 ಟಿ.ಎಂ.ಸಿ. ನೀರು ಏನಿದೆ, ಇದನ್ನೇ ನಾವು ಇವತ್ತಿನವರೆಗೂ ಸಂಪೂರ್ಣವಾಗಿ ಬಳಸಿಕೊಂಡಿಲ್ಲ, ಮತ್ತು ಇದನ್ನು ನಾವು 31-5-2000 ಇಸವಿಯೊಳಗೆ ಬಳಸಿಕೊಳ್ಳದೇ ಹೋದರೆ ಪುನಃ ಇನದ್ದು ರೀ-ಅಲೊಕೇಟ್ ಮಾಡುವಂತಹ ಸಾಧ್ಯತೆಗಳಿವೆ. ಅದೇ ಸ್ಕೀಂ 'ಬಿ' ಯಲ್ಲಿರುವಂಥಾದ್ದು, ಆಗ ಇದರಿಂದ ಆಂಧ್ರಪ್ರದೇಶಕ್ಕೆ ಲಾಭವಾಗುತ್ತದೆನ್ನುವ ಭಾವನೆಯಿಂದ ಒಂದಲ್ಲ ಒಂದು ಕಾರಣದಿಂದ ಅವರು ನಮ್ಮ ಕರ್ನಾಟಕ ರಾಜ್ಯದ ಪ್ರಾಜೆಕ್ಟ್‌ಗಳಿಗೆ ಅಡ್ಡ ಹಾಕುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದರೆ ಅವರು ಯಾವ ಪ್ರಯತ್ನವನ್ನು ಇಲ್ಲಿಯವರೆಗೆ ಸೀರಿಯಸ್ ಆಗಿ, ಮಾಡಲಿಲ್ಲ. ಅವರು ಗಂಭೀರವಾಗಿ ಮಾಡಿದ್ದು ಇತ್ತೀಚೆಗೆ ಸುಮಾರು ಒಂದು ವರ್ಷದಿಂದ ಪ್ರಯತ್ನ ಮಾಡಿದ್ದಾರೆ. ಅವರು ಹೈಕೋರ್ಟ್‌ಗೆ ಅರ್ಜಿ ಹಾಕಿ, ಅಥವಾ ಇಂಡಿಪೆಂಡೆಂಟಾಗಿ ಏಜೆನ್ಸಿಗಳು ಏನು ಇವೆ, ಶ್ರೀಮಾನ್ ಕೃಷ್ಣಯ್ಯ ಎನ್ನುವರು ಬ್ಯಾಕ್‌ವರ್ಡ್ ಕ್ಲಾಸಸ್ ವೆಲ್‌ಫೇರ್ ಅಸೋಸಿಯೇಷನ್‌ರವರ ಪತಿಯಿಂದ ಹೈಕೋರ್ಟಿಗೆ ಅರ್ಜಿಯನ್ನು ಹಾಕಿಸಿ ಸ್ಟೇ ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡಿ, ಕೇಂದ್ರಸರ್ಕಾರಕ್ಕೆ ಪಾರ್ಟಿ ಎಂದು ಇಂಪ್ಲೀಡ್ ಮಾಡಿ, ರಾಜ್ಯ ಸರ್ಕಾರಕ್ಕೆ ಪಾರ್ಟಿ ಎಂದು ಇಂಪ್ಲೀಡ್ ಮಾಡಿ, ಸೆಂಟ್ರಲ್ ವಾಟರ್ ಕಮೀಷನ್‌ಗೆ ಪಾರ್ಟಿ ಎಂದು ಇಂಪ್ಲೀಡ್ ಮಾಡಿ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳನ್ನು ಅದರಲ್ಲಿ ಸೇರಿಸಿದ್ದಾರೆ. ಇದನ್ನು ತಂದ ರೀತಿಯಲ್ಲಿ ಈ ಆಲಮ[illegible] ಡ್ಯಾಂ ಎತ್ತರ ಮಾಡುವಂಥಾದ್ದನ್ನು

ನಿಲ್ಲಿಸಬೇಕೆಂದು ಎಲ್ಲಾ ಪ್ರಯತ್ನವನ್ನು ಮಾಡಿದ್ದಾರೆ. ಏಕೆಂದರೆ ಈ ಆಲಮಟ್ಟಿ ಡ್ಯಾಮ್ ಸುಮಾರು 528 ಮೀಟರ್ ಎತ್ತರವಾದರೆ ನಾಳೆ ಸಿಗುವಂತಹ ನೀರು ಸಿಗುವುದಿಲ್ಲವೆನ್ನುವ ಭಯ ಅವರಿಗೆ ಇದೆ. 528 ಮೀಟರ್‌ಗೆ ಏರಿಸುವಂಥಾದ್ದು ಏನಿದೆ, ಇದರಲ್ಲಿ ನೀರಿನ ಪ್ರಮಾಣ ಹೆಚ್ಚಿನ ರೀತಿಯಲ್ಲಿ ಎಂದರೆ ಸುಮಾರು 227 ಟಿ.ಎಂ.ಸಿ. ನೀರು ಇದರಲ್ಲಿ ಕಂಟೇನ್ ಆಗುತ್ತದೆ. ಅದಕ್ಕಾಗಿ ಇದನ್ನು ಕಟ್ಟಬಾರದೆಂಬುದು ಅವರ ವಾದವಾಗಿದೆ. ಅವರು ಹೇಳುವಂಥಾದ್ದು ಏನೆಂದರೆ ನೀವು ಆಲಮಟ್ಟಿ ಡ್ಯಾಮ್‌ನ ಎತ್ತರವನ್ನು ಕೇವಲ 518 ಮೀಟರ್‌ಗೆ ಇಟ್ಟರೆ ಅದು ಸುಮಾರು 155 ಟಿ.ಎಂ.ಸಿ. ನೀರನ್ನು ಅದರಲ್ಲಿ ಸಂಗ್ರಹಣೆ ಮಾಡಬಹುದು. ಅದು ನಿಮಗೆ ಅಪ್ರೂವ್ಡ್ ಇದೆ ಎಂದು ಹೇಳಿಕೊಂಡು ಜಗತ್ತಿಗೆ ಅದೇ ಪ್ರಕಾರ ಮಾಡುತ್ತಿದ್ದಾರೆ. ಇದೆಲ್ಲವೂ ತಮಗೆ ಗೊತ್ತಿದ್ದು, ಅವರು ಈ ರೀತಿಯಾಗಿ ಅಪಪ್ರಚಾರ ಮಾಡುತ್ತಿದ್ದಾರೆಂಬುದು ಗೊತ್ತಿದ್ದು ಕೂಡ ಸರ್ಕಾರ ಅವರಿಗೆ ಹೇಗೆ ಬಲಿ ಆದರು? ಇವತ್ತು 227 ಟಿ.ಎಂ.ಸಿ ನೀರನ್ನು ನೀವು ಕಂಟೇನ್ ಮಾಡುವುದಕ್ಕೆ ಹಕ್ಕಿಲ್ಲವೆನ್ನುವಂತಹ ವಾದವನ್ನು ಅವರು ಮಾನ್ಯ ಪ್ರಧಾನಮಂತ್ರಿಯವರ ಮುಂದೆ ಹೇಳಿದ್ದಾರೆ. ಅದನ್ನು ಅವರು ಮೆಮೊರ್‍ಯಾಂಡಮ್ ಕೊಟ್ಟಿರುವುದರಲ್ಲಿಯೂ ಕೂಡ ನಮೂದು ಮಾಡಿದರು. ಅವರು ಯಾವಾಗಲೂ ಇದನ್ನು ಪತ್ರಿಕೆಗಳಲ್ಲೂ ಮತ್ತು ಅಸೆಂಬ್ಲಿಯಲ್ಲೂ ಕೂಡ ಪದೇ ಪದೇ ಹೇಳಿಕೊಂಡು ಬರುತ್ತಿದ್ದಾರೆ. ಇಷ್ಟೆಲ್ಲಾ ಆಗಿದ್ದರೂ ಕೂಡ ನಮ್ಮ ಸರ್ಕಾರ ಆಲಕ್ಷ್ಯ ಮಾಡಿ ಆ ಕಡೆ ಸರ್ಕಾರ ಗಮನಹರಿಸದ ಇವರು ವೈಯಕ್ತಿಕವಾದ ಫ್ರೆಂಡ್‌ಶಿಫ್ ಇದೆ ಎಂದು ಇವರ ರಾಜ್ಯದ ಹಿತದ ಮುಂದೆ ಇವರ ವೈಯಕ್ತಿಕ ಫ್ರೆಂಡ್‌ಶಿಫ್ ಏನಿದೆ ಎಂಬುದು ಗೊತ್ತಾಗಬೇಕು, ಇದು ಏನು ಕೊಡುವುದು ತೆಗೆದುಕೊಳ್ಳುವುದು ಏನು ಊಟ ತಿಂಡಿಯಲ್ಲಿ ಇದೆಯಾ, ಏನು ಎಂಬುದು ಗೊತ್ತಾಗಬೇಕು. ಏಕೆಂದರೆ ಮುಂದೇನಾಗುತ್ತದೆಂಬ ಮುಂಜಾಗ್ರತೆ ಇಲ್ಲದೆ ನೀವು ಕೆಲಸ ಮಾಡಿದರೆ, ನಿಜವಾಗಿಯೂ ನೀವು ಈ ರಾಜ್ಯದ ಹಿತವನ್ನು ಬಲಿ ಕೊಡುತ್ತೀರಿ ಎನ್ನುವ ಮಾತನ್ನು ಸ್ಪಷ್ಟಪಡಿಸುತ್ತೇನೆ. ಇವತ್ತು ಎಲ್ಲಾ ಕೋರ್ಟ್‌ಗಳು, ಟ್ರಿಬ್ಯೂನಲ್ ಆರ್ಡರ್‌ಗಳು ನಮಗೆ ಫೇವರ್ ಆಗಿದ್ದರೂ ಕೂಡ, ನಮ್ಮ ಪರವಾಗಿದ್ದರೂ ನೀವು ಹೋಗಿ ಅವರು ಹೇಳಿದ ಹಾಗೆ ಕೇಳುತ್ತೀರೆಂದರೆ ತಾವು ಈ ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ಎಷ್ಟು ಆಸಕ್ತಿಯನ್ನು ವಹಿಸಿದ್ದೀರೆಂದು ಗೊತ್ತಾಗುತ್ತದೆ. ಅವರಿಗೆ ನಿಮ್ಮ ಫ್ರೆಂಡ್‌ಶಿಫ್ ಏಕೆ ಬೇಕೆಂದರೆ ನಿಮ್ಮನ್ನು ಕೆಡಿಸುವುದಕ್ಕೆ ಬೇಕು. ನಿಮ್ಮನ್ನು ಯಾವುದಾದರೂ ರೀತಿಯಲ್ಲಿ ನಿಮ್ಮ ಮನಒಲಿಸಿ ಈ ಆಲಮಟ್ಟಿ ಡ್ಯಾಮ್ ಅನ್ನು 528 ಮೀಟರ್‌ಗಳಿಗೆ ಎತ್ತರಿಸಬಾರದೆಂಬುದು ಅವರ ವಾದವಾಗಿದೆ. ಅದಕ್ಕಾಗಿ ಏನೇನು ಕುತಂತ್ರಗಳು ಬೇಕೋ ಅದೆಲ್ಲವನ್ನು ಮಾಡುತ್ತಿದ್ದಾರೆ. ಅದು ಫ್ರೆಂಡ್‌ಶಿಫ್ ಇರಬಹುದು, ಅಥವಾ ನಿಮ್ಮ ರಾಜಕೀಯ ಒತ್ತಡವಿರಬಹುದು ಅಥವಾ ಬೇರೆ ಯಾವುದೇ ರೀತಿಯ ನಿಮ್ಮದೇ ಆದಂತಹ ರಾಜಕಾರಣವನ್ನು ಮಾಡಲು ಹೋದಾಗ ನಿಮ್ಮನ್ನು ಬಲೆಗೆ ಹಾಕಿಕೊಳ್ಳಬಹುದು. ಈ ಎಲ್ಲಾ ತಂತ್ರಗಳನ್ನು ಉಪಯೋಗ ಮಾಡಿ ನಿಮ್ಮ ಮೇಲೆ ಒತ್ತಡವನ್ನು ಹೇರಿ ಆಲಮಟ್ಟಿ ಡ್ಯಾಮ್‌ನ ಎತ್ತರವನ್ನು ನಿಲ್ಲಿಸುವಂತಹ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ. ಅವರು ಅದರಲ್ಲಿ ಯಶಸ್ವಿಯಾದರು, ಆದರೆ ನೀವು ಮಾತ್ರ ಮಣ್ಣು ಮುಕ್ಕಿದ್ದೀರಿ. ರಾಜಕೀಯ ಒತ್ತಡವನ್ನೇ ಒಂದು ಅಸ್ತ್ರವೆಂದು ಉಪಯೋಗ ಮಾಡಿಕೊಂಡು ನಿಮಗೆ ಯಾವ ರೀತಿ ಮೋಸ ಮಾಡಿದರೆಂಬುದಕ್ಕೆ ಏನು ಸ್ಪಷ್ಟ ವರದಿಯನ್ನು ಕೊಟ್ಟಿದ್ದಾರೋ ಅದೇ ಒಂದು ಡಾಕ್ಯೂಮೆಂಟ್ ಸಾಕು. ಈಗ ನೀವು

ಹೇಳಬಹುದು, ನಾವು ನಂಬಿದ್ದೇವೆಂದು, ನಿಮಗೆ ಯಾರು ನಂಬು ಎಂದು ಹೇಳಿದರು? ಯಾವುದಾದರೂ ಕೋರ್ಟ್ ಆರ್ಡರ್ ಇತ್ತಾ? ಸುಪ್ರೀಂ ಕೋರ್ಟ್‌ನವರು ಹೇಳಿದ್ದರಾ ಅಥವಾ ಟ್ರಿಬ್ಯೂನಲ್‌ನವರು ಹೇಳಿದ್ದಾರಾ? ಕೇಂದ್ರ ಸರ್ಕಾರದವರು ಡಿಸಿಷನ್ ತೆಗೆದುಕೊಂಡು ನೀವು ಮಾತುಕತೆಗೆ ಬನ್ನಿ, ನೀವು ಇದನ್ನು ಆಚರಣೆಗೆ ತನ್ನಿ ಎಂದು ಹೇಳಿದ್ದರಾ?

10.30 ಪಿ.ಎಂ

ಯಾರು ಹೇಳಿದರು ನಿಮಗೆ? ನೀವು ನಿಮ್ಮ ರಾಜಕೀಯ ಲಾಭವನ್ನು ಪಡೆಯುವುದಕ್ಕೋಸ್ಕರ ಒಂದು ಸ್ಟೀರಿಂಗ್ ಕಮಿಟಿ ಎಂದು ನಾಲ್ಕು ಜನ ಮುಖ್ಯಮಂತ್ರಿಗಳು ಸೇರಿ, ನಿಮಗೆ ಬೇಕಾದಂಥ ಪಕ್ಷದವರು ಒಂದು ಕಡೆ ಕುಳಿತು ಅವರು ಒಂದು ನಿರ್ಣಯವನ್ನು ಕೊಟ್ಟರು. ಏತಕ್ಕೆ ಕೊಟ್ಟರೆಂದರೆ ಮಾನ್ಯ ಚಂದ್ರಬಾಬುನಾಯ್ಡು ಮತ್ತು ಶ್ರೀಮಾನ್ ದೇವೇಗೌಡರ ನಡುವೆ ಭಿನ್ನಾಭಿಪ್ರಾಯ ಬರಬಾರದು, ಈ ಭಿನ್ನಾಭಿಪ್ರಾಯ ಬಂದರೆ ನಾಳೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಕ್ಕೆ ತೊಂದರೆಯಾಗುತ್ತದೆನ್ನುವ ಭಾವನೆಯಿಂದಲೇ ಇದನ್ನು ಮಾಡಿದ್ದುದು, ಇಲ್ಲದಿದ್ದರೆ ಇದನ್ನು ಮಾಡಲು ಕಾರಣವೇನಿತ್ತು ಹೇಳಿ? ಹಾಗೇನಾದರೂ ಒಂದು ರಾಜ್ಯ, ಎರಡು ರಾಜ್ಯಗಳ ಮಧ್ಯದಲ್ಲಿ ಯಾವುದೇ ಒಂದು ಸಮಸ್ಯೆ ಉದ್ಭವವಾದರೆ ಅದನ್ನು ಸರ್ಕಾರ ಬಗೆಹರಿಸಬೇಕು ಅಥವಾ ಸುಪ್ರೀಂ ಕೋರ್ಟ್ ಬಗೆಹರಿಸಬೇಕು, ಅಥವಾ ಟ್ರಿಬ್ಯುನಲ್ ಬಗೆಹರಿಸಬೇಕು, ಬಗೆಹರಿಸಲು ನೀವ್ಯಾರು ಸ್ವಾಮಿ? ನಿಮಗೆ ಏನು ಹಕ್ಕಿದೆ? ಇದನ್ನು ಏತಕ್ಕೆ ಮಾಡಿದಿರಿ? ರಾಜಕೀಯ ಉದ್ದೇಶದಿಂದ ಒಂದು ಪೊಲಿಟಿಕಲಿ ಮೋಟಿವೇಟೆಡ್ ಡಿಸಿಷನ್ ಅನ್ನು ನೀವು ನಾಲ್ಕು ಜನ ಸೇರಿ ಒಂದು ತೀರ್ಮಾನವನ್ನು ತೆಗೆದುಕೊಂಡಿರಿ. ಏನು ತೀರ್ಮಾನ ತೆಗೆದುಕೊಂಡಿರಿ. ನಾಲ್ಕು ಜನ ಸೇರಿ? ಏನು ಇವತ್ತು ಮಾನ್ಯ ಚಂದ್ರಬಾಬುನಾಯ್ಡುರವರು ಅಬ್ಜೆಕ್ಷನ್ ಮಾಡಿದ್ದಾರೋ ಅಥವಾ ಇವತ್ತು ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು ಕಾನೂನು ಬಾಹಿರವಾಗಿ ಮಾಡಿದ್ದಾರೆ ಅದನ್ನು ನಿಲ್ಲಿಸಬೇಕು ಎನ್ನುವ ಮಾತನ್ನು ಅವರು ಏನು ಹೇಳುತ್ತಿದ್ದರು, ಅವರಿಗೆ ಸ್ಪಂದಿಸಿ ಈ ಶ್ರೀಮಾನ್ ಜ್ಯೋತಿಬಸುರವರು, ಶ್ರೀಮಾನ್ ಮಹಂತಾರವರು, ಶ್ರೀಮಾನ್ ಕರುಣಾನಿಧಿಯವರು, ಶ್ರೀಮಾನ್ ಲಲ್ಲೂಪ್ರಸಾದ್ ಯಾದವ್‌ರವರು ಇವರೆಲ್ಲರೂ ಸೇರಿ ಒಂದು ತಜ್ಞರ ಸಮಿತಿಯನ್ನು ಕಳುಹಿಸಿಕೊಟ್ಟರು. ಸ್ವಾಮಿ, ಅದ್ಯಾವುದು ತಜ್ಞರ ಸಮಿತಿ? ಅದಕ್ಕೆ ಏನು ಲೀಗಲ್ ಸ್ಯಾಂಕ್ಷಿಟಿ ಇದೆ, ಅದು ಸಂವಿಧಾನಾತ್ಮಕವಾಗಿ ರಚಿಸಲಾದ ಸಮಿತಿಯೇ? ಸರ್ಕಾರ ರಚಿಸಿದ ಸಮಿತಿಯೇ ಅಥವಾ ಸೆಂಟ್ರಲ್ ವಾಟರ್ ಕಮಿಷನ್ ರಚಿಸಿದಂಥ ಸಮಿತಿಯೇ ಅಥವಾ ಪ್ಲಾನಿಂಗ್ ಕಮಿಷನ್‌ರವರು ರಚಿಸಿದಂಥ ಸಮಿತಿಯೇ? ಅದನ್ನು ಯಾರು ಮಾಡಿದ್ದುದು? ಅದನ್ನು ನೀವು ಮಾಡಿದ್ದುದು. ಅದಕ್ಕೆ ಸಂಪೂರ್ಣವಾದಂಥ ಹೊಣೆಯನ್ನು, ಇವತ್ತು ಈ ಕರ್ನಾಟಕ ರಾಜ್ಯದ ಜನತೆಗೆ ಏನು ತೊಂದರೆಯಾಗುತ್ತಿದೆ ಅಥವಾ ಇವತ್ತು ಇಡೀ ಭಾರತದೇಶದಲ್ಲಿ ಕರ್ನಾಟಕ ರಾಜ್ಯದ ಬಗ್ಗೆ ಏನೊಂದು ತಪ್ಪು ತಿಳುವಳಿಕೆ ಬಂದಿದೆ, ನಾವೇನು ಇವತ್ತು ಆಂಧ್ರಪ್ರದೇಶದವರ ಹೆಚ್ಚಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ, ಎಂಬ ಆಂಧ್ರಪ್ರದೇಶದವರು ಏನು ಬೊಬ್ಬೆ ಹಾಕಿಕೊಳ್ಳುತ್ತಿದ್ದಾರೆ ಇವತ್ತು, ಅದಕ್ಕೆ ಪುಷ್ಟಿಕೊಡತಕ್ಕಂಥದ್ದು, ಪ್ರೋತ್ಸಾಹ ಕೊಡತಕ್ಕಂಥದ್ದು ಯಾರಾದರೂ ಮಾಡಿದರೆ, ಅದನ್ನು ನಿಮ್ಮ ಸರ್ಕಾರ ಮಾಡಿದೆ. ಇದರ

ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡು ಈ ಸರ್ಕಾರ ರಾಜೀನಾಮೆಯನ್ನು ಕೊಡಬೇಕಾಗುತ್ತದೆ. ಒಂದು ಕ್ಷಣ ಅಧಿಕಾರದಲ್ಲಿರುವುದಕ್ಕೆ ನಿಮಗೆ ನೈತಿಕ ಹಕ್ಕಿಲ್ಲ, ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ನಿಮಗೆ ಯೋಗ್ಯತೆಯಿಲ್ಲ, ನಿಮಗೆ ಮುಂದೆ ಏನಾಗುತ್ತದೆ, ಯಾವ ರೀತಿ ನಡೆದುಕೊಳ್ಳಬೇಕೆನ್ನುವುದು ಗೊತ್ತಿಲ್ಲ. ಇವತ್ತಿನದಿವಸ ಒಂದು ಕಾನೂನು ರಿತ್ಯಾ ಟ್ರಿಬ್ಯುನಲ್‌ರವರೂ ಕೂಡ ನಿರ್ಣಯವನ್ನು ಕೊಟ್ಟರೆ, ಅದನ್ನು ನೀವು ಬದಿಗಿಟ್ಟು, ನಾವು ಅವರ ಜೊತೆಯಲ್ಲಿ ಸೌಹಾರ್ದತೆಯಿಂದ ಮಾತುಕತೆನಡೆಸುತ್ತೇವೆಂದು ಅವರ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡು, ನಿಮ್ಮ ರಾಜಕೀಯ ಉದ್ದೇಶವನ್ನು ಪೂರ್ತಿಮಾಡಿಕೊಳ್ಳುವುದಕ್ಕೋಸ್ಕರ, ಅವತ್ತು ತಜ್ಞರ ವರದಿ ಏನು ಬಂದಿದೆ, ಅದನ್ನು ಈ ಸದನದಲ್ಲಿ ದಯವಿಟ್ಟು ಇಡಬೇಡಿ ಅದಕ್ಕೇನೂ ಮಹತ್ವವಿಲ್ಲ, ಈಗಾಗಲೇ ಆ ವರದಿಯ ವಿಚಾರಗಳು ಪತ್ರಿಕೆಗಳಲ್ಲಿ ಬಂದಿದೆ. ಆ ವರದಿಯನ್ನು ತೆಗೆದುಕೊಂಡು ಈಗಾಗಲೇ ಚಂದ್ರಬಾಬುನಾಯ್ಡುರವರು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ, ಅದನ್ನು ಎವಿಡೆನ್ಸ್ ಆಗಿ ಸುಪ್ರೀಂ ಕೋರ್ಟಿಗೆ ಒಯ್ದಿದ್ದಾರೆ. ಅಧ್ಯಕ್ಷರೆ, ಈ ಒಂದು ತಜ್ಞರ ಸಮಿತಿಯಲ್ಲಿ ಯಾರ್‍ಯಾರು ಇದ್ದಾರೆಂದರೆ, ಶ್ರೀ ಪಿ. ನಿಯೋಗ, ಸೆಕ್ರೆಟರಿ ಅಂಡ್ ಚೀಫ್ ಇಂಜಿನಿಯರ್ ಇರಿಗೇಷನ್, ಗೌರ್ನಮೆಂಟ್ ಆಫ್ ಬಿಹಾರ, ಎಸ್.ಸಿ. ಸಿನ್ಹಾ, ಚೀಫ್ ಇಂಜಿನಿಯರ್, ಡಿ.ಕೆ. ಬಾಲಕೃಷ್ಣ, ಇವರೆಲ್ಲಾ ಅಧಿಕಾರಿಗಳು.

ಅಧ್ಯಕ್ಷರು : ಇವರೆಲ್ಲಾ ಅಧಿಕಾರಿಗಳು, ನಾನ್ ಅಫಿಷಿಯಲ್ ಕಮಿಟಿಯಲ್ಲಿ ನಿಮ್ಮವರು ಯಾರೂ ಇಲ್ಲ, ಎಲ್ಲಾ ಬರೀ ಯು.ಎಫ್ ನವರೇ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳಿದೆನಲ್ಲಾ ಅಧ್ಯಕ್ಷರೆ, ಇವರು ನಾನ್ ಅಫಿಷಿಯಲ್ ಕಮಿಟಿಯನ್ನು ಏನು ರಚಿಸಿದರು, ಆ ನಾಲ್ಕು ಜನರ ನಾನ್ ಅಫಿಷಿಯಲ್ ಕಮಿಟಿಯವರು ಈ ಒಂದು ಆರು ಜನರ ಸಮಿತಿಯನ್ನು ಸಜೆಸ್ಟ್ ಮಾಡಿದರು. ಅದೇನೆಂದರೆ, ನಮ್ಮ ನಮ್ಮ ರಾಜ್ಯಗಳಿಂದ ನಾವಂತೂ ಎಕ್ಸ್‌ಪರ್ಟ್ಸ್ ಇಲ್ಲ, ನಾವು ಇಲ್ಲಿ ರಾಜಕೀಯ ನಿರ್ಣಯವನ್ನು ತೆಗೆದಕೊಳ್ಳೋಣ, ಆದರೆ ಅಲ್ಲಿ ಹೋಗಿ ಇವರು ತಾಂತ್ರಿಕವಾಗಿ ಏನು ಎತ್ತಿದ್ದಾರೆ, ಅದರ ಬಗ್ಗೆ ಅವರು ನೋಡಿಕೊಂಡು ಬರಲಿ, ನೋಡಿಕೊಂಡು ಬಂದ ಮೇಲೆ ಇದು ಸರಿಯೋ ತಪ್ಪೋ ಎಂದು ಹೇಳಿದಮೇಲೆ, ಅದರ ಮೇಲೆ ನಾವು ನಿರ್ಣಯವನ್ನು ತೆಗೆದುಕೊಂಡು ಶ್ರೀಮಾನ್ ದೇವೇಗೌಡರಿಗಾಗಲಿ, ಶ್ರೀಮಾನ್ ಜೆ. ಹೆಚ್. ಪಟೇಲ್‌ರವರಿಗಾಗಲಿ ನಾವು ಹೇಳೋಣ ಎನ್ನುವ ಮಧ್ಯಸ್ಥಿಕೆಯನ್ನು ವಹಿಸಿಕೊಂಡೇ ಇವರನ್ನು ಕಳುಹಿಸಿದ್ದು. ಇಲ್ಲದಿದ್ದರೆ ಇವರು ಹೇಗೆ ಬರುತ್ತಿದ್ದರು? ಇವರು ಎಲ್ಲಿಂದ ಸೃಷ್ಠಿಯಾದರು? ಇವರು ಎಲ್ಲಿ ಹುಟ್ಟಿದರು? ಇವರನ್ನು ಹುಟ್ಟಿಸಿದವರೇ ನೀವು, ಇದಕ್ಕೆ ಯಾವುದೇ ಲೀಗಲ್ ಸ್ಯಾಂಕ್ಷಿಟಿ ಇಲ್ಲ. ಈ ಒಂದು ಪಾಪದ ಕೂಸನ್ನು ಹುಟ್ಟಿಸಿ, ಇವತ್ತು ಅದು ನನ್ನ ಕೂಸಲ್ಲ, ಅದಕ್ಕೆ ಲೀಗಲ್ ಸ್ಯಾಂಕ್ಟಿಟಿ ಇಲ್ಲ ಇಲ್ಲೀಗಲ್ ಇದೆ, ಆನ್ ಕಾನಸ್ಟಿಟ್ಯೂಷನಲ್ ಇದೆ ಎಂದು ನೀವು ಎಷ್ಟೇ ಹೇಳಿದರೂ ಕೂಡ ಅದು ನಿಮ್ಮದೇ ಕೂಸೆನ್ನುವುದು ಎಲ್ಲರಿಗೂ ಗೊತ್ತಾಗಿದೆ, ನೀವು ನಿರಾಕರಿಸಲಾಗುವುದಿಲ್ಲ, You are a party to that. ಅಧ್ಯಕ್ಷರೆ, ಅಷ್ಟೇ ಅಲ್ಲ, ಇವತ್ತಿನದಿವಸ ಚಂದ್ರಬಾಬು ನಾಯ್ಡುರವರು ಸ್ಪಷ್ಟ ಮಾಡಿದ್ದಾರೆ. ಅದೇನೆಂದರೆ ಈ ಸಮಿತಿಗೆ ಲೀಗಲ್ ಸ್ಯಾಂಕ್ಟಿಟಿ ಇಲ್ಲದಿದ್ದರೂ ಕೂಡ,

ಪ್ರಧಾನಮಂತ್ರಿಗಳೇ ಹೇಳಿ ಈ ಸಮಿತಿಯನ್ನು ಮಾಡಿಸಿದ್ದಾರೆ ಎನ್ನುವ ಮಾತನ್ನು ಕೂಡ ಅವರು ಸ್ಪಷ್ಟಪಡಿಸಿದ್ದಾರೆ. ಈ ಸಮಿತಿಯಲ್ಲಿ ನಾಲ್ಕು ಜನ ಮುಖ್ಯಮಂತ್ರಿಗಳು ಹೇಳಿ ಈ ತಜ್ಞರ ಸಮಿತಿಯನ್ನು ರಚಿಸಿದ್ದಾರೆ.

ಅದಕ್ಕಾಗಿ, ಇದಕ್ಕೆ ಸುಪ್ರೀಂ ಕೋರ್ಟಿನ ಬೆಂಬಲ ಇಲ್ಲದೇ ಇರಬಹುದು ಅಥವಾ ಸಂವಿಧಾನಾತ್ಮಕವಾದ ಬೆಂಬಲ ಇಲ್ಲದೇ ಇರಬಹುದು, ಆದರೆ ಇದಕ್ಕೆ ಸಂವಿಧಾನಾತ್ಮಕವಾಗಿರತಕ್ಕಂಥ ಮುಖ್ಯಮಂತ್ರಿಗಳು ಮತ್ತು ಪ್ರಧಾನಮಂತ್ರಿಗಳು ಇದಕ್ಕೆ ಬೆಂಬಲವನ್ನು ಸೂಚಿಸಿದ್ದಕ್ಕೆ ಇದನ್ನು ಜಾರಿಗೆ ತರಲೇ ಬೇಕೆನ್ನುವ ಮಾತನ್ನು, ವಾದವನ್ನು ಸ್ಪಷ್ಟಪಡಿಸಿದ್ದಾರೆ, ಅದು ಇವತ್ತು ಪತ್ರಿಕೆಗಳಲ್ಲೂ ಕೂಡ ಬಂದಿದೆ, ನಾನು ಅದನ್ನು ಪುನಃ ಹೇಳಬೇಕಾಗಿಲ್ಲ ನೀವು ಓದಿಕೊಂಡಿರಬಹುದು. ಅಂದರೆ, ಇಷ್ಟೊಂದು ಮಾಡಬೇಕಾದರೆ, ಇದು ನಾಳೆ ಆಡವರ್ಸ್ ಅಫೆಕ್ಟ್ ಆಗುತ್ತದೆ, ನಮ್ಮ ರಾಜ್ಯದ ಹಿತಕ್ಕೆ ಧಕ್ಕೆಯಾಗುತ್ತದೆ ಎಂದು ನಿಮಗೆ ತಿಳಿಯಲಿಲ್ಲವೇ? ಕೇವಲ ಆರು ತಿಂಗಳೋ, ಒಂದು ವರ್ಷವೋ ಅಥವಾ ಎರಡು ವರ್ಷವೋ ಪ್ರಧಾನಮಂತ್ರಿಗಳು ಅಧಿಕಾರದಲ್ಲಿರಬೇಕೆನ್ನುವುದಕ್ಕೋಸ್ಕರ ಇವತ್ತಿನದಿವಸ ಈ ರೀತಿ ರಾಜ್ಯದ ಹಿತವನ್ನು ಬಿಟ್ಟು ಕೊಟ್ಟಿದ್ದೀರೆಂದರೆ, ನಾಳೆ ದಿವಸ ನಿಮ್ಮ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ನೀವು ಏನು ಬೇಕಾದರೂ ಮಾಡಬಹುದು. ಕರ್ನಾಟಕವನ್ನು ಮಾರಿಕೊಂಡು ನೀವು ಜೀವಂತವಾಗಿರಬೇಕೆಂದು ಇವತ್ತು ಆ ಒಂದು ಪ್ರಮಾಣವನ್ನು ಮಾಡಿದ್ದೀರೆನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ; ಇಲ್ಲವೆಂದರೆ ಏನು ಅವಶ್ಯಕತೆ ಇತ್ತು? ನೀವು ಯಾವ ಕಾನೂನಿನ ಪ್ರಕಾರ ಮಾಡಿದ್ದೀರಿ? ಇವತ್ತು ವಿರೋಧಪಕ್ಷದ ಎಲ್ಲಾ ಪಕ್ಷದವರು, ಇರೆಸ್ಪೆಕ್ಟೀವ್ ಆಗಿ ಅವರು ಯಾವುದೇ ಒಂದು ರಾಜಕೀಯ ಮಾಡುವುದಕ್ಕೆ ಹೋಗಿಲ್ಲ. ನೀವು ಈ ಸಮಿತಿಗಳಿಗೆ ಮಾನ್ಯತೆಯನ್ನು ಕೊಡಬೇಡಿ, ಏಕೆಂದರೆ ಇದು ಸಂವಿಧಾನಾತ್ಮಕವಲ್ಲದ ಸಮಿತಿ, ಈ ಸಮಿತಿಯಿಂದ ನಮಗೆ ತೊಂದರೆಯಾಗುತ್ತದೆಂದು ಹೇಳಿದರು, ಆದರೂ ನೀವು ಕೇಳಲಿಲ್ಲ. ನಮ್ಮ ಈ ಆಲಮಟ್ಟಿ ಆಣೆಕಟ್ಟಿನ ಎತ್ತರಕ್ಕೆ, ಇವತ್ತು ಈ ಪ್ರಾಜೆಕ್ಟ್ ರಿಪೋರ್ಟ್ ಅನ್ನು ಸುಮಾರು 1976 ರಲ್ಲಿ ಪ್ಲಾನಿಂಗ್ ಕಮಿಷನ್‌ರವರು ಅಪ್ರೂವ್ ಮಾಡಿದ್ದಾರೆ, 1978 ರಲ್ಲಿ ರಿವೈಸ್ಡ್ ಪ್ರಾಜೆಕ್ಟ್ ಅಪ್ರೂವ್ ಮಾಡಿದ್ದಾರೆ. ಅದೇ ರೀತಿಯಾಗಿ ಎತ್ತರದ ಬಗ್ಗೆ, ಅದು ಐನೂರು ಇಪ್ಪತ್ತೆಂಟು ಮೀಟರ್‌ಗೆ ಎತ್ತರಿಸತಕ್ಕಂಥದ್ದನ್ನು ಸುಮಾರು 1990ರಲ್ಲಿ ಅಪ್ರೂವ್ ಮಾಡಿದ್ದಾರೆ. ಹೀಗೆ ನಿಮಗೆ ಸರ್ಕಾರದವರು ಕೇಂದ್ರ ಸರ್ಕಾರದ ಅನುಮತಿ ಇದ್ದರೂ ಕೂಡ, ಅಪ್ರೂವಲ್ ಇದ್ದರೂ ಕೂಡ, ಯೋಜನಾ ಆಯೋಗದವರು ದಿನಾಂಕ 24-9-1990ರಲ್ಲಿ ಆಲಮಟ್ಟಿ ಆಣೆಕಟ್ಟೆಯ ಎತ್ತರವನ್ನು ಐನೂರು ಇಪ್ಪತ್ತೆಂಟು ಮೀಟರ್‌ಗೆ ಹೆಚ್ಚಿಸಬಹುದೆಂದು ಅಪ್ರೂವಲ್ ಕೊಟ್ಟಿದೆ, ಫೈನಾನ್ಸ್ ಮಿನಿಸ್ಟ್ರಿ ಅಪ್ರೂವಲ್ ಕೊಟ್ಟಿದೆ, ಪ್ಲಾನಿಂಗ್ ಕಮಿಷನ್ ಅಪ್ರೂವಲ್ ಕೊಟ್ಟಿದೆ, ಎಕ್ಸಟ್ರನಲ್ ಅಫೇರ್ಸ್ ಮಿನಿಸ್ಟ್ರಿ ಅಪ್ರೂವಲ್ ಕೊಟ್ಟ ಮೇಲೆ ವಿಶ್ವಬ್ಯಾಂಕ್‌ನಿಂದ ಏನು ಸಹಾಯ ಬರಬೇಕಾಗಿತ್ತು ಆ ಸಹಾಯವೂ ಕೂಡ ಇವತ್ತಿನ ದಿವಸ ಬಂದಿದೆ. ಅಂದರೆ, ಇಷ್ಟೆಲ್ಲಾ ನಮ್ಮ ಪರವಾಗಿದ್ದಾರೂ ಕೂಡ What prompted you to talk with Andhra Pradesh Chief Minister? What prompted you to agree for the Unconstitutional, illegal Committee constituted by Sri Jyothi Basu?

ಇದಾದಮೇಲೆ ಇದು ಇಷ್ಟಕ್ಕೇ ನಿಂತಿಲ್ಲ, ಗೇಟಿನ ಬಗ್ಗೆಯೂ ಕೂಡ ಈ ವಾದವಿವಾದ ನಡೆದಾಗ, ಹದಿನೈದು ಮೀಟರ್ ಎತ್ತರದ ರೇಡಿಯಲ್ ಗೇಟ್ ಅನ್ನು ಫಿಕ್ಸ್ ಮಾಡಬೇಕೆನ್ನುವುದಕ್ಕೆ, ಕೂಡ The Directorate of Gates and Designs of Central Water Commission gave its approval to the design of 15 meters into 15.2 meters radial gates in its letter dated 4.7.96.

ಅಂದರೆ ಸುಮಾರು ಆರೇಳು ತಿಂಗಳ ಹಿಂದೆಯೇ ಈ ಅಪ್ರೂವಲ್ ಡೈರೆಕ್ಟರೇಟ್ ಆಫ್ ಗೇಟ್ಸ್ ಅಂಡ್ ಡಿಸೈನ್ಸ್ ಸೆಂಟ್ರಲ್ ವಾಟರ್ ಕಮಿಷನ್‌ನಿಂದ ಬಂದಿದೆ.

ಆ ಪತ್ರವನ್ನೂ ಕೂಡ ನಾನು ಇಲ್ಲಿ ನಿಮಗೆ ತೋರಿಸುತ್ತೇನೆ. ಇದರಲ್ಲೂ ಕೂಡ ಇವತ್ತಿನ ದಿವಸ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಡೈರೆಕ್ಟರ್ ಆಫ್ ಡಿಸೈನ್ಸ್ ಅಂಡ್ ಗೇಟ್ಸ್ ಇವರೂ ಕೂಡ ಸ್ಪಷ್ಟವಾಗಿ ಇದರಲ್ಲಿ ಹೇಳಿ, ಅಪ್ರೂವಲ್ ಕೊಟ್ಟು, 15 ಮೀಟರ್ ಗೇಟ್‌ನ್ನು ಫಿಕ್ಸ್ ಮಾಡಬಹುದೆನ್ನತಕ್ಕ ಮಾತನ್ನು ಅವರು ಹೇಳಿ, ಅದಕ್ಕೆ ಅಪ್ರೂವಲ್ ಕೊಟ್ಟು ಇವತ್ತಿನ ದಿವಸ ಕಳುಹಿಸಿದ್ದಾರೆ. ಹೀಗಿದ್ದರೂ ಕೂಡ, ನೀವು ಪುನಃ ಏಕೆ ಮಾತುಕತೆಗೆ ಹೋದಿರಿ ? ನೀವು ಏಕೆ ಮಾತನಾಡತಕ್ಕ ಪ್ರಯತ್ನ ಮಾಡಿದಿರಿ ಎನ್ನತಕ್ಕ ಒಂದು ಪ್ರಶ್ನೆಯನ್ನು ಇವತ್ತು ನಾನು ಕೇಳುತ್ತಿದ್ದೇನೆ. ಅದಕ್ಕೆ ನೀವು ಉತ್ತರ ಕೊಡಬೇಕು. ಏಕೆಂದರೆ, ಸುಮ್ಮನೆ ಅವರು ಸ್ವಾರ್ಥಕ್ಕೆ ಕರೆದಿದ್ದಾರೆ, ಹೋಗಬೇಕೆನ್ನತಕ್ಕ ದೃಷ್ಟಿಯಿಂದ ನೀವು ಹೇಳಿದರೆ, ನಾವು ಅದನ್ನು ಒಪ್ಪುವುದಿಲ್ಲ. ನಾನು ಪದೇ ಪದೇ ಹೇಳುತ್ತಿದ್ದೇನೆ, ನೀವು ಹೋಗಿದ್ದುದು ಏಕೆಂದರೆ, ನೀವು ಹೋಗಿದ್ದೇ ಅವರಿಗೆ ಖುಷಿ ಪಡಿಸುವುದಕ್ಕೆ, ನೀವು ಹೋಗಿದ್ದೇ ನಿಮ್ಮ ಪ್ರಧಾನ ಮಂತ್ರಿಯವರ ಖುರ್ಚಿ ಭದ್ರವಾಗಿರಲಿ ಎಂದು, ನೀವು ಹೋಗಿದ್ದು ಅಲ್ಲಿ ಅವರು ಭದ್ರವಾಗಿದ್ದರೆ, ಇಲ್ಲಿ ಮುಖ್ಯಮಂತ್ರಿ ಭದ್ರವಾಗಿರುತ್ತಾರೆನ್ನುವ ದೃಷ್ಟಿಯಿಂದ. ಇಲ್ಲದಿದ್ದರೆ, ರಾಜ್ಯದ ಹಿತವೇನು ಅಡಗಿದೆ ಹೇಳಿ? ಈ ಅನ್‌ಕಾನ್‌ಸ್ಟಿಟ್ಯೂಷನಲ್ ಕಮಿಟಿಗೆ ಅಥವಾ ಇಲ್ಲೀಗಲ್ ಕಮಿಟಿಗೆ, ಕಾನೂನುಬಾಹಿರವಾದಂಥ ಕಮಿಟಿಗೆ ಒಪ್ಪಿಗೆ ಕೊಡತಕ್ಕ ಪ್ರಶ್ನೆ ಇಲ್ಲಿ ಏಕೆ ಉದ್ಭವಾಗುತ್ತಿತ್ತು? ಇದಕ್ಕೆ ನೀವು ಒಪ್ಪಿಗೆ ಕೊಟ್ಟಿರಿ ಅಂದರೆ ನಿಮ್ಮ ಖುರ್ಚಿಗಳನ್ನು ಭದ್ರಪಡಿಸಿಕೊಳ್ಳುವುದಕ್ಕೋಸ್ಕರ ಇವತ್ತು ಮಾಡಿದ್ದು. ಇವತ್ತು ಪ್ರಧಾನಮಂತ್ರಿಗಳು ಹೇಳಬಹುದು, ನಾನು ಇದರಲ್ಲಿ ಇಂಟರ್‌ಫಿಯರ್ ಆಗಿಲ್ಲವೆಂದು. ಆದರೆ, ಶ್ರೀ ಚಂದ್ರಬಾಬುನಾಯ್ಡುರವರು ಸ್ಪಷ್ಟವಾಗಿ...

ಶ್ರೀ ಸಿ.ಬೈರೇಗೌಡ : ಅಲ್ಲಿ ಖುರ್ಚಿ ಭದ್ರವಾಗಿರೋದು ನಿಮ್ಮಿಂದಾನೇ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಲ್ಪ ಕೇಳಿ. ನೀವು 43 ಜನ ಇದ್ದಿರಲ್ಲಾ, ನಾವು ಸಹಕಾರ ಕೊಟ್ಟಿದ್ದುದು ಒಂದು ತತ್ವದ ದೃಷ್ಟಿಯಿಂದ, ಈ ದೇಶವನ್ನೆಲ್ಲಾ ಮಾರಿಕೊಳ್ಳಿ, ಕೃಷ್ಣಾ ನದಿ ನೀರನ್ನು ಅವರಿಗೇ ಕೊಟ್ಟುಬಿಡಿ, ಕಾವೇರಿ ನದಿ ನೀರನ್ನು ಕರುಣಾನಿಧಿಗೆ ಕೊಡಿ ಮತ್ತು ಚಂದ್ರಬಾಬು ನಾಯ್ಡು ಹೇಳಿದ ಹಾಗೆಲ್ಲಾ ಕೇಳಿ ಎಂದು ಹೇಳಿ ಮಾಡಿದ್ದೇವೆಯೇ ? I will ask, ನೀವು ಏಕೆ ಹೋಗಿದ್ದು ? ನಿಮಗೆ ನಾಚಿಕೆ ಬರಲಿಲ್ಲವೆ? ನಾನು ಕೇಳುತ್ತೇನೆ ಅಧ್ಯಕ್ಷರೆ, ಇಂತಹ ಮೀಟಿಂಗ್‌ಗಳಿಗೆ ಹೋಗಬೇಕೆಂದು ಯಾವ ಕಾನೂನಿನಲ್ಲಿದೆ ?

ಶ್ರೀ ಅರಗ ಜ್ಞಾನೇಂದ್ರ : ಈಗಲಾದರೂ ಅವರು ಸಪೋರ್ಟನ್ನು ವಿತ್‌ಡ್ರಾ ಮಾಡುತ್ತಾರೆಯೇ ಎಂಬುದನ್ನು ಕೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋಡಿ ಲಘುವಾಗಿ ತೆಗೆದುಕೊಳ್ಳಬೇಡಿ. ವಿತ್‌ಡ್ರಾ ಮಾಡಿಕೊಳ್ಳುವಾಗ ವಿತ್‌ಡ್ರಾ ಮಾಡಿಕೊಳ್ಳೋಣ. ಅದು ನಮಗೆ ಬಿಟ್ಟ ನಿರ್ಧಾರ.

ಶ್ರೀ ಅರಗ ಜ್ಞಾನೇಂದ್ರ : ತಾರಕಾಸುರನಿಗೆ ವರ ಕೊಟ್ಟಿದ್ದರಲ್ಲಾ. ಭಸ್ಮಾಸುರನಿಗೆ ಕೊಟ್ಟ ವರವನ್ನು ವಾಪಸ್ ಪಡೆಯಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜ್ಯದ ಹಿತದೃಷ್ಟಿಯಿಂದ ಇವತ್ತು ನಾನು ಹೇಳುತ್ತಿದ್ದೇನೆ. ಈಗ ಅನೇಕ ಸಾರಿ ವ್ಯತ್ಯಾಸಗಳು ಬರುತ್ತವೆ. ನೀವು ಬಹುಜನ ಸಮಾಜದವರು ದಿನಾ ಹೊಡೆದಾಡುತ್ತಿದ್ದೀರಿ. ನಿಮ್ಮನ್ನು ಜಾತಿವಾದಿ ಅನ್ನುತ್ತಿದ್ದರು. ನಿಮ್ಮ ಸಮೀಪವೇ ಬರುವುದಿಲ್ಲವೆನ್ನುತ್ತಿದ್ದರು. ಇವತ್ತು ಒಬ್ಬರಿಗೊಬ್ಬರು ದೋಸ್ತಿಯಾಗಿದ್ದೀರಿ. ಇರಲಿ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ನಿಮ್ಮದು ಏನು ಎಂದು ದೇಶಕ್ಕೆ ಗೊತ್ತಾಗಿದೆ.

ಅಧ್ಯಕ್ಷರು : ಈಗ ಖರ್ಗೆಯವರೇ, You should be very careful when Mr. Byregowda gets up...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆ?

ಅಧ್ಯಕ್ಷರು : ಅವರು ಎದ್ದಿದ್ದೇ ನಿಮ್ಮನ್ನು ಡೀವಿಯೇಟ್ ಮಾಡುವುದಕ್ಕೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅವರು ಡೀವಿಯೇಟ್ ಮಾಡಿದರೂ ಕೂಡ ಈ ರಾಜ್ಯದ ಜನತೆ ಕ್ಷಮಿಸುವುದಿಲ್ಲ. ಇವರು ಮಾಡಿದಂಥ ತಪ್ಪಿಗೆ ಅವರು ಹೇಳಿಕೊಳ್ಳಬಹುದು. ನನಗೆ ಗೊತ್ತಿದೆ ಇವರು ಲೈಟಾಗಿ ತೆಗೆದುಕೊಳ್ಳುತ್ತಾರೆಂದು.

ಶ್ರೀ ಡಿ. ವಿ. ಸದಾನಂದಗೌಡ : ಜನ ನಿಮ್ಮನ್ನೂ ಕ್ಷಮಿಸುವುದಿಲ್ಲ. ನೀವು ಯಾರನ್ನೂ ಬೆಂಬಲ ಮಾಡಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ದಿವಸ ಬೆಂಬಲ ಮಾಡುತ್ತೀರಲ್ಲಾ, ಸುಮ್ಮನೆ ಇರಿ. ಇದೆಲ್ಲಾ ಆಗಿದ್ದೇ ನಿಮ್ಮಿಂದ. Don't tell me all that. ಅದಕ್ಕೆ ಅಧ್ಯಕ್ಷರೆ, ಅವರು ಡೀವಿಯೇಟ್ ಮಾಡುತ್ತಾರೆಂದು ನನಗೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಹಗುರವಾಗಿ ತೆಗೆದುಕೊಂಡು ಮಾತನಾಡಿ ಮುಗಿಸುತ್ತಾರೆಂದು ನನಗೆ ಗೊತ್ತು. ಆದರೆ, ಇದರ ಮಹತ್ವ ಏನೆಂಬುದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು. ಒಂದು ಸಾರಿ ನಾವು ಇದರ ಬಗ್ಗೆ ಚಿಂತನೆ ಮಾಡದೇ ಹೋದರೆ, ಸರಿಯಾದ ರೀತಿಯಿಂದ ನೋಡಿಕೊಳ್ಳದೇ ಹೋದರೆ ಇದರ ಪರಿಣಾಮ ಏನಾಗುತ್ತದೆನ್ನತಕ್ಕದ್ದು ಇವತ್ತಿನ ದಿವಸ

ಇದರಲ್ಲಿ ಅಡಗಿದೆ. ಇದರ ಪರಿಣಾಮ ಈಗಾಗಲೇ ಹೊರಗೆ ಬಂದಿದೆ. ನಾವು ಸುಮ್ಮನೆ ತಾತ್ವಿಕವಾಗಿ ಅಥವಾ ಫ್ರೆಂಡ್‌ಶಿಫ್‌ಗೋಸ್ಕರ ಇವತ್ತು ಏನು ಒಂದು ಅನ್‌ಅಫಿಷಿಯಲ್ ಕಮಿಟಿ ಇದೆ, ಇದರಿಂದ ಇವತ್ತಿನ ದಿವಸ ಯಾವ ಒಂದು ತೊಂದರೆ ಕೂಡ ಆಗುವುದಿಲ್ಲವೆಂದು ಹೇಳಿ ಸುಮಾರು...

ಶ್ರೀ ಡಿ.ವಿ. ಸದಾನಂದಗೌಡ : ಹೊಸ ಸದಸ್ಯರಿಗೆ ಸ್ವಲ್ಪ ಉತ್ಸಾಹ ಜಾಸ್ತಿ ಇದೆ.

ಶ್ರೀ ಯು.ಆರ್. ಸಭಾಪತಿ : ಮಾಯವತಿಯೊಡನೆ xx ಮಾಡಿಕೊಂಡರಲ್ಲಾ ತಾಕತ್ತಿದೆಯೇ ನಿಮಗೆ? ಯಾವಾಗ xx ಮಾಡಿಕೊಳ್ಳುತ್ತೀರೋ, ಯಾವಾಗ ವಿಚ್ಛೇದನ ಕೊಡುತ್ತೀರೋ ಗೊತ್ತಿಲ್ಲ. ನಾವು ಆ ತರಹ ಮಾಡಿಲ್ಲ.

ಅಧ್ಯಕ್ಷರು : ಅಲ್ಲ, ನೋಡಿ, ಸಭಾಪತಿಯವರು ಮಾಯಾವತಿ ಬಗ್ಗೆ ಏನು ಹೇಳಿದ್ದಾರೆ. ಅದೆಲ್ಲಾ ರೆಕಾರ್ಡ್‌ಗೆ ಹೋಗುತ್ತದೆ. ದಯಮಾಡಿ ತಾವು ಯಾರೂ ಬರೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ಇವರು ಮಡಿವಂತಿಕೆಯ ಮಾತನಾಡುತ್ತಾರೆ. ಇಲ್ಲಿ ರಾಜ್ಯದ ಪ್ರಮುಖವಾದ ಪ್ರಶ್ನೆ ಬಗ್ಗೆ ವಿರೋಧಪಕ್ಷದ ನಾಯಕರು ಮಾತನಾಡುವಾಗ ತುಚ್ಚೀಕರಣದ ರೀತಿಯಲ್ಲಿ ಮಾತನಾಡುತ್ತಾರಲ್ಲಾ, ಇವರಿಗೆ ರಾಜ್ಯದ ಜನತೆ ಬಗ್ಗೆ ಹೆಚ್ಚು ಹಿತಾಸಕ್ತಿ ಇದೆಯೇ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಅದೆಲ್ಲಾ ಇದ್ದುಕೊಳ್ಳಲಿ, ಅವರು ಕುಮಾರಿಯವರು. ಅವರು ಒಂದು ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ಅವರ ವಿಚಾರದಲ್ಲಿ ಅವರು ಕುಮಾರಿಯವರಾ, ಲಗ್ನವಾಗಬೇಕೇ, ಬೇಡವೇ ಈ ಎಲ್ಲಾ ವಿಚಾರಗಳನ್ನು ನಾವು ಚರ್ಚೆ ಮಾಡುವುದು ಬೇಡ. ದಯಮಾಡಿ ಆ ಎಲ್ಲಾ ಪದಗಳನ್ನೂ ತೆಗೆದುಹಾಕಿ. ಪತ್ರಿಕೆಯವರಿಗೂ ಕೂಡ ನಾನು ವಿನಂತಿ ಮಾಡುತ್ತೇನೆ. Please don't carry any of these things. ನಮಗೆ ಗೊತ್ತಿದೆ. ಮದುವೆಯ ಬಗ್ಗೆ ಆಸಕ್ತಿ ಇರುವ ವಯಸ್ಸು ಆದರೆ, ಅದು ಇಲ್ಲಿ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದೆ. 24.9.90ರಲ್ಲಿ Major and Medium Irrigation Programme - Upper Krishna Project - Acceptance of Second revised Estimate. ಇದರ ಬಗ್ಗೆ, ನಮ್ಮ ಆಲಮಟ್ಟಿ ಡ್ಯಾಮ್ ಬಗ್ಗೆ ಮತ್ತು ನಮ್ಮ 528 ಮೀಟರ್ ಎತ್ತರಿಸತಕ್ಕದ್ದರ ಬಗ್ಗೆ ಇದರಲ್ಲಿ ಅಪ್ರೂವಲ್ ಕೊಟ್ಟಿದ್ದಾರೆನ್ನತಕ್ಕ ಮಾತನ್ನು ನಾನು ಪ್ರಸ್ತಾಪ ಮಾಡಿದ್ದೆ. ಅದೇ ರೀತಿಯಾಗಿ, J.N. Nanda, Deputy Advisor, & Secretary, Planning. ಇದು ಆಮೇಲೆ, Upper Krishna Hydro-Electric project - in principle clearance... 17.1.96ರಲ್ಲಿ `This has reference to your letter dated 10-12-1995 requesting therein to issue in principle clearance for the above project. The above proposal

---

xx ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

has been examined and it is informed that scheme is agreed in principle to facilitate the company to proceed with various commercial and financial tie-ups arrangements for the project..ಅಂದರೆ, ಹೈಡ್ರೋ ಎಲೆಕ್ಟ್ರಿಕ್ ಪಾಜೆಕ್ಟ್‌ನ್ನು ತೆಗೆದುಕೊಳ್ಳಲಿಕ್ಕೆ ನಿಮಗೆ ನಾವು ಇನ್ ಪ್ರಿನ್ಸಿಪಲ್ ಅಪ್ರೂವಲ್ ಕೊಡುತ್ತೇವೆ. ನೀವು ಈ ಕಮರ್ಷಿಯಲ್ ಮತ್ತು ಫೈನಾಷಿಯಲ್ ಇನ್‌ಸ್ಟಿಟ್ಯೂಷನ್ಸ್ ಜೊತೆಯಲ್ಲಿ ತಾವು ಮಾತನಾಡಿಕೊಳ್ಳಬಹುದು ಅಥವಾ ಅರೇಂಜಮೆಂಟ್ಸ್ ಮಾಡಿಕೊಳ್ಳಬಹುದು ಎಂದು ಹೇಳಿ, ದಿ:17.1.96ರಲ್ಲಿ ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರು ಪತ್ರ ಕೊಟ್ಟಿದ್ದಾರೆ. ಇದರಲ್ಲಿ ಅವರು ಮುಂದೆಯೂ ಕೂಡ ಹೇಳಿದ್ದಾರೆ.

``Tie-up of balance input or clearance in favour of M/s Chamundi Power Private Limited. Submission of reasonable firmed up cost estimates of the project along with finance package" ಇದನ್ನು ಜಿ.ವಿ. ಸಿಂಗ್, ಸೆಕ್ರೆಟರಿ, ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿರವರು ಈ ಪತ್ರ ಬರೆದಿದ್ದಾರೆ. ಅಂದರೆ, ಒಂದು ಕಡೆ 1990ರಲ್ಲಿ ಆಲಮಟ್ಟಿ ಡ್ಯಾಮ್ ಹೈಟ್‌ನ್ನು ತಾವು ಎತ್ತರಿಸಬಹುದು ಎನ್ನತಕ್ಕಂಥದ್ದಕ್ಕೆ ಪರ್ಮಿಷನ್ ಕೊಡತಕ್ಕಂಥದ್ದು, ಎರಡನೆಯದು, ಹೈಡ್ರೋ ಎಲೆಕ್ಟ್ರಿಕ್‌ಪ್ರಾಜೆಕ್ಟ್ ಇದನ್ನು ಕೂಡ ತಾವು ತೆಗೆದುಕೊಳ್ಳಬಹುದೆಂದು ಹೇಳಿ ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್ ಅನ್ನು ದಿ:17.1.96ರಂದು ಕೊಟ್ಟಿದ್ದಾರೆ ಈ ಮಧ್ಯದಲ್ಲಿ ಪುನಃ ಅಪ್ಪರ್ ಕೃಷ್ಣ ಸ್ಟೇಜ್-(2), ಮಲ್ಟಿ ಪರ್ಪಸ್ ಪ್ರಾಜೆಕ್ಟ್ ಎಂದು ಹೇಳಿ, ಅಂದರೆ ನೀರಾವರಿ ಮತ್ತು ಹೈಡ್ರೋ ವಿದ್ಯುತ್ ಉತ್ಪಾದನೆ ಮಲ್ಟಿಪರ್ಪಸ್ ಸ್ಕೀಂ ಎಂದು ಹೇಳಿ4-7-1996ರಲ್ಲಿ ಅದಕ್ಕೆ ಕೂಡ ಒಪ್ಪಿಗೆ ಕೊಟ್ಟಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

"Reference to invite your attention to the above referred letter vide DPR. of Upper Krishna Stage -II Multipurpose project which received in CWC for techno-economic approval. The Project Report has been examined by the Gates Design Division and cleared by the Gates Design subject to compiance of certain observations"

The Gates and Designs Division have approved it into.

ಅಂದರೆ ಕೆಲವು ಅಬ್ಸರ್ವೇಷನ್ ಮಾಡಿದ್ದಾರೆ. ಸುಮಾರು 509 ಅಡಿ ಎತ್ತರದ ಮೇಲೆ ಏನು 15 ಮೀಟರ್ ಗೇಟ್ ಕೂಡಿಸಬೇಕು, ಅದು ಯಾವ ಟೈಪ್ ಗೇಟ್‌ನ್ನು ಕೂಡಿಸಬೇಕು, ಅದರ ಅಗಲ ಎಷ್ಟಿರಬೇಕು? ಅದರ ಲೆಂಗ್ತ್ ಎಷ್ಟಿರಬೇಕು? ಅದರ ಸ್ಟ್ರೇಂಗ್ತ್ ಹೇಗಿರಬೇಕು ಎನ್ನತಕ್ಕಂಥದ್ದರ ಬಗ್ಗೆ ಗೇಟ್ಸ್ ಮತ್ತು ಡೈಸೈನನವರೇ ಇದನ್ನು ಅಪ್ರೂವಲ್ ಮಾಡಿ, ಸರ್ಟನ್ ಮಾಡಿಫಿಕೇಷನ್ ಮಾಡಿ ಅವರು ಸ್ಪಷ್ಟವಾಗಿ ಈ ಒಂದು ವರದಿಯನ್ನು ಕೊಟ್ಟಿದ್ದಾರೆ. ಮತ್ತು ಎಸ್.ಕೆ. ಪಂಡಿತ್, ಡೈರೆಕ್ಟರ್ ಇನ್‌ಚಾರ್ಜ್ ಅವರು ಏನು ಹೇಳುತ್ತಾರೆಂದರೆ ``Subject to satisfactory compliance of above observations, the project report may be treated as cleared".

ಅವರು ಕೇವಲ ಡಿಸೈನ್ಸ್ ಬಗ್ಗೆ ಎಷ್ಟು ಎತ್ತರದ ಗೇಟ್ ಹಾಕಬೇಕು, ಅಂದರೆ ಸ್ಟ್ರೆಂಗ್ತ್ ಯಾವುದು ಇರಬೇಕು ಇದೆಲ್ಲವನ್ನು ಕೂಡ ಡಿಸೈನ್ ಡೈರೆಕ್ಟರ್‌ರವರಿಂದ ನೀವು ಅಪ್ರೂವ್ ಮಾಡಿಕೊಂಡು ಡಿಸೈನ್ಸ್ ಡೈರೆಕ್ಟರ್‌ರವರರಿಂದ ತೆಗೆದುಕೊಂಡು ಹೋಗಬೇಕು ಎನ್ನುವ ಮಾತನ್ನು ಮಾತ್ರ ಹೇಳಿದ್ದಾರೆಯೇ ಹೊರತಾಗಿ, ಅವರು ಡ್ಯಾಂನ ಎತ್ತರದ ಬಗ್ಗೆಯಾಗಲಿ, ಅಥವಾ ಕ್ಲಿಯರೆನ್ಸ್ ಬಗ್ಗೆಯಾಗಲಿ, ಅಥವಾ ಎಲೆಕ್ಟ್ರಿಸಿಟಿ ಉತ್ಪಾದನೆ ಬಗ್ಗೆಯಾಗಲಿ ಅಥವಾ ಕಾಸ್ಟ್ ಬಗ್ಗೆಯಾಗಲಿ ಇದು ಯಾವುದನ್ನು ಕೂಡ ಅವರು ಹೇಳಿಲ್ಲ, ಆ ಲೆಟರ್ ಕೂಡ ಅವರ ಹತ್ತಿರ ಇದೆ. ಸೆಂಟ್ರಲ್ ವಾಟರ್ ಕಮೀಷನ್ ಗೇಟ್ಸ್ ಡಿಸೈನ್ಸ್ (ಎನ್‌ಡಬ್ಲ್ಯೂ ಎಸ್: ಡಿಹೆಚ್‌ಓ) ಎನ್ನತಕ್ಕಂಥ ಈ ಪತ್ರ ಡೈರೆಕ್ಟರ್‌ವರಿಂದ ಈಗಾಗಲೇ ಬಂದಿದೆ. ಈ ಪತ್ರ ಕೂಡ ನಿಮ್ಮ ಹತ್ತಿರ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಉತ್ತರವಾಗಿ ಮುಂದೆ ಡೈರೆಕ್ಟರ್‌ರವರೂ ಕೂಡ ಆ ಅಪ್ರೂವಲ್ ಕೊಟ್ಟು ವಾಪಸ್ಸು ಕಳುಹಿಸಿದ್ದಾರೆ. ಈ ಎಲ್ಲಾ ದಾಖಲೆಗಳು ನಿಮ್ಮ ಹತ್ತಿರ ಇದ್ದರೂ ಕೂಡ ಇವತ್ತು ಯಾವ ಕಾರಣಕ್ಕಾಗಿ ತಾವು ಆಂಧ್ರಪ್ರದೇಶದ ಮುಖ್ಯಮಂತ್ರಿಯವರ ಮಾತಿಗೆ ಮನ್ನಣೆ ಕೊಟ್ಟು ಅಥವಾ ಸ್ಟೀರಿಂಗ್ ಕಮಿಟಿಯಲ್ಲಿರತಕ್ಕಂಥ ಮುಖ್ಯಮಂತ್ರಿಗಳ ಮಾತಿಗೆ ಮನ್ನಣೆ ಕೊಟ್ಟು ಇವತ್ತಿನ ದಿವಸ ತಾವು ಈ ಒಂದು ಎಕ್ಸ್‌ಪರ್ಟ್ ಕಮಿಟಿಗೆ ಒಪ್ಪಿಕೊಂಡಿರಿ? ಈ ಎಕ್ಸ್‌ಪರ್ಟ್ ಕಮಿಟಿಯನ್ನು ಒಪ್ಪಿಕೊಂಡಮೇಲೆ ಇವತ್ತಿನ ದಿವಸ ಈ ಸಮಸ್ಯೆ ಉದ್ಭವವಾಗಿದೆ. ಈ ಎಕ್ಸ್‌ಪರ್ಟ್ ಕಮಿಟಿ ಇಲ್ಲದೇ ಹೋಗಿದ್ದರೆ, ಈ ಅನಧಿಕೃತವಾದ ಕಮಿಟಿ ಅಸ್ತಿತ್ವದಲ್ಲಿ ಇಲ್ಲದೇ ಹೋಗಿದ್ದರೆ ಶ್ರೀಚಂದ್ರಬಾಬು ನಾಯ್ಡು ಅವರಿಗೆ ವಿರೋಧ ಮಾಡಲು ಧೈರ್ಯ ಬರುತ್ತಿರಲಿಲ್ಲ. ಇದಕ್ಕೆ ಖಂಡಿತವಾಗಿ ಅಡ್ಡಗಾಲು ಡ್ಯಾಂನ ಎತ್ತರವನ್ನು ಕಡಿತ ಮಾಡಬೇಕು, ಅದನ್ನು ಸ್ಥಗಿತಗೊಳಿಸಬೇಕು ಎನ್ನುವ ದೃಷ್ಟಿಯಿಂದಲೇ ಈ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿ ಅಣೆಕಟ್ಟಿನ ಗೇಟನ್ನು ಎತ್ತರಿಸುವ ಕೆಲಸವನ್ನು ನಿಲ್ಲಿಸತಕ್ಕಂಥ ಪ್ರಯತ್ನ ಮಾಡಿದರು. ಆ ಬಲೆಯಲ್ಲಿ ಇವತ್ತು ನಮ್ಮ ಸರ್ಕಾರ ಹೋಗಿ ಬಿದ್ದಿದೆ ಎನ್ನುವ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಇದರಿಂದ ಈ ರಾಜ್ಯದ ಜನರ ಹಿತವನ್ನು ಬಲಿ ಕೊಡತಕ್ಕಂಥ ಪ್ರಯತ್ನವನ್ನು ಇವರು ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಕೂಡ ಖಡಾಖಂಡಿತವಾಗಿ ಹೇಳಬಯಸುತ್ತೇನೆ. ಇದೂ ಅಲ್ಲದೆ, ಇನ್ನೂ ಮುಂದೆ ಹೋಗಿ ಇವರು ಏನು ಮಾಡಿದರು ಎಂದರೆ, ವಿರೋಧ ಪಕ್ಷದವರಾದ ನಾವೆಲ್ಲರೂ ಕೂಡ ಈ ಒಂದು ಎಕ್ಸ್‌ಪರ್ಟ್ ಕಮಿಟಿಗೆ ವಿರೋಧ ಮಾಡಿದ್ದೇವೆ. ಬಿ.ಜೆ.ಪಿ.ಯವರು ವಿರೋಧ ಮಾಡಿದರು, ನಮ್ಮ ಕಮ್ಯುನಿಸ್ಟ್‌ನವರೂ ಸಹ ವಿರೋಧ ಮಾಡಿದರು. ಹೀಗೆ ನಾವೆಲ್ಲರೂ ಕೂಡ ಈ ಎಕ್ಸ್‌ಪರ್ಟ್ ಕಮಿಟಿ ಬರಬಾರದೆಂದು ಹೇಳಿದರೂ ಸಹ ಇವರು ಕೇಳಲಿಲ್ಲ. ಈಗ ಒಂದು ಪ್ರಶ್ನೆಯಾಗಿ ಉಳಿದಿದೆ. ಇನ್ನು, ಆಂಧ್ರಪ್ರದೇಶ ಹೈಕೋರ್ಟಿನಲ್ಲಿ ಆಲಮಟ್ಟಿ ಡ್ಯಾಂನ್ನು ಹೆಚ್ಚಿಸಬೇಕು ಅಥವಾ ಬೇಡವೇ ಎನ್ನುವುದರ ಬಗ್ಗೆ ಕೇಸ್ ಇದ್ದಾಗ ಕೇಂದ್ರ ಸರ್ಕಾರದವರೂ ಕೂಡ ಒಂದು ಅಫಿಡೆವಿಟ್ ಹಾಕಿದರು. ಕೇಂದ್ರ ಸರ್ಕಾರದವರು ಏನು ಅಫಿಡೆವಿಟ್ ಹಾಕಿದ್ದಾರೆಂದರೆ 'ಬಚಾವತ್ ಅವಾರ್ಡ್ ಪ್ರಕಾರ ಏನು ನೀರಿನ ಹಂಚಿಕೆಯಾಗಿದೆ, ಈ ಹಂಚಿಕೆಯನ್ನು 734 ಟಿಎಂಸಿ ಏನು ನಮಗೆ ಸಿಕ್ಕಿದೆ ಅದು ಯಾವುದೇ ರೀತಿಯಿಂದಾದರೂ ಕೂಡ ಆ ನೀರನ್ನು ನಾವು ಬಳಸಿಕೊಳ್ಳಬಹುದು' ಎನ್ನತಕ್ಕಂಥದ್ದನ್ನು ಅವರು ಸ್ಪಷ್ಟಪಡಿಸಿದ್ದಾರೆ.

I will read the following:

"Extracts form Counter affidavit of Central Water Commission dated 30th July 1996"

"The Krishna Water Disputes Tribunal, for brief, herein after called the KWDT has not imposed project-wise restrictions in its Final Order. The Tribunal in its report has also clarified that water has been allocated to each of three States enable and that subject to the conditions and restrictions placed, each state shall have the right to make beneficial use of water allocated to it in any manner it thinks proper. The Government of Karnataka have, accordingly, in 1993 made projectwise allocations for comprising a quantum of 700 TMC allocated by the Tribunal to that State out of the 75% dependable flow of 2060 Tmc of River Krishna at Vijayawada and the regeneration of 34 Tmc. The Upper Krishna Project State-(I) has been allocated 119 Tmc and States II, 54 Tmc giving a total utilisation of 173 Tmc.

The Government of Karnataka have recently submitted to the Central Water Commission the Upper Krishna Project, Stage-II a Multipurpose Project proposal envisaging raising of the Full Reservoir Level (FRL) at Almmatti Dam from the present 512.2 to 524.256 m to enable utilisation of 54 Tmc for irrigation and other purposed as envisaged in State-II. The top of the gate has been kept at 524.256 m and an indication has been made that the additional storage is for power generation. As per the project report, the total storage at Almatti and Narayanpur with level of 524 meter at Almatti works out to 226.96 Tmc and total utilisation proposed is 173 Tmc (For irrigation + industrial +Drinking water + Evaporation). This project is under examination in CWC. The Tribunal has clarified that all beneficial uses including uses for production of hydro-power are permitted to the extent specified in Clause V and subject to the conditions and restrictions mentioned in the Final Order and where the tail rate water after generation of electricity

is returned to the river, the Hydro electric use is considered as non-consumptive except for the losses in the water conductor system and storage".

11.00 ಪಿ.ಎಂ

ಈ ರೀತಿಯಾಗಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ, ವಿದ್ಯುತ್ ಉತ್ಪಾದನೆಗೆ ಸ್ಟೋರ್ ಮಾಡತಕ್ಕಂತಹ ನೀರನ್ನು, ಅದನ್ನು ಉಪಯೋಗಿಸಿದ್ದುದು ಎಂದು ತೆಗೆದುಕೊಳ್ಳಬಾರದು ಅಥವಾ ಅದನ್ನು ನೀರಾವರಿಗೆ ಉಪಯೋಗವನ್ನು ಮಾಡುತ್ತಾರೆಂದು ತಿಳಿದುಕೊಳ್ಳಬಾರದು. ಅದನ್ನು ವಿದ್ಯುತ್ ಉತ್ಪಾದನೆಯಾದ ನಂತರ ಅದನ್ನು ಯಥಾಪ್ರಕಾರವಾಗಿ ನದಿಗೆ ಬಿಟ್ಟು ಪುನಃ ಅವರಿಗೇ ಉಪಯೋಗವಾಗುತ್ತದೆ ಎನ್ನತಕ್ಕಂತಹ ಮಾತನ್ನು ಕೂಡ ಕೇಂದ್ರ ಸರ್ಕಾರದವರು ತನ್ನ ಅಫಿಡವಿಟ್‌ನಲ್ಲಿ ಹೈಕೋರ್ಟಿನ ಮುಂದೆ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಮಹಾರಾಷ್ಟ್ರದವರೂ ಸಹ ಕೊಟ್ಟಿದ್ದಾರೆ. ಇವರೆಲ್ಲರೂ ಕೂಡ ನಮ್ಮ ಪರವಾಗಿಯೇ ಇದ್ದರೂ ಕೂಡ ನೀವು ಏಕೆ ಅವರ ಜೊತೆಯಲ್ಲಿ ಮಾತುಕತೆಗೆ ಹೋದಿರಿ ಎಂದು ಕೇಳುತ್ತೇನೆ. ಇದೇ ನನಗೆ ಅರ್ಥವಾಗುತ್ತಿಲ್ಲ. ಕೇಂದ್ರ ಸರ್ಕಾರದವರು, ಸೆಂಟ್ರಲ್ ವಾಟರ್ ಕಮೀಷನ್‌ರವರು ಇವೊತ್ತು ವಿದ್ಯುಚ್ಛಕ್ತಿ ಬೋರ್ಡ್‌ನವರು ಎಲ್ಲರೂ ಕೂಡ ಅಪ್ರೂವಲ್ ಕೊಟ್ಟಮೇಲೂ ಕೂಡ ಯಾವ ಕಾರಣಕ್ಕಾಗಿ ಅವರ ಜೊತೆಯಲ್ಲಿ ನೀವು ಮಾತುಕತೆ ನಡೆಸತಕ್ಕಂಥದ್ದು ಮತ್ತೆ ಅನಧಿಕೃತವಾಗಿರತಕ್ಕಂಥ ಒಂದು ಎಕ್ಸ್‌ಪರ್ಟ್ ಕಮಿಟಿಗೆ ತಾವು ಮನ್ನಣೆಯನ್ನು ಕೊಡತಕ್ಕಂಥದ್ದು ಮಾಡದ್ದೀರಿ ? ಇದನ್ನು ನೀವು ಮಾಡಬೇಡಿ ಎಂದು ನಾವೆಲ್ಲರೂ ನಮ್ಮ ಅನೇಕ ಯುವ ಕಾಂಗ್ರೆಸ್‌ನವರೂ ಕೂಡ ತಾವು ಅಶೋಕ್ ಹೋಟೆಲ್‌ನಲ್ಲಿದ್ದಾಗ ನೀವು ಹೋಗಬಾರದು ಎಂದು ಹೇಳಿದೆವು. ಮತ್ತು ಜಾಗವನ್ನು ಕೂಡ ಅವರು ಹೋಗಿ ನೋಡುವುದಕ್ಕೆ ಅವಕಾಶವನ್ನು ಕೊಡಬಾರದು ಏಕೆ ಎಂದರೆ ಇದರಿಂದ ಮುಂದೆ ನಮಗೆ ಅನ್ಯಾಯವಾಗುತ್ತದೆ ಅವರು ತಪ್ಪಿ ಯಾವುದಾದರೂ ಒಂದು ವರದಿಯನ್ನು ಕೊಟ್ಟರೆ ಅದೇ ಒಂದು ಡಾಕ್ಯೂಮೆಂಟ್ ಆಗುತ್ತದೆ. ಎನ್ನತಕ್ಕಂತಹ ದೃಷ್ಟಿಯಿಂದ ಎಲ್ಲರೂ ಕೂಡ ಚಳುವಳಿಯನ್ನು ಮಾಡಿ ಸಿಲ್ಲಿಸತಕ್ಕಂತಹ ಪ್ರಯತ್ನವನ್ನು ಮಾಡಿದರೆ ಆಗ ಸರ್ಕಾರದವರು ಸಮರ್ಥನೆಯನ್ನು ಮಾಡಿಕೊಂಡರು. ಅವರು ಸುಮ್ಮನೆ ಬಂದು ನೋಡಿಕೊಂಡು ಹೋಗುತ್ತಾರೆ, ಅವರ ವರದಿಯನ್ನು ಕಸದ ಬುಟ್ಟಿಯಲ್ಲಿ ಬಿಸಾಕುತ್ತೇವೆ. ಅದಕ್ಕೆ ಯಾವುದೇ ವ್ಯಾಲ್ಯೂ ಕೂಡ ಇಲ್ಲ. 'No importance is attached' ಎನ್ನತಕ್ಕಂತಹ ಮಾತನ್ನು ಹೇಳಿದರು 'No importance is attached' ಎಂದು ಹೇಳತಕ್ಕಂಥವರು ಆಂಧ್ರಪ್ರದೇಶದ ವಿಧಾನಸಭೆಯಲ್ಲಿ ನಿರ್ಣಯ ಪಾಸ್ ಮಾಡಿದ ತಕ್ಷಣ, ಈ ಡ್ಯಾಕ್ಯೂಮೆಂಟ್‌ನ್ನು ಅಲ್ಲಿ ಇಟ್ಟ ತಕ್ಷಣ ಇಲ್ಲಿಯೂ ಒಂದು ನಿರ್ಣಯವನ್ನು ಮಾಡಬೇಕೆಂದು ಹೇಳಿದರಲ್ಲಾ ಇದು ಏಕೆ? ಏಕೆ ಈ ಪ್ರಶ್ನೆ ಬಂತು? ಇಲ್ಲಿಯವರೆಗೆ ಈ ಪ್ರಶ್ನೆಯೂ ಇರಲಿಲ್ಲ, ಇಲ್ಲಿಯವರೆಗೆ ಯಾರಾದರೂ ಒಂದು ಇದರ ಬಗ್ಗೆ ನಿರ್ಣಯವನ್ನು ಪಾಸ್‌ಮಾಡಿ ಎಂದರೆ, ನೀವೇ ಹೇಳುತ್ತಿದ್ದೀರಿ ಅವಶ್ಯಕತೆ ಇಲ್ಲ ಎಂದು Tribunal order is final. It is binding. Everybody knows it. ಇದು ಗೊತ್ತಿದ್ದು ಕೂಡ ನೀವು ಏಕೆ ಆ ಟ್ರಿಬ್ಯೂನಲ್ ಆರ್ಡರ್‌ನ್ನು ಮತ್ತೆ ಓಪನ್

ಮಾಡತಕ್ಕಂತಹ ರೀತಿಯಲ್ಲಿ ವರ್ತನೆ ಮಾಡಿದ್ದೀರಿ ಎನ್ನತಕ್ಕಂಥದ್ದೇ ಪ್ರಶ್ನೆ. ಟ್ರಿಬ್ಯೂನಲ್ ಆರ್ಡರ್ ಫೈನಲ್ ಇದೆ. ನಾವು ಮಾತುಕತೆಗೆ ತಯಾರಿಲ್ಲ ಎನ್ನುವಂತಹ ಮಾತನ್ನು ಹೇಳಬೇಕಾಗಿತ್ತು. ನಿಮ್ಮ ಗೆಳೆಯರು ಇದ್ದಾರೆಂದು ಕರುಣಾನಿಧಿಯವರಿಗೆ ಹೇಳಿದರಲ್ಲಾ ನಾವು 4-5 ಸುತ್ತಿನ ಮಾತುಕತೆಯನ್ನು ಆಡಿದ್ದೇವೆ. ಸೌಹಾರ್ದತೆಯಿಂದ ಮಾತುಕತೆಯನ್ನು ಆಡಿ ನಾವು ಬಗೆಹರಿಸಿಕೊಂಡರೆ ತಪ್ಪೇನು ಎಂದು ಹೇಳುತ್ತಿದ್ದೀರಿ, ಅವರು4-5 ಸುತ್ತಿನ ಮಾತುಕತೆಯಾದಮೇಲೆ ನಿಮ್ಮ ಹತ್ತಿರ ಅವರು ಏನು ಹೇಳಿದರು, ಇನ್ನು ಮೇಲೆ ಕರ್ನಾಟಕದವರ ಜೊತೆಯಲ್ಲಿ ಮಾತುಕತೆ ಆಡುವುದೇ ಇಲ್ಲ ಎಂದರು. ಏನು ಆಗುವುದು ಇದೆ ಅದು ಕೋರ್ಟ್‌ನಲ್ಲಿ ಅಥವಾ ಟ್ರಿಬ್ಯೂನಲ್‌ನಲ್ಲಿ ಆಗಲಿ, ಏಕೆಂದರೆ ಟ್ರಿಬ್ಯೂನಲ್‌ನಲ್ಲಿ ಅಧ್ಯಕ್ಷರು ಆಗುವವರೆಗೆ ಇವರ ಜೊತೆಯಲ್ಲಿ ಗೆಳೆತನ ಬೇಕಾಗಿತ್ತು. ಅಲ್ಲಿಯವರೆಗೆ ಶ್ರೀ ಹೆಚ್. ಡಿ. ದೇವೇಗೌಡರ ಜೊತೆಯಲ್ಲಿ, ಶ್ರೀ ಜೆ.ಹೆಚ್.ಪಟೇಲ್‌ರ ಜೊತೆಯಲ್ಲಿ ಮಾತನಾಡಿಕೊಂಡು ಇದ್ದರು, ಇವರು ಹೋಗಿ ಗಂಧದ ಹಾರವನ್ನು ಹಾಕಿದರು, ಅವರು ಕಾಂಚಿವರಂ ಶಾಲುಗಳನ್ನು ಇವರಿಗೆ ಹೊದಿಸಿದರು. ಈ ಒಂದು ಸೌಹಾರ್ದತೆಲ್ಲಿ ಇವರ 5 ಮೀಟಿಂಗ್‌ಗಳು ನಡೆದವು. ಬೆಂಗಳೂರಿನಲ್ಲಿ ದೆಹಲಿಯಲ್ಲಿ, ಮದ್ರಾಸ್‌ನಲ್ಲಿ ನಡೆಯಿತು. ಸಾಕಷ್ಟು ಇವೊತ್ತು ಬಗೆಹರಿದು ಹೋಯಿತೋ ಏನೋ ಎನ್ನುವಂತಹ ರೀತಿಯಲ್ಲಿ ಹೇಳಿದರು. ಮತ್ತು ನೀವು ವಿರೋಧಪಕ್ಷದವರನ್ನು ಮಾತುಕತೆಗೆ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಅದಕ್ಕಾಗಿ ಮಾತುಕತೆಯನ್ನು ಮಾಡುವಂತಹ ಅವಶ್ಯಕತೆ ಇಲ್ಲ ಎಂದು ಹೇಳಿದಾಗ ಗೇಲಿಯನ್ನು ಮಾಡಿದರು, ಆದರೆ ನಾನು ಹೇಳುವುದೇನೆಂದರೆ ಅದೇ ಕರುಣಾನಿಧಿಯವರು ಫುಲ್ ಬೆಂಚ್‌ಗೆ ಈ ಕೇಸನ್ನು ರೆಫರ್ ಮಾಡಿದ ಮೇಲೆ ಹೇಳುತ್ತಿದ್ದಾರೆ 250 ಟಿ.ಎಂ.ಸಿ. ನೀರನ್ನು ನಮಗೆ ಬಿಡಲೇಬೇಕು ಇಂಟೀರಿಯಂ ಅವಾರ್ಡ್ ಪಾಸ್ ಆಗಿದೆ, ಈ ಇಂಟೀರಿಯಂ ಅವಾರ್ಡ್ 1995ರಲ್ಲಿ ಪಾಸ್ ಆದಂಥದ್ದು ಅದನ್ನು ಆಚರಣೆಯಲ್ಲಿ ತರಬೇಕು ಎನ್ನತಕ್ಕಂಥದ್ದನ್ನು ಸ್ಪಷ್ಟವಾಗಿ ಹೇಳಿಕೊಂಡು ನಿಮ್ಮ ಮುಖಕ್ಕೆ ಮಸಿಯನ್ನು ಬಳಿದು ಇವೊತ್ತಿನ ದಿವಸ ಅವರು ಸ್ಪಷ್ಟವಾಗಿ ಕೋರ್ಟ್‌ನ ಮತ್ತು ಟ್ರಿಬ್ಯೂನಲ್ ಆಶ್ರಯದಲ್ಲಿ ತನ್ನ ಹಕ್ಕನ್ನು ಚಲಾಯಿಸಿಕೊಳ್ಳುವಂಥದ್ದನ್ನು ಮಾಡುತ್ತಿದ್ದಾರೆ. ಅದಕ್ಕೆ ನಾನು ಹೇಳುತ್ತಿದ್ದೇನೆ.

ಯಾವಾಗ ಅದು ನಮ್ಮ ಕಡೆ ಇತ್ತು ಈ ಹಕ್ಕು ಇವೊತ್ತು ಸಹ ಇದೆ ಆದರೆ ಈ ರೀತಿಯಾಗಿ ಇದ್ದರೂ ಕೂಡ ನೀವು ಕಾನೂನು ಬಾಹಿರವಾಗಿರತಕ್ಕಂತಹ ಸಮಿತಿಗೆ ಏಕೆ ಒಪ್ಪಿಗೆಯನ್ನು ಕೊಟ್ಟಿರಿ, ಒಪ್ಪಿಗೆ ಕೊಟ್ಟು ಇವೊತ್ತು ಅವರು ಸುಪ್ರೀಂ ಕೋರ್ಟ್‌ನಲ್ಲಿ ಎವಿಡೆನ್ಸ್ ರೂಪದಲ್ಲಿ ತೆಗೆದುಕೊಂಡು ಹೋಗತಕ್ಕಂತಹ ಪ್ರಯತ್ನವನ್ನು ಏನು ಮಾಡುತ್ತಿದ್ದಾರೆ ಅದಕ್ಕೆ ನೀವು ಮಾನ್ಯತೆಯನ್ನು ಏಕೆ ಕೊಟ್ಟಿರಿ? ಆಮೇಲೆ ನಾಳೆ ಏನು ಹೇಳುತ್ತಾರೆ ಆರು ಜನರ ಬಗ್ಗೆ ನಾನು ಈಗಾಗಲೇ ಏನು ಓದಿ ಹೇಳಿದೆ ಬಿಹಾರದವರು, ತಮಿಳುನಾಡಿನವರು, ಆಸ್ಸಾಂನವರು, ಇವೆರೆಲ್ಲಾ ಎಕ್ಸ್‌ಪರ್ಟ್ಸ್ ಅವರು ನಾಳೆ ಸುಪ್ರೀಂ ಕೋರ್ಟ್‌ನವರೂ ಕೂಡ ಈ ಒಂದು ವರದಿಯಿಂದ ಇನ್‌ಫ್ಲ್ಯೂಯೆನ್ಸ್ ಆಗುತ್ತಾರೆ ಎನ್ನತಕ್ಕಂತಹ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.

ಕೃಷ್ಣ, ಆಲಮಟ್ಟಿ ಡ್ಯಾಂ ಮತ್ತು ನಾರಾಯಣಪುರ, ಹಿಪ್ಪರಗಿಗೆ ಭೇಟಿಯನ್ನು ಕೊಟ್ಟಿದ್ದಾರೆ. ಇವುಗಳಿಗೆಲ್ಲಾ ಭೇಟಿಯನ್ನು ನೀಡಿದ ಮೇಲೆ ಖಂಡಿತವಾಗಿ ಇಂಪಾರ್ಷಿಯಲ್ ವರದಿ ಇದೆ

ಎನ್ನತಕ್ಕಂತಹ ಭಾವನೆ ಸುಪ್ರೀಂ ಕೋರ್ಟ್‌ಗೆ ಬರತಕ್ಕಂತಹ ರೀತಿಯಲ್ಲಿ ಈ ವರದಿಯನ್ನು ಕೊಟ್ಟಿದ್ದಾರೆ ಒಟ್ಟಾರೆ ಟೋಟಲಿ ಒನ್ ಸೈಡಡ್ ಇದೆ. ಒನ್ ಸೈಡೆಡ್ ವರದಿಯಾಗುತ್ತದೆಂದು ನಮಗೆ ಗೊತ್ತಿತ್ತು. ಆ ರೀತಿಯ ಸಮಿತಿಯು ಬೇಡ ಎಂದರೂ ಕೂಡ ಇವೊತ್ತು ಎವಿಡೆನ್ಸನ್ನು ಕ್ರಿಯೇಟ್ ಮಾಡುವುದಕ್ಕೆ ಕಾರಣಕರ್ತರು ಯಾರು ಎಂದರೆ ತಾವೇ ಅದಕ್ಕೆ ಹೊಣೆ. ತಾವು ಈ ಹೊಣೆಯನ್ನು ಹೊತ್ತುಕೊಳ್ಳಬೇಕಾಗುತ್ತದೆ, ತಾವು ಏನು ಒಂದು ಬೇಜವಾಬ್ಧಾರಿಯ ರೀತಿಯಲ್ಲಿ ನಡೆದುಕೊಂಡಿದ್ದೀರಿ ಇದನ್ನು you have to own it. ಈ ಜವಾಬ್ಧಾರಿಯನ್ನು ಹೊತ್ತಿಕೊಂಡಿರುವುದರಿಂದ ಅದಕ್ಕೇ ನಾನು ಹೇಳಿದ್ದುದು ಯಾವಾಗ ಒಂದು ಕಾನೂನು ಬಾಹಿರವಾದಂತಹ ಸಮಿತಿಗೆ ಮನ್ನಣೆಯನ್ನು ಕೊಟ್ಟು ಟ್ರಿಬ್ಯೂನಲ್‌ನಿಂದ ಫೈನಲ್ ಆರ್ಡರ್ ಇದ್ದರೂ ಕೂಡ ಅದನ್ನು ಕಡೆಗಣಿಸಿದಂತೆ ನಡೆದಂತಹ ವರ್ತನೆಯನ್ನು ನೋಡಿದಾಗ ಈ ಒಂದು ಕ್ಷಣವೂ ಕೂಡ ಅಧಿಕಾರದಲ್ಲಿ ಇರಬಾರದು ಎನ್ನತಕ್ಕಂಥದ್ದೇ ನನ್ನ ವಾದ. ಏಕೆಂದರೆ ಮುಂದುವರೆದರೆ ಮತ್ತೆ ಯಾವ್ಯಾವ ರೀತಿಯಲ್ಲಿ ಇದೇ ರೀತಿಯಲ್ಲಿ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೋ, ಕಾನೂನಿನಲ್ಲಿ ಒಂದು, ಇನ್ನೊಂದು ಕಡೆ ಒಂದು. ಅದಕ್ಕೆ ದಯವಿಟ್ಟು ಈ ರೀತಿಯಾಗಿ ನಡೆದುಕೊಳ್ಳತಕ್ಕಂಥದ್ದು ರಾಜ್ಯದ ಹಿತದೃಷ್ಟಿಯಿಂದ ಸರಿಯಿಲ್ಲ ಎನ್ನುವಂತಹ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ. ಮತ್ತು ಇವೊತ್ತು ಇಲ್ಲದೇ ಇರತಕ್ಕಂತಹ ಸಮಸ್ಯೆಯನ್ನು ಸೃಷ್ಟಿ ಮಾಡಿ ಅದಕ್ಕೆ ಈಗ ಯಾವ ಉಪಾಯದಿಂದ ಬಗೆಹರಿಸಬೇಕೆಂದು ಪ್ರಯತ್ನವನ್ನು ಮಾಡುತ್ತಿದ್ದೀರಿ. ಅಂದರೆ ಮುಂದಾಲೋಚನೆ ತಮಗೆ ಇಲ್ಲ ಎನ್ನತಕ್ಕಂಥದ್ದು ಇದರಿಂದ ಸ್ಪಷ್ಟ. ಮತ್ತು ಎಕ್ಸ್‌ಪರ್ಟ್ ಕಮಿಟಿಯವರು ಎಲ್ಲಾ ಪ್ರಾಜೆಕ್ಟ್‌ಗಳನ್ನು ನೋಡಿಕೊಂಡು ಎಲ್ಲಾ ವರದಿಯನ್ನು ನೋಡಿಕೊಂಡು ವರದಿಯನ್ನು ಕೊಟ್ಟವರ ಹಾಗೆ ಅವರೂ ಕೂಡ ವರ್ತನೆಯನ್ನು ಮಾಡಿದ್ದಾರೆ.

ಅವರು ಯಾವ ಕಾಗದಗಳನ್ನು ಗಣನೆಗೆ ತೆಗೆದುಕೊಂಡಿದ್ದಾರೆಂದರೆ, ಚಂದ್ರಬಾಬುನಾಯ್ಡುರವರಿಗೆ ಜ್ಞಾನೇಶ್ವರ ಮಿತ್ರರವರು ಬರೆದ ಒಂದು ಪತ್ರದ ಮೇಲೆ ಅವರು ವರದಿಯನ್ನು ಕೊಟ್ಟರು. ಅಂದರೆ ನನಗೆ ಆಶ್ಚರ್ಯ ಅವರು ಈ ರೀತಿಯಾಗಿ ಎರಡು ರಾಜ್ಯಗಳ ನೀರಿನ ಸಮಸ್ಯೆ ಕೇವಲ 2-3 ಪುಟದಲ್ಲಿ ಇದು ಬಗೆಹರಿಯತಕ್ಕಂಥದಾ? ಸೆಂಟ್ರಲ್ ಎಲೆಕ್ಟ್ರಿಕ್ ಬೋರ್ಡ್‌ನವರು ಏನು ಮನ್ನಣೆಯನ್ನು ಕೊಟ್ಟಿದ್ದಾರೆಂಬುದನ್ನು ನೋಡಿದಿರಾ? ವಿಶ್ವ ಬ್ಯಾಂಕ್‌ನವರು ಯಾವ ರೀತಿಯಾಗಿ ಅಪ್ರೂವಲ್ ಕೊಟ್ಟಿದ್ದಾರೆಂದು ನೋಡಿದಿರಾ? ವಿಶ್ವಬ್ಯಾಂಕ್‌ನಿಂದ ಸಾಲ ಸಿಗುವಾಗ ಯಾವ್ಯಾವ ಅಂಶವನ್ನು ಕೇಂದ್ರ ಸರ್ಕಾರದವರು ಪರೀಕ್ಷಿಸಿದರು ಎಂಬುದನ್ನು ನೋಡಿದಿರಾ ಅಥವಾ ಗೇಟ್ಸ್ ಅಂಡ್ ಡಿಸೈನ್ಸ್ ಡೈರಕ್ಟರೇಟ್ ಯಾವ ಆಧಾರದ ಮೇಲೆ ಕೊಟ್ಟಿದ್ದಾರೆಂಬುದನ್ನು ನೋಡಿದರಾ? ಏನೂ ಇಲ್ಲ ತರಾತುರಿಯಲ್ಲಿ 4 ಜನ ಮುಖ್ಯಮಂತ್ರಿಗಳು ಹೇಳಿದರೋ ಅದೇ ರೀತಿಯಾಗಿ ಒಂದು ವರದಿಯನ್ನು ಬರೆದುಕೊಂಡು ಹೋಗಿ ಅವರಿಗೆ ಕೊಟ್ಟು ಇವತ್ತಿನ ದಿವಸ ಶ್ರೀಮಾನ್ ಜೆ.ಹೆಚ್. ಪಟೇಲ್‌ರು ಹಗ್ಗವನ್ನು ಕೊಟ್ಟು ಕೈ ಕಟ್ಟಿಸಿಕೊಂಡು ಅವರಿಗೆ ಕೈಜೋಡಿಸಿಕೊಂಡು ನೀವು ಏನಾದರೂ ಮಾಡಿ ಎಂದು ಕೂತಿದ್ದಾರೆ. ಇಲ್ಲದಿದ್ದರೆ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಇವೊತ್ತು ಎಕ್ಸ್‌ಪರ್ಟ್ ಕಮಿಟಿಗೆ ಏನು ಅರ್ಥ ಇದೆ ಇದು ಕಾನೂನು ಬಾಹಿರ ಕಸದ ಬುಟ್ಟಿಯಲ್ಲಿ ಬಿಸಾಕುತ್ತೇವೆಂದು ಹೇಳಬಹುದು. ನಮಗೆ ಗೊತ್ತಿದೆ ಹಕೋರ್ಟ್, ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಎಂದು ಯಾರೋ ಒಂದು ಅರ್ಜಿಯನ್ನು ಕೊಟ್ಟರೂ

ಕೂಡ ಆ ಅರ್ಜಿಯನ್ನು ಎಂಟರ್‌ಟೈನ್ ಮಾಡಿ ಆ ಅರ್ಜಿಯ ಮೇಲೆ ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥದ್ದು ಎಲ್ಲಾ ಹೈಕೋರ್ಟ್‌ಗಳು, ಸುಪ್ರೀಂ ಮಾಡುತ್ತಿವೆ. ಸುಪ್ರೀಂ ಕೋರ್ಟ್‌ನ ಪಬ್ಲಿಕ್ ಇನ್‌ಟ್ರಸ್ಟ್ ಲಿಟಿಗೇಷನ್ ಮೇಲೆ ಪಿಟಿಷನ್ಸ್ ಮೇಲೆ ಇವೊತ್ತು ಎಕ್ಸಾಮಿನ್ ಮಾಡುವಾಗ ಇಂತಹ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಏನೋ ನಾಲ್ಕು ಜನ ಮುಖ್ಯಮಂತ್ರಿಗಳು, ಅವರು ಏನು ಸಾಮಾನ್ಯ ಮುಖ್ಯಮಂತ್ರಿಗಳು ಅಲ್ಲ.

ಸುಮಾರು 18-20 ವರ್ಷಗಳ ಅನುಭವವಿರುವ ಶ್ರೀಮಾನ್ ಜ್ಯೋತಿಬಸುರವರು, ದೊಡ್ಡರಾಜ್ಯವಾದಂತಹ ಬಿಹಾರದ ಮುಖ್ಯಮಂತ್ರಿ ಶ್ರೀಮಾನ್ ಲಾಲೂಪ್ರಸಾದ್ ಯಾದವ್ ರವರು, ತಮಿಳುನಾಡಿನ ಅತ್ಯಂತ ಹಿರಿಯ ಮುಖ್ಯಮಂತ್ರಿಯಾದಂಥ ಶ್ರೀ ಕರುಣಾನಿಧಿಯವರು, ಅಸ್ಸಾಂರವರು, ಅವರೆಲ್ಲರೂ ಸೇರಿ ಬೇರೆ ರಾಜ್ಯದವರು ನಮ್ಮ ಬಗ್ಗೆ ಏನು ಹೇಳುತ್ತಾರೆ? ಇದು ಇಂಪಾರ್ಷಿಯಲ್ ಎಕ್ಸ್‌ಪರ್ಟ್ ಕಮಿಟಿಯೇ? ಕರ್ನಾಟಕ-ಆಂಧ್ರಪ್ರದೇಶದ ಬಗ್ಗೆ ಅವರುಗಳಿಗೆ ಏನು ಆಸಕ್ತಿ ಇರುತ್ತದೆ? ಅವರು ಕೊಟ್ಟಿರುವಂಥ ವರದಿ ನಿಜ ಇರಬಹುದು ಎಂದು. ನಮ್ಮ ಇಡೀ ಭಾರತ ದೇಶದಲ್ಲಿ ಇರತಕ್ಕಂಥ ಎಲ್ಲಾ ಜನ ಅವರ ಮಾತಿಗೆ ಮನ್ನಣೆ ಕೊಡತಕ್ಕಂಥ ಸಾಧ್ಯತೆ ಇದೆ. ನೀವು ಎಷ್ಟೇ ಹೇಳಬಹುದು ಅಥವಾ ಡಿಲೇ ಮಾಡಬಹುದು ಅದನ್ನು ಕಸದ ಬುಟ್ಟಿಗೆ ಬಿಸಾಡಿ ಎಂದು ಹೇಳಬಹುದು. ಇದಕ್ಕೆ ನಾವು ಯಾವುದೇ ಮನ್ನಣೆಯನ್ನು ಕೊಡುವುದಿಲ್ಲ ಎಂದು ಹೇಳಬಹುದು, ಅದಕ್ಕೇ ನಾನು ತಮ್ಮನ್ನು ಕೇಳುತ್ತೇನೆ, ಈ ವರದಿ ಬಂದ ಮೇಲೆ ಅದನ್ನು ನೋಡಿದ ಮೇಲೆ ನೀವು ಜ್ಯೋತಿ ಬಸುರವರಿಗೆ ಪತ್ರವನ್ನು ಬರೆದು ಅದರಲ್ಲೂ ಕೂಡ ಸ್ಪಷ್ಟಪಡಿಸಿದ್ದೀರಿ, ವರದಿ ಏಕಪಕ್ಷೀಯವಾಗಿದೆ. ಇದನ್ನು ಗಂಭೀರವಾಗಿ ಅವರು ನೋಡಲಿಲ್ಲ, ಎಲ್ಲಾ ಅಂಶಗಳನ್ನು ತೆಗೆದುಕೊಂಡಿಲ್ಲ ಎನ್ನತಕ್ಕಂಥ ಮಾತನ್ನು ನಾವು ನಿಮ್ಮ ಪತ್ರದಲ್ಲಿ...

(ಗೊಂದಲ)

MR. SPEAKER : There was a gentleman agreement. ರಾಷ್ಟ್ರಪತಿಗಳು ಬರುತ್ತಿರುವುದರಿಂದ, ಈ ದಿನವೇ we had to pass the Resolution ಎಂದು ಹೇಳಿದ್ದೆ. Today, I have permitted them to continue the discussion. ಮೊದಲು ಆರತಕ್ಷತೆ ಮಾಡಿ ನಂತರ ಲಗ್ನಮಾಡುವ ಪದ್ಧತಿ ಇದೆಯಲ್ಲಾ, ಹಾಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಒಂದು ಪತ್ರವನ್ನೂ ಕೂಡ ತಾವು ಬರೆದಿರಿ, ಆ ಪತ್ರ ಏನು ಬರೆದಿದ್ದೀರಿ, ಎನ್ನತಕ್ಕಂಥದ್ದನ್ನು ಈ ಸದನದ ಮುಂದೆ ಇಡಿ. ಈ ಸದನಕ್ಕೂ ಗೊತ್ತಾಗಲಿ, ನಮಗೆ ಮೊದಲು ಹೇಳದಿರಿ.

ಶ್ರೀ ಜೆ.ಹೆಚ್. ಪಟೇಲ್ : ನೀವು ಕೇವಲ ಆ ಪತ್ರದ ಬಗ್ಗೆಯೇ ಹೇಳುತ್ತಾ ಹೋದರೆ ಹೇಗೆ?

ಶ್ರೀ ಕೆ.ಎನ್. ನಾಗೇಗೌಡ : ರೂಮ್‌ನಲ್ಲಿ ಹೇಳಿದ್ದನ್ನು ತಾವು ಇಲ್ಲಿ ಹೇಳುತ್ತಾ ಇದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೂಮ್‌ನಲ್ಲಿ ಹೇಳಿದ್ದನ್ನು ನಾನು ಇಲ್ಲಿ ಹೇಳಬಾರದಂತೆ, ಇದು ಮಾನ್ಯ ನಾಗೇಗೌಡರ ವಾದ. ನೀವು ಯಾವ ರೀತಿಯಾಗಿ ನಡೆದುಕೊಂಡಿದ್ದೀರಿ, ಎನ್ನುವುದು

ಗೊತ್ತಾಗಲಿ, ತಜ್ಞರ ಸಮಿತಿ ವರದಿಯ ವಿಚಾರ ಎಲ್ಲಾ ಪತ್ರಿಕೆಗಳಲ್ಲೂ ಬಹಿರಂಗವಾಗಿಯೇ ಬಂತು. ಪತ್ರಿಕೆಗಳಲ್ಲಿ ಬಂದಮೇಲೆ ನೀವು ಜ್ಯೋತಿ ಬಸುರವರಿಗೆ ಪತ್ರ ಬರೆದಿರಿ, ಆ ವರದಿಯಲ್ಲಿ ಏನಿದೆ ಅದನ್ನು ನಮಗೆ ಕೊಡಿ ಎಂದರೆ ಅದನ್ನು ಬಹಿರಂಗ ಪಡಿಸಬಾರದು, ನಾಳೆ ಅದು ಎಲ್ಲಾ ಪತ್ರಿಕೆಗಳಲ್ಲಿ ಬಂದು, ಅವರು ಸುಪ್ರೀಂ ಕೋರ್ಟಿಗೆ ಅದನ್ನು ಸಾಕ್ಷಿ ಎಂದು ತೆಗೆದುಕೊಂಡು ಹೋಗುತ್ತಿದ್ದಾರೆ, ನೀವು ಪತ್ರ ಏನು ಬರೆದಿರಿ? ಏಕೆ ಬರೆದಿರಿ? ನೀವು ಪತ್ರವನ್ನು ಬರೆದ ಮೇಲೆ ಇನ್ನೊಂದು ರುಜುವಾತು ಏನಾಯಿತು ಎಂದರೆ ಆ ವರದಿಗೆ ನೀವು ಮನ್ನಣೆ ಕೊಟ್ಟಿರಿ ಎಂದಾಯಿತು, ಮುಖ್ಯಮಂತ್ರಿಗಳಾಗಿ ನೀವು ಪತ್ರ ಬರೆದಿದ್ದೀರಿ, ಜೆ.ಹೆಚ್. ಪಟೇಲರು ಕೇವಲ ಒಬ್ಬ ಜನತಾದಳದ ಶಾಸಕರಾಗಿ ಆ ಪತ್ರವನ್ನು ಬರೆದಿಲ್ಲ, ನೀವು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಇನ್ನೊಂದು ರಾಜ್ಯದ ಮುಖ್ಯಮಂತ್ರಿಗಳಿಗೆ ಈ ಡಾಕ್ಯುಮೆಂಟ್‌ನ್ನು ರೆಫರ್ ಮಾಡಿ, ಈ ಡಾಕ್ಯುಮೆಂಟ್‌ನಲ್ಲಿರತಕ್ಕ ಅಂಶಗಳನ್ನು ತಿಳಿದುಕೊಂಡು ಅದರ ಮೇಲೆ ಕಾಮೆಂಟ್ಸ್ ಮಾಡಿ ನೀವು ಆ ಪತ್ರವನ್ನು ಬರೆದಿದ್ದೀರಿ, ಅದೂ ಕೂಡ ಅವರಿಗೆ ಒಂದು ಡಾಕ್ಯುಮೆಂಟ್ ಆಗಿ ಸಿಕ್ಕಿತು, ಅದು ನಿಮ್ಮ 2ನೇ ಸಾಕ್ಷಿ, ಮೊದಲನೆಯದು ಅನಧಿಕೃತ ತಜ್ಞರ ಸಮಿತಿಯ ವರದಿ, ಎರಡನೆಯದು ಅಧಿಕೃತವಾಗಿ ಮಾನ್ಯ ಮುಖ್ಯಮಂತ್ರಿಗಳು ಏನು ಪತ್ರ ಬರೆದಿದ್ದಾರೆ, ಅದು ಎಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿದೆ, ನಾಳೆ ಅದು ನಿಮ್ಮ ಸಮಿತಿ ಮುಂದೆ ಬರುತ್ತದೆ, ಮಾನ್ಯ ಚಂದ್ರಬಾಬುನಾಡ್ಡು ಅವರೂ ಕೂಡ ಅದರ ಪ್ರತಿಯನ್ನು ತೆಗೆದುಕೊಳ್ಳುತ್ತಾರೆ, ನಂತರ ಸುಪ್ರೀಂ ಕೋರ್ಟ್ ಮುಂದೆ ಆ ಪತ್ರವೂ ಕೂಡ ಹೋಗುತ್ತದೆ, ಹೀಗೆ ಒಂದಲ್ಲ ಹತ್ತಾರು ತಪ್ಪುಗಳನ್ನು ನೀವು ಮಾಡಿದ್ದೀರಿ, ನೀವು 14ನೇ ತಾರೀಖು ಬರೆದುಕೊಟ್ಟಿರಿ ಅವರು 14,15ನೇ ತಾರೀಖು ಇಲ್ಲಿಗೆ ಭೇಟಿ ಕೊಟ್ಟ ನಂತರ 16,17ನೇ ತಾರೀಖಿಗೆ ಆಂಧ್ರಪ್ರದೇಶದಲ್ಲಿ ಭೇಟಿ ಕೊಟ್ಟರು. ಇಷ್ಟಕ್ಕೆ ಇದು ನಿಲ್ಲಲಿಲ್ಲ, ಈ ಸಮಿತಿಯವರು ನಿಮ್ಮ ಅಧಿಕಾರಿಗಳನ್ನು ಕಲ್ಕತ್ತಕ್ಕೆ ಕರೆಯಿಸಿಕೊಂಡರು, ನಿಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿದ್ದೀರಿ, ಅಂದರೆ ಅವರೇನೂ ಟ್ರಿಬ್ಯೂನಲ್ಲೇ? ನಿಮ್ಮ ಕಾರ್ಯದರ್ಶಿಗಳು, ನಿಮ್ಮ ಮುಖ್ಯ ಅಭಿಯಂತರರು, ಎಲ್ಲರೂ ಅಲ್ಲಿಗೆ ಹೇಗೆ ಹೋದರು? 17-11-96ರಲ್ಲಿ ನಿಮ್ಮ ಅಧಿಕಾರಿಗಳೂ ಕಲ್ಕತ್ತಾಗೆ ಹೋದರು 2 ದಿವಸ ಹೋಗಿ ಸಾಕ್ಷಿ ಕೊಟ್ಟು ಬಂದರು, ಅವರು ವರದಿಯಲ್ಲಿ ಅದನ್ನು ಕೂಡ ಹೇಳಿದ್ದಾರೆ.

ಅಂದರೆ ಇಲ್ಲಿಂದ ಅಧಿಕಾರಿಗಳು ಬಂದು ಅವರ ನಿಲುವನ್ನು ವಿವರಣೆ ಮಾಡಿದರು ಎಂದು ಹೇಳಿದ್ದಾರೆ, ಅಂದರೆ ಈ ಕಲ್ಕತ್ತ ಏನು ಸುಪ್ರೀಂಕೋರ್ಟ್ ಅದು ಏನು ಕೃಷ್ಣಾ ವಾಟರ್ ಡಿಸ್ಪೂಟ್ ಟ್ರಿಬ್ಯೂನಲ್ಲೇ? ಒಂದು ಕಡೆ ನೀವು- ನೀವು ಮಾತನಾಡುವುದನ್ನು ಹೇಳಿದಿರಿ, ಆದರೆ ಒಂದು ಮಾತನ್ನು ನಾನು ಹೇಳುತ್ತೇನೆ, ನಮ್ಮ ಅಧಿಕಾರಿಗಳು, ಕಾರ್ಯದರ್ಶಿಗಳು ಯಾವ ಆಧಾರದ ಮೇಲೆ, ಯಾವ ಕಾನೂನಿನ ಮೇಲೆ ಕಲ್ಕತ್ತಾಗೆ ಹೋಗಿ ಸಾಕ್ಷ್ಯ ಕೊಟ್ಟು ತಮ್ಮ ಸಂಪೂರ್ಣವಾಗಿರತಕ್ಕಂತಹ ಎಲ್ಲಾ ರೆರ್ಕಾಡ್ಸ್‌ನ್ನು ತೆಗೆದುಕೊಂಡು ಹೋಗಿ ಅವರಿಗೆ ಒಪ್ಪಿಸಿದರು? ಸದನದಲ್ಲಿ ನಾವು ಕೇಳಿದರೆ ನಮಗೆ ನೀವು ರೆಕಾರ್ಡ್ಸ್ ಕೊಡುವುದಿಲ್ಲ, ನಮಗೆ ಬೇಕಾದ ಕಾಗದಪತ್ರಗಳನ್ನು ಕೊಡುವುದಿಲ್ಲ, ಅವರಿಗೆ ಬರೆದಂಥ ಪತ್ರದ ಸಾರಾಂಶ ಏನು ಎಂದೂ ಹೇಳುವುದಿಲ್ಲ, ಆದರೆ ಹೊರಗಿನ ಜನರಿಗೆ ನೀವು ಇವೊತ್ತಿನ ದಿವಸ ಎಲ್ಲಾ ಡಾಕ್ಯುಮೆಂಟ್‌ಗಳನ್ನು ಕೊಟ್ಟಿದ್ದೀರಿ ಆ ಡಾಕ್ಯುಮೆಂಟ್ಸ್‌ನ್ನು ಪರಿಶೀಲಿಸಿಯೇ

ಈ ನಿರ್ಣಯವನ್ನು ನಾವು ಕೊಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ, ಸ್ಕೀಮ್ (ಬಿ)ಯನ್ನು ಇಂಪ್ಲಿಮೆಂಟ್ ಮಾಡುವಂಥಾದ್ದು ಇನ್ನೂ ಮುಂದಿದೆ. ಈ ಆಲಮಟ್ಟಿ ಡ್ಯಾಮ್‌ನ ಎತ್ತರವನ್ನು ನಿಲ್ಲಿಸಬೇಕೆಂಬ ಮಾತನ್ನು ಹೇಳಿದ್ದಾರೆ, ನಿಮಗೆ ಎಷ್ಟು ನೀರು ಬೇಕೋ ಅಷ್ಟು ಮಾತ್ರ ಉಪಯೋಗ ಮಾಡಿಕೊಳ್ಳುವುದಕ್ಕೆ 518 ಮೀಟರ್ ಎತ್ತರ ಮಾತ್ರ ಸಾಕು ಎನ್ನತಕ್ಕಂಥ ಮಾತನ್ನು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಆದರೆ ಈ ರೀತಿ ಏಕಪಕ್ಷೀಯ ವರದಿಯನ್ನು ಕೊಡತಕ್ಕಂಥ ಜನರಿಗೆ ಮನ್ನಣೆಯನ್ನು ಕೊಟ್ಟು ಈ ರಾಜ್ಯದ ಹಿತವನ್ನು ಬಲಿಕೊಟ್ಟಿದ್ದೀರಿ, ನಾನು ಪ್ರಸ್ತಾಪ ಮಾಡತಕ್ಕಂಥ ಅನೇಕ ವಿಷಯಗಳು ಇದ್ದರೂ ಕೂಡ ಹೆಚ್ಚು ಸಮಯ ತೆಗೆದುಕೊಳ್ಳದೆ ಅವರಿಗೆ ಒಂದೇ ಮಾತಿನಲ್ಲಿ ಹೇಳುತ್ತೇನೆ, ನಾವು ಎಷ್ಟೇ ಹೇಳಿದರೂ ಕೂಡ ನೀವು ಹೇಳಿದ್ದೇ ಹೇಳುತ್ತೀರಿ ಎಂದು ಅವರು ಹೇಳುತ್ತಾರೆ, ನಾವು ಎಲ್ಲಾ ಹೊಸ ಅಂಶಗಳನ್ನು ಅದರ ಇತಿಹಾಸವನ್ನು ಹೇಳುವಾಗ ಬಹುಶಃ ಅವರು ಇರಲಿಲ್ಲ, ಎಂದು ಕಾಣುತ್ತದೆ, ಆದರೆ ಈ ಸರ್ಕಾರ ಒಂದು ಕೆಲಸವನ್ನು ಮಾಡಿದೆ, ಈ ರಾಜ್ಯದಲ್ಲಿ ಜನತೆಯನ್ನು ತಪ್ಪು ದಾರಿಗೆ ಎಳೆಯತಕ್ಕಂಥ ಪ್ರಯತ್ನವನ್ನು ಮಾಡಿದೆ, ಇದರ ಜೊತೆಗೆ ಅನಧಿಕೃತ, ಶಾಸನಬದ್ದವಲ್ಲದ, ನ್ಯಾಯಬಾಹಿರವಾದ ಈ ಸಮಿತಿಗೆ ಮಾನ್ಯತೆ ಕೊಟ್ಟು ಮತ್ತು ಅದಕ್ಕೆ ಸಂಪೂರ್ಣವಾಗಿರತಕ್ಕಂಥ ಎಲ್ಲಾ ರಿಕಾರ್ಡ್ಸ್‌ನ್ನು ಒದಗಿಸಿ ಇವತ್ತು ನಿಜವಾಗಿಯೂ ರಾಜ್ಯದ ಜನತೆಗೆ ವಿಶ್ವಾಸಘಾತುಕ ಕೆಲಸವನ್ನು ಇವರು ಮಾಡಿದ್ದಾರೆ, ಈ ಸದನಕ್ಕೂ ತಿಳಿಸದೇ ಒಳಗಿಂದೊಳಗೆ ತಮಗೆ ಬೇಕಾದ ರೀತಿಯಲ್ಲಿ ತಮ್ಮ ಕುರ್ಚಿಯನ್ನು ಭದ್ರಪಡಿಸುವುದಕ್ಕೋಸ್ಕರ, ಕೇಂದ್ರದಲ್ಲಿ ತಮ್ಮ ಪ್ರಧಾನ ಮಂತ್ರಿಗಳ ಕುರ್ಚಿಯನ್ನು ಉಳಿಸುವುದಕ್ಕೋಸ್ಕರ ಇವತ್ತಿನ ದಿವಸ ಆ ನಾಲ್ಕು ಜನ ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ಕೇಳಿ ನಮ್ಮ ಹಿತವನ್ನು ಬಲಿ ಕೊಟ್ಟಿದ್ದಾರೆ. ಇದಕ್ಕೆ ಸಂಪೂರ್ಣವಾಗಿ ತಾವೇ ಹೊಣೆಗಾರರು, ತಾವು ತಮ್ಮ ರಾಜೀನಾಮೆಯನ್ನು ಕೊಟ್ಟು ಸೀದಾ ಹೋಗಬೇಕು, ನೀವು ನಿಜವಾಗಿಯೂ ಒಂದು ಇತಿಹಾಸವನ್ನು ಸೃಷ್ಟಿಮಾಡಿದ್ದೀರಿ, ಅದೇನೆಂದರೆ ಈ ಶಾಸನಬದ್ಧವಲ್ಲದ ತಜ್ಞರ ಸಮಿತಿಗೆ ಮಾನ್ಯತೆಯನ್ನು ಕೊಟ್ಟು ನಮ್ಮ ಪಾಲಿಗೆ ಬರತಕ್ಕಂಥ ನೀರಿಗೆ ಅಡಚಣೆ ಮಾಡಿರತಕ್ಕಂಥದ್ದು ಮತ್ತು...

ಅಧ್ಯಕ್ಷರು : ನೀವು ಹೇಳಿಯೇ ಹೇಳುತ್ತಿದ್ದೀರಿ, ಆದರೆ ಅವರು ಏನೂ ಪ್ರತಿಕ್ರಿಯಿಸುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂಥ ಸೆನ್‌ಸೆಟೀವ್ ವಿಷಯದಲ್ಲಿ ಆಸಕ್ತಿ ಇರುವಂಥ ಮನುಷ್ಯ ಪ್ರತಿಕ್ರಿಯಿಸುತ್ತಾನೆ, ಆದರೆ ಅವರಿಗೆ ಏನಾದರೂ ಹಾಳಾಗಲಿ, ನಾನು ನನ್ನ ಅವಧಿಯಲ್ಲಿ ಮುಗಿಸುತ್ತೇನೆ ಎಂದರೆ ನಾವೇನು ಮಾಡಬೇಕು? ಅವರಿಗೆ ಇದರ ಬಗ್ಗೆ ಆಸಕ್ತಿ ಇಲ್ಲ, ಯಾರಾದರೂ ಮನುಷ್ಯ ತಪ್ಪು ಮಾಡಿದರೆ ನಾವೇನು ಟೀಕೆ ಮಾಡಿದರೂ ಅವರಿಗೆ ಏನೂ ಆಗುವುದಿಲ್ಲ, ಮತ್ತು ಈ, ಎಲ್ಲ ಘಟನೆಯಿಂದ ಈ ರಾಜ್ಯದ ನೀರಾವರಿ ಮೇಲೆ ದುಷ್ಪಪರಿಣಾಮ ಆಗುತ್ತದೆಂದು ಅವರಿಗೆ ಗೊತ್ತಿದ್ದರೂ ಕೂಡ ಒಂದು ಸೋಗು ಮಾಡಿದರೆ ಜನರು ಅವರಿಗೆ ಪಾಠ ಕಲಿಸುತ್ತಾರೆ, ಈ ಕರ್ನಾಟಕದ ಜನ ಬೀದಿಗೆ ಬರದೇ ಇರಬಹುದು, ಅಥವಾ ನಿಮ್ಮ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡದೇ ಇರಬಹುದು, ಅಥವಾ ನಿಮ್ಮಂಥವರು ಯಾರೂ ಪ್ರಚೋದನೆ ಕೊಟ್ಟು ಅವರನ್ನು ನಿಮ್ಮ ವಿರುದ್ಧ ನಿಲ್ಲಿಸದೇ ಇರಬಹುದು, ಆದರೆ ಕಳೆದ ಸಾರಿ ಚುನಾವಣೆ ಬಂದಾಗ ರಾಮನಗರದಲ್ಲಿ ಯಾವ

ರೀತಿಯಾಗಿ ಪಾಠ ಕಲಿಸಿದ್ದಾರೋ ಅದೇ ರೀತಿ ಪಾಠ ಕಲಿಸುತ್ತಾರೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ, ಇದು ಒಂದು ತಾಜಾ ಉದಾಹರಣೆ, ನಿಮ್ಮ ಕಾಲದಲ್ಲಿ ಏನಾಯಿತು, ಆ ಮಾತು ಹೇಳುತ್ತಿದ್ದೇನೆ.

ಕಳೆದ 9 ತಿಂಗಳಲ್ಲಿ ನಡೆದಂಥ ಘಟನೆ ತಾವೂ ಮತ್ತು ಮಾನ್ಯ ದೇವೇಗೌಡರು ಕೂಡಿಯೇ ಈ ರಾಜ್ಯದ ಹಿತವನ್ನು ಬಲಿ ಕೊಟ್ಟಿದ್ದೀರಿ ಎಂದು ನಾನು ಹೇಳುತ್ತೇನೆ, ನಿಮ್ಮ ಖುರ್ಚಿಯನ್ನು ಭದ್ರಪಡಿಸಲು ಚಂದ್ರಬಾಬುನಾಯ್ಡು ಅವರ ಮಾತಿಗೆ ಮಣಿದು ಶ್ರೀ ಜ್ಯೋತಿ ಬಸುರವರ ಮಾತಿಗೆ ಮಣಿದು ಈ ವರದಿಯನ್ನು ಸೃಷ್ಟಿ ಮಾಡಿ ಇವತ್ತು 528 ಮೀಟರ್‌ಗೆ ನಮ್ಮ ಆಲಮಟ್ಟಿ ಎತ್ತರವನ್ನು ನಿಲ್ಲಿಸತಕ್ಕಂಥ ಕುತಂತ್ರದಲ್ಲಿ ನೀವು ಕೂಡ ಷಾಮೀಲಾಗಿದ್ದೀರಿ, ಎನ್ನತಕ್ಕಂಥ ಮಾತನ್ನೂ ಕೂಡ ನಾನು ಇವೊತ್ತಿನ ದಿವಸ ಸ್ಪಷ್ಟಪಡಿಸುತ್ತೇನೆ. ಹೌದು, ಸರ್ಕಾರ ಕೂಡ ಷಾಮೀಲಾಗಿದೆ. ಇಲ್ಲದಿದ್ದರೆ ನೀವು ಅಲ್ಲಿಗೆ ಹೋಗುತ್ತಾ ಇರಲಿಲ್ಲ. ಅವರ ಹತ್ತಿರ ಮಾತನಾಡುತ್ತಿರಲಿಲ್ಲ. ಅದು ಒಂದನ್ನು ಬಿಟ್ಟು ಬೇರೆ ಏನಾದರೂ ಮಾತನಾಡಿ ನಾನು ತಯಾರಾಗಿದ್ದೇನೆ ಎಂದು ಹೇಳಬಹುದಾಗಿತ್ತು. ಅದರಿಂದ ನಿಮಗೆ ಏನು ಲಾಭವಾಯಿತು? ಈ ರಾಜ್ಯಕ್ಕೆ ಇವತ್ತು ರಾಜ್ಯದ ಜನರಿಗೆ ಏನು ಲಾಭ ಸಿಕ್ಕಿತು? ಹೆಚ್ಚಿಗೆ ನೀರು ಏನಾದರೂ ಸಿಕ್ಕಿತೇ? ಇವತ್ತು ನೀವು ಮಾಡಿರುವಂಥ ತಪ್ಪಿಗೆ ತಾವು ಪ್ರಾಯಶ್ಚಿತ್ತ ಮಾಡಿಕೊಳ್ಳಿ ಬೇಕಾದರೆ ಪ್ರಾಯಶ್ಚಿತ್ತ ಪಟ್ಟುಕೊಂಡು ಈಗಲಾದರೂ ತಾವು ರಾಜೀನಾಮೆ ಕೊಟ್ಟು ತಮ್ಮ ಸರ್ಕಾರ ಹೋಗುವುದೇ ಉತ್ತಮ. ಯಾರು ಸಮರ್ಥರಿದ್ದಾರೆ ಅವರು ಬಂದು ರಾಜ್ಯವನ್ನು ಆಳುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಎಪಿಎಂಸಿಯವರು ಹೇಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಎಪಿಎಂಸಿಯವರು ಹೇಳುತ್ತಾರೋ, ಮುಂದೆ ಅಸೆಂಬ್ಲಿ ಬಂದಾಗ ಹೇಳುತ್ತಾರೋ ಕಾದು ನೋಡೋಣ. ಎಪಿಎಂಸಿಯಲ್ಲಿ ಉತ್ತರ ಹೇಳುತ್ತಾರೆಂದರೆ ನೀವು 743 ಟಿಎಂಸಿ. ನೀರು ಅಲಾಟ್ ಆದದ್ದನ್ನೆಲ್ಲಾ ಕೊಟ್ಟಿಬಿಡಿ, ಇಲ್ಲ, ಬಿಟ್ಟುಬಿಡಿ. ಈಗ ಕಟ್ಟಿದಂಥ ಡ್ಯಾಂ ಏನಿದೆ ಅದು 509 ಮೀಟರ್‌ಗೆ ಬಂದಿದೆ ಅಥವಾ ಬರುತ್ತಿದೆ, ಅದನ್ನು ಒಡೆದು ನೀರು ಬಿಟ್ಟುಬಿಡಿ. ಏತಕ್ಕೆಂದರೆ ನಿಮಗೆ ಎಪಿಎಂಸಿಯವರು ಬೆಂಬಲ ಕೊಟ್ಟರು, ನಿಮಗೆ ಜಿಲ್ಲಾಪರಿಷತ್ತಿನವರು ಬೆಂಬಲ ಕೊಟ್ಟರು, ತಾಲ್ಲೂಕು ಪಂಚಾಯಿತಿಯವರು ಬೆಂಬಲ ಕೊಟ್ಟರು ಎಂದು ಅದನ್ನು ಮಾಡಿ. ನಿಮಗೆ ರಾಜ್ಯದ ಬಗ್ಗೆ ಕಿಂಚಿತ್ತಾದರೂ ಅಭಿಮಾನ ಇದ್ದರೆ, ಸ್ವಲ್ಪವಾದರೂ ಕಳಕಳಿ ಇದ್ದರೆ ಈ ಮಾತು ನಿಮ್ಮ ಬಾಯಿಂದ ಬರುವುದಿಲ್ಲ. ರಾಜಕಾರಣದಲ್ಲಿ ಸೋಲು ಗೆಲವು ಇದ್ದೇ ಇರುತ್ತದೆ. ಆದರೆ ಎಪಿಎಂಸಿ.ಯಲ್ಲಿ ಗೆದ್ದಾಕ್ಷಣ 4 ಕೋಡು ಬರುವುದಿಲ್ಲ; ಅಥವಾ ರಾಜ್ಯದ ಹಿತವನ್ನು ಬಲಿ ಕೊಡಬೇಕೆಂದು ಇಲ್ಲ. ಅದಕ್ಕೆ ನಾನು ಸರ್ಕಾರದ ರಾಜೀನಾಮೆಯನ್ನು ಕೇಳುತ್ತೇನೆ. ಇದಕ್ಕೆ ಅವರು ಸ್ಪಂದಿಸಿ ರಾಜೀನಾಮೆ ಕೊಡುತ್ತಾರೆ. ಅವರು ಬಹಳ ಸೆನ್ಸಿಟೀವ್ ಇದ್ದಾರೆ, ಅವರು ಯಾವಾಗಲೂ ನನಗೆ ತತ್ವದ ಮೇಲೆ ನೀತಿಯ ಮೇಲೆ ವಿಶ್ವಾಸ ಇದೆ ಎಂಬ ಮಾತನ್ನು ಹೇಳಿಕೊಂಡು ಬಂದಿದ್ದಾರೆ. ಬಹುಶಃ ಅವರು ಮಾಡಿದಂಥ ತಪ್ಪಿಗೆ ಪ್ರಾಯಶ್ಚಿತ್ತಪಟ್ಟು ಕೊಳ್ಳುವುದಕ್ಕಾದರೂ ಕನಿಷ್ಟ ಪಕ್ಷ ಹೊರಗೆ ಬರುತ್ತಾರೆಂದು ನಾನು ತಿಳಿದಿದ್ದೇನೆ.

ಅದಕ್ಕೆ ಈ ದೃಷ್ಟಿಯಿಂದ ಒಂದುಕಡೆ ಯುನಾನಿಮಸ್ ರೆಸಲ್ಯೂಷನ್‌ಅನ್ನ ಪಾಸ್ ಮಾಡಿದ್ದೇವೆ. ಅದು ರಾಜ್ಯದ ಹಿತದೃಷ್ಟಿಯಿಂದ ನಾವೆಲ್ಲರೂ ಕೂಡ ಒಗ್ಗಟ್ಟಾಗಿ ಇರಬೇಕು ಮತ್ತು ಆಂಧ್ರಪ್ರದೇಶದಲ್ಲಿ ಒಗ್ಗಟ್ಟಾಗಿ ಪಕ್ಷಭೇದ ಮರೆತು ಒಂದಾಗಿ ರೆಸಲ್ಯೂಷನ್ ಏನು ಪಾಸ್ ಮಾಡಿದ್ದರು, ಅದೇ ರೀತಿ ನಮ್ಮ ರಾಜ್ಯದಲ್ಲೂ ನಾವೆಲ್ಲರೂ ಕೂಡ ಈ ಒಂದು ಸಂದರ್ಭದಲ್ಲಿ ಒಗ್ಗಟ್ಟಾಗಿದ್ದೇವೆ ಮತ್ತು ಸ್ಕೀಂ (ಬಿ)ಯನ್ನು ಆಚರಣೆಯನ್ನು ತರಲೇಬೇಕೆಂಬ ನಮ್ಮ ವಾದ ಏನಿದೆ ಅದಕ್ಕೆ ಪುಷ್ಟಿ ಕೊಡಬೇಕೆಂಬ ದೃಷ್ಟಿಯಿಂದ ಇವತ್ತು ಈ ರೆಸಲ್ಯೂಷನ್ ಅನ್ನು ಪಾಸ್ ಮಾಡಿದ್ದೇವೆ. ಆದರೆ ಇವತ್ತು ಇವರು ಮಾಡಿದಂಥ ತಪ್ಪಿಗೆ ಮತ್ತು ಇವರಿಂದ ಆದಂಥ ಅನಾಹುತಕ್ಕೆ ನಾವು ಸುಪ್ರೀಂ ಕೋರ್ಟ್ ಎಲ್ಲಾ ಕಡೆ ತಿರುಗುತ್ತಿದ್ದೇವೆ. ಇದಕ್ಕೆಲ್ಲಾ ಇವರೇ ಕಾರಣಕರ್ತರು. ಈ ತಪ್ಪುಗಳನ್ನು ಅವರು ಒಪ್ಪಿಕೊಂಡು ರಾಜೀನಾಮೆ ಕೊಡಬೇಕೆಂದು ನಾನು ಅದಕ್ಕೇ ಹೇಳಿದ್ದುದು. ಇಷ್ಟು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವೈ. ರಾಮಕೃಷ್ಣ (ಆನೇಕಲ್) : ಸನ್ಮಾನ್ಯ ಅಧ್ಯಕ್ಷರೇ, ಸುಮಾರು ಒಂದೂ ಕಾಲೂ ಗಂಟೆಗಳ ಕಾಲ ಮಾನ್ಯ ವಿರೋಧ ಪಕ್ಷದ ನಾಯಕರ ಭಾಷಣವನ್ನು ಕೇಳಿದೆ. ಅವರು ಬಹಳ ಆಕ್ರೋಶದಿಂದ ಮಾತನಾಡಿದರು. ಅವರ ಹತ್ತಿರ ಇರತಕ್ಕ ಎಲ್ಲಾ ಅಂಕಿಸಂಖ್ಯೆಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಇಷ್ಟೊಂದು ವಿಷಯಸಂಗ್ರಹಣೆ ಮಾಡಿರತಕ್ಕ ಈ ಪಕ್ಷ, ವಿರೋಧ ಪಕ್ಷದ ನಾಯಕರು ಒಂದು ಕ್ಷಣ ಮಾತ್ರದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬಹುದು. ಇದಕ್ಕೆಲ್ಲಾ ಕಾರಣಕರ್ತರು ಯಾರು? ಅವರ ಸರ್ಕಾರದ ಉಳಿಯುವಿಕೆಗೆ ಕಾರಣಕರ್ತರು ಯಾರು? ನೀವು ನಿಮ್ಮ ಪಾತ್ರವನ್ನು ವಹಿಸಿದ್ದೀರೋ? ಮಾನ್ಯ ಬೈರೇಗೌಡರು ಬಹಳ ಚೆನ್ನಾಗಿ ಹೇಳಿದರು. I will congratulate him. ನೀವು ಇಲ್ಲಿ ನಿಮ್ಮ ಕೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಏತಕ್ಕೆ ಕಾಯುತ್ತಿದ್ದೀರಿ? That shows your incapacity to convince your party boss to withdraw the support.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಇದಕ್ಕೆ ಸಂಬಂಧ ಇತ್ತು ಎಂದರೆ ಹೇಳಿ. ಸದನದಲ್ಲಿ ಈ ಸರ್ಕಾರಕ್ಕೆ ಸಂಬಂಧಪಟ್ಟಂಥ ವಿಷಯವನ್ನು ಪ್ರಸ್ತಾಪ ಮಾಡಿ. ನೀವು ಬಿ.ಎಸ್.ಪಿ. ಜೊತೆಯಲ್ಲಿ ಸ್ನೇಹ ಬಳಸಿಕೊಂಡಿರಿ. ಅವರು ನಮ್ಮ ಜೊತೆಯಲ್ಲಿ ಅಲೈಯೆನ್ಸ್ ಮಾಡಿಕೊಂಡು ಚುನಾವಣೆ ಮಾಡಿದರು. ಪ್ರೀತಿ ನಮ್ಮ ಜೊತೆಯಲ್ಲಿ ಮಾಡಿದರು, ಲಗ್ನ ಅವರ ಜೊತೆಯಲ್ಲಿ ಮಾಡಿಕೊಂಡರು. ಅಂದರೆ ಚುನಾವಣೆ ನಮ್ಮ ಜೊತೆಯಲ್ಲಿ ಆಯಿತು, ಲಗ್ನ ಅವರ ಜೊತೆಯಲ್ಲಿ ಆಯಿತು. ಆದರೆ ನಾವು ಏನಾದರೂ ಹೇಳಿದ್ದೇವೆಯೇ? ಅದು ಬೇರೆ ವಿಷಯ. ಆದರೆ ಇಲ್ಲಿ ಇವತ್ತು ಕೃಷ್ಣಾ ನೀರಿನ ಸಮಸ್ಯೆ, ಬಚಾವತ್ ಆವಾರ್ಡ್ ಸಮಸ್ಯೆ ಏನಿದೆ ಈ ಸಮಸ್ಯೆಗಳ ಬಗ್ಗೆ ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಕೆಲವು ಹೆಣ್ಣು ಮಕ್ಕಳಿಗೆ ಯಾರ ಜೊತೆ ಪ್ರೀತಿ ಮಾಡಬೇಕೆಂದು ಗೊತ್ತಾಗುವುದಿಲ್ಲ. ಪೋಲಿ ಹುಡುಗರ ಜೊತೆ ಪ್ರೀತಿ ಮಾಡುತ್ತಾರೆ. ಆಗ ತಂದೆ ತಾಯಿ ಯೋಚನೆ ಮಾಡುತ್ತಾರೆ. ಅವನು ಪೋಲಿ ಹುಡುಗ, ಅವನ ಜೊತೆ ಪ್ರೀತಿ ಮಾಡಬೇಡ. ಇವನು ಬಹಳ ಬುದ್ಧಿವಂತ ಇದ್ದಾನೆ, ವಿದ್ಯಾವಂತ ಇದ್ದಾನೆ, ಇವನ ಜೊತೆ ಮದುವೆ ಮಾಡಿಕೋ ಎಂದು ಹೇಳಿ ತಂದೆತಾಯಿಗಳು ಸರಿಯಾದ ವರನ ಜೊತೆ ಮದುವೆ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಆದರೂ ಒಂದೊಂದು ಸಾರಿ ತಂದೆತಾಯಿಗಳನ್ನು ಬಿಟ್ಟು ಹೊರಗೆ ಹೋಗಿ ಮದುವೆ ಆಗುತ್ತಾರಲ್ಲ.

ಶ್ರೀ ವೈ. ರಾಮಕೃಷ್ಣ : ಆ ಪ್ರಶ್ನೆ ಬೇರೆ. ಆ ಪ್ರಶ್ನೆ ಬಂದಾಗ ಸರಿಯಾದ ಉತ್ತರ ಕೊಡುತ್ತೇನೆ. ಬಜೆಟ್ ಮೇಲೆ ಮಾತನಾಡುವಾಗ ಉತ್ತರ ಕೊಡುತ್ತೇನೆ. ಆಗ ತಾವೂ ಹೇಳಿ, ನಾನೂ ಹೇಳುತ್ತೇನೆ.

ಅಧ್ಯಕ್ಷರು : ನಮ್ಮ ಕಡೆ ಆಮಶಂಕೆ ಆದರೆ ಜಾಪಾಳ ಮಾತ್ರೆ ಎಂದು ಕೊಡುತ್ತಾರೆ. ಅದು ಆಮಶಂಕೆ ನಿಲ್ಲುವುದು ಇರಲಿ, ರೋಗಿಯೇ ಹೊರಟು ಹೋಗುತ್ತಾನೆ. ಹಾಗೆ, ನೀವು ಕೃಷ್ಣಾ ನದಿ ನೀರಿನ ವಿಚಾರಕ್ಕೆ ಏನಾದರೂ ಹೇಳಿ ಅಂದರೆ ಜಾಪಾಳ ಮಾತ್ರೆ ಕೊಡಿ ಎನ್ನುತ್ತೀರಲ್ಲಾ ಅವರಿಗೆ.

ಶ್ರೀ ವೈ. ರಾಮಕೃಷ್ಣ : ಆಡಳಿತ ಪಕ್ಷದ ಮಂತ್ರಿಗಳೇ ಹೀಗೆ ಹೇಳಿದರು. ಅವರೇ ಹೀಗೆ ಹೇಳಿರುವಾಗ ನಾವು ಹೇಳುವುದು ಇನ್ನೇನು ಇದೆ? ಎಷ್ಟರಮಟ್ಟಿಗೆ ನೀವು ಅದಕ್ಕೆ ಕಾರಣಕರ್ತರು ಎಂಬುದನ್ನು ತಾವು ಆಲೋಚನೆ ಮಾಡಬೇಕಲ್ಲಾ; ತಾವು ನೀವು ಅದಕ್ಕೆ ಕಾರಣಕರ್ತರು ಎಂಬುದನ್ನು ಏನು ನಿರ್ಣಯ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳಬೇಕಲ್ಲಾ. ರಾಜ್ಯದ ಹಿತ ಕಾಪಾಡುವುದರಲ್ಲಿ ನಿಮ್ಮದೂ ಪಾಲು ಇದೆ ಎಂಬುದನ್ನು ತಿಳಿದುಕೊಳ್ಳಬೇಕಲ್ಲಾ. ಆ ರೀತಿ ತಿಳಿದುಕೊಳ್ಳುತ್ತೀದ್ದೀರಾ? ಅದಕ್ಕೋಸ್ಕರವಾಗಿ ನಾನು ಹೇಳುತ್ತಿದ್ದೇನೆಯೇ ಹೊರತು ಪಕ್ಷವನ್ನು ತರಾಟೆಗೆ ತೆಗೆದುಕೊಳ್ಳುವುದಾಗಲಿ, ಶ್ರೀಮಾನ್ ಖರ್ಗೆಯವರ ಭಾಷಣವನ್ನು ಟೀಕೆ ಮಾಡುವುದಾಗಲಿ ಅಲ್ಲ. ಇದರಲ್ಲಿ ಎಷ್ಟೆಷ್ಟು ಜವಾಬ್ದಾರಿ ಇದೆ ಎಂಬುದನ್ನು ಅರಿಯಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಚೆನ್ನಾಗಿ ಮಾತನಾಡುತ್ತೀರಿ.

ಶ್ರೀ ವೈ. ರಾಮಕೃಷ್ಣ : ನಾನು ರಿಯಲಿಸ್ಟಿಕ್ ಆಗಿ ಮಾತನಾಡುತ್ತೇನೆ. ನಿಮ್ಮ ಹಾಗೆ ಪೊಲಿಟಿಕಲ್ ಆಗಿ ಮಾತನಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಇಷ್ಟು ಕೋಪಿಸಿಕೊಂಡರೆ ಹೇಗೆ?

ಶ್ರೀ ವೈ. ರಾಮಕೃಷ್ಣ : ನನಗೆ ಕೋಪ ಬರುವುದಿಲ್ಲ. ಕೋಪ ಎಂದು ಏತಕ್ಕೆ ಹೇಳುತ್ತೀರಿ? ನಾನು ಹೇಳಬೇಕೆಂದರೆ ಹೇಳುತ್ತೇನೆ; ಆದರೆ ಹೇಳಬಾರದು ಚೆನ್ನಾಗಿ ಕಾಣುವುದಿಲ್ಲ. I will reserve it for some other occasion. ತಾವು ದಯವಿಟ್ಟು ಯೋಚನೆ ಮಾಡಿ. We are running the state under the Constitution. ರಾಜ್ಯಾಂಗದ ನಿಯಮಾವಳಿ ಪ್ರಕಾರ ನಾವು ರಾಜ್ಯ ಆಳುತ್ತಿದ್ದೇವೆ. ಸ್ಟೇಟ್ಸ್ ಇರಬಹುದು, ಸೆಂಟರ್-ಸ್ಟೇಟ್ ಇರಬಹುದು, ಪ್ರಜಾಪ್ರಭುತ್ವದ ಹೆಸರಿನಲ್ಲಿ ಸಂವಿಧಾನದ ಕೆಳಗೆ ನಾವು ರಾಜ್ಯ ಆಳುತ್ತಿದ್ದೇವೆ. ಇದು ತಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಸಂವಿಧಾನದ ರಾಜ್ಯ ಆಳುತ್ತಿದ್ದೇವೆ. ಇದು ತಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಸಂವಿಧಾನದ ಕೆಳಗೆ ಅನೇಕ ಸಮಿತಿಗಳನ್ನು, ಆಯೋಗಗಳನ್ನು ರಚಿಸಲಾಗಿದೆ. ಅದು ಹಣಕಾಸಿನ ಆಯೋಗ ಇರಬಹುದು, ಅವಾರ್ಡ್‌ಕಮಿಷನ್ ಇರಬಹುದು, ಸುಪ್ರೀಂ ಕೋರ್ಟ್ ಇರಬಹುದು, ಮತ್ತೊಂದು ಮುಗದೊಂದು ಇರಬಹುದು, ಇವೆಲ್ಲಾ

ರಚನೆಯಾಗಿವೆ. ಇವುಗಳಿಗೆ ನಾವು ಮಾನ್ಯತೆ ಕೊಡಲೇಬೇಕು. ಸುಪ್ರೀಂ ಕೋರ್ಟಿನ ತೀರ್ಮಾನವನ್ನು ಇಲ್ಲ ಎನ್ನುವುದಕ್ಕಾಗುತ್ತದೆಯೇ? ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಪ್ರಶ್ನೆ ಕೇಳುತ್ತೇನೆ.

ಈ ಕೇಸ್ ಅನ್ನು ಸುಪ್ರೀಂ ಕೋರ್ಟಿಗೆ ಒಯ್ಯುವುದಕ್ಕೆ ಅವರು ತಯಾರಿದ್ದಾರೆ, ಬಹುಶಃ ಒಯ್ದಿರಬೇಕೆಂದು ಕಾಣುತ್ತದೆ. ನಾವು ಒಯ್ಯುವುದಕ್ಕೆ ತಯಾರಿದ್ದೇವೆಂದು ಇವರ ಹೇಳಿಕೆಯನ್ನು ನೋಡಿದ್ದೇವೆ. ಅಲ್ಲಿಂದ ಜಡ್ಜ್‌ಮೆಂಟ್ ಬಂದಮೇಲೆ ಅದಕ್ಕೆ ನಾವು ನೀವು ಎಲ್ಲಾ ಬದ್ಧ ತಾನೆ? ಆಂಧ್ರವೂ ಬದ್ಧ, ಕರ್ನಾಟಕವೂ ಬದ್ಧ, ಅಂದಮೇಲೆ ಇದನ್ನು ಒಯ್ಯುವ ಹಾಗೆ ಮಾಡಿದ್ದುದು ಯಾರು? ಸುಪ್ರೀಂ ಕೋರ್ಟಿಗೆ ಈ ಕೇಸ್ ಅನ್ನು ಒಯ್ಯುವ ಹಾಗೆ ಮಾಡಿದವರು ಯಾರು? ಎವಿಡೆನ್ಸ್ ಕ್ರಿಯೇಟ್ ಮಾಡಿದವರು ಯಾರು? ಇದು ಬಹಳ ಮುಖ್ಯವಾದ ಪ್ರಶ್ನೆ. ನಮ್ಮ ಕೈಮೀರಿ ಹೋಯಿತು, ಸದನದ ಕೈಮೀರಿ ಹೋಯಿತು, ಜನತೆಯ ಕೈಮೀರಿ ಹೋಯಿತು ಮತ್ತು ನಮ್ಮೆಲ್ಲರ ಕೈ ಮೀರಿಹೋಯಿತು ಎಂದರೆ ಇದಕ್ಕೆ ಯಾರು ಕಾರಣ ಎಂಬುದನ್ನು ಪತ್ತೆ ಹಚ್ಚಬೇಕು. ಈಗ ಪ್ಲಾನಿಂಗ್ ಕಮೀಷನ್ ಅಪ್ರೂವಲ್ ಕೊಟ್ಟಿದ್ದು ಆಯಿತು. ಬಚಾವತ್ ಕಮಿಷನ್ ಆವಾರ್ಡ್ ಕೊಟ್ಟಮೇಲೆ ಎಷ್ಟು ಜನರು ಅದಕ್ಕೆ ಅಪ್ರೂವಲ್ ಕೊಟ್ಟಿರುವುದು ಸ್ವಾಮಿ? ಪ್ಲಾನಿಂಗ್ ಕಮಿಷನ್ ಮೊದಲು ಅಪ್ರೂವಲ್ ಕೊಟ್ಟಿತು. ಫೈನಾನ್ಸ್ ಡಿಪಾರ್ಟ್‌ಮೆಂಟ್ ಅಪ್ರೂವಲ್ ಕೊಟ್ಟಿತು, ಸೆಂಟ್ರಲ್ ಗವರ್ನಮೆಂಟ್ ಅಪ್ರೂವಲ್ ಕೊಟ್ಟಿತು, ಟೆಕ್ನಿಕಲ್ ಕಮಿಟಿ ಅಪ್ರೂವಲ್ ಕೊಟ್ಟಿತು. ವರ್ಲ್ಡ್ ಬ್ಯಾಂಕ್ ಲೋನ್ ಸ್ಯಾಂಕ್ಷನ್ ಆಯಿತು. ಕೆಲಸ ಪ್ರಾರಂಭವಾಯಿತು. ಟೆಕ್ನೋ ಇಕನಾಮಿಕ್ ಕಮಿಟಿಯಲ್ಲಿ ಅಣೆಕಟ್ಟು ಇಷ್ಟು ಅಡಿ ಎತ್ತರ ಇರಬೇಕು, ಗೇಟ್‌ಗಳು ಎಷ್ಟು ಇರಬೇಕು ಎಂಬೂದೂ ಕೂಡ ಮಂಜೂರಾಯಿತು. ಎಲ್ಲಿಯಾದರೂ ಒಂದು ಲಕ್ಯುನಾ ನಮಗೆ ವಿರುದ್ಧವಾಗಿರುವುದನ್ನು ತೋರಿಸಿ. ಮಾನ್ಯ ಮುಖ್ಯಮಂತ್ರಿಗಳಾಗಲಿ, ತಾವಾಗಲಿ ಎಲ್ಲಿಯಾದರೂ ಇಂಥದ್ದು ಸ್ವಲ್ಪ ಸೊಟ್ಟ ಇತ್ತು ಡೊಂಕು ಇತ್ತು, ಅದಕ್ಕೋಸ್ಕರ ಆಯಿತು ಎಂದು ಹೇಳಿ; ಅಂಥದ್ದು ಏನೂ ಇಲ್ಲ.ಇದು A to Z 100% cleared project. ಇದನ್ನು ಕ್ಲಿಯರ್ ಮಾಡುವ ಸಂದರ್ಭದಲ್ಲಿ ಇದುವರೆಗೆ ಬಾರದೆ ಇದ್ದ ವಿಷಯ ಎರಡು ವರ್ಷಗಳಿಂದೀಚೆಗೆ ಪ್ರಾರಂಭವಾಯಿತು. ಅಂದರೆ ನಾನು ಮಾನ್ಯ ದೇವೇಗೌಡರ ಮೇಲೆ ತಪ್ಪು ಹೊರಿಸುವುದಕ್ಕೆ ಹೇಳುತ್ತಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ದೇವೇಗೌಡರ ಮೋಷನ ಅನ್ನು ಎಕ್ಸ್‌ಪ್ಲಾಯಿಟ್ ಮಾಡಿಕೊಳ್ಳುವುದಕ್ಕೆ ಹೋದರು ಆಂಧ್ರಪ್ರದೇಶದವರು; ಒಂದು ಕಡೆ ಕರಡಿ. ಒಂದು ಕಡೆ ಆಂಧ್ರಪ್ರದೇಶಕ್ಕೆ ಕೊಡದಿದ್ದರೆ ಸ್ಥಾನ ಹೋಗುತ್ತದೆ; ಒಪ್ಪಿಕೊಂಡರೆ ಕರ್ನಾಟಕದವರು ಒಳಗೆ ಸೇರಿಸುವುದಿಲ್ಲ. ಅಂದಾಗ ಏನು ಮಾಡಬೇಕು? ನಾನು ನಿಜವಾದ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ಆ ಸ್ಥಾನದಲ್ಲಿ ಯಾರಿದ್ದರೂ ಮಾಡುತ್ತಿದ್ದರೋ ಏನೋ ನನಗೆ ಗೊತ್ತಿಲ್ಲ. ಆದರೆ ನೀವು ಅಲರ್ಟ್ ಆಗಿರಬೇಕಾಗಿತ್ತು. ನೀವು ಹುಷಾರಾಗಿರಬೇಕು. You are the Constitutionally elected Chief Minister of Karnataka. You have not exercised your authority.

ನೀವು ಎಕ್ಸರ್‌ಸೈಜ್ ಮಾಡಲಿಲ್ಲ. ನೀವು ರಾಜಕೀಯದ ಮುಲಾಜಿಗೆ ಒಳಗಾದಿರಿ. ನಿಮ್ಮ ನಯವಾದ ಭಾಷಣ, ನಿಮ್ಮ ಚಮತ್ಕಾರದಿಂದ ಕೂಡಿದ ಭಾಷಣ, ನಿಮ್ಮ ನಗು ಚೆಲ್ಲುವಂಥ ಭಾಷಣ- ಇದರಿಂದ ಇವತ್ತು ರಾಜ್ಯವನ್ನು ಮರುಳು ಮಾಡಿದಿರಿ.

11.30 ಪಿ.ಎಂ

ನಾನು ಅನೇಕ ಸಾರಿ ಒತ್ತಿ ಹೇಳಿದ್ದೇನೆ ಹುಷಾರಾಗಿರಿ, ಹುಷಾರಾಗಿರಿ ಎಂದು. ಇಲ್ಲ, ಇಲ್ಲ, ಅದೇನಿಲ್ಲ. ಬರುತ್ತಾರೆ ಹೋಗುತ್ತಾರೆ, ಬರುತ್ತಾರೆ ಹೋಗುತ್ತಾರೆ ಎಂದು ಹೇಳಿದರು. ಇವತ್ತು ಏನಾಯಿತು? ಇದಕ್ಕೆ ಯಾರು ಹೊಣೆ? ಹೊಣೆಗಾರಿಕೆಯನ್ನು ನಾವು ಫಿಕ್ಸ್ ಮಾಡಬೇಕಲ್ಲಾ ಸ್ವಾಮಿ. ಸದನದಲ್ಲಿ ಇಂಥ ವಿಚಾರ ಬಂದಾಗ ಹೊಣೆಗಾರಿಕೆಯನ್ನು ನಾವು ಫಿಕ್ಸ್ ಮಾಡಬೇಕಾಗುತ್ತದಲ್ಲಾ. ನೀವು ಏನು ಹೇಳಿದಿರಿ. ಎರಡನೇ ಸಾರಿ ಏನು ಹೇಳಿದಿರಿ ಬ್ರಿಡ್ಜ್ ಓವರ್‌ಫ್ಲೋ ಆಗುತ್ತಾ ಇದೆ, ಕ್ರೆಸ್ಟ್ ಗೇಟ್ ಇಡುವುದಕ್ಕಾಗುತ್ತಿಲ್ಲ ಎಂದು ಹೇಳಿದಾಗ ನಾವು ನಂಬಿದೆವು. ನಿಮಗೆ ಹೇಳಬೇಕಾದರೆ ನಾನೂ ಕೂಡ ಹೋಗಿದ್ದೆ. ನಾನು ಯಾವುದೋ ಒಂದು ಕಮಿಟಿಯಲ್ಲಿದ್ದೇನೆ. ಆ ಕಮಿಟಿ ಮೂಲಕ ಅಲ್ಲಿಗೆ ಹೋಗಿದ್ದೆ. ಅಲ್ಲಿ ನೋಡಿ. ಒಂದು ದಿವಸ ಅಲ್ಲಿದ್ದು ವಿಚಾರವನ್ನೆಲ್ಲಾ ಮನವರಿಕೆ ಮಾಡಿಕೊಂಡಿದ್ದೇನೆ. ಸ್ವಾಮಿ, ಒಂದು ವಿಚಾರವನ್ನು ನಾನು ಹೇಳುತ್ತೇನೆ. ತನ್ನ ಅಧಿಕಾರ ಸ್ಥಾನಕ್ಕಿಂತ ದೇಶದ ಹಿತ ಬಯಸುವುದು ಬಹಳ ಮುಖ್ಯ. ಇದನ್ನು ನಾನೇನೂ ಹೇಳಿಕೊಡಬೇಕಾಗಿಲ್ಲ ಸನ್ಮಾನ್ಯ ಶ್ರೀ ಪಟೇಲ್ ಅವರಿಗೆ. ತಾವು ಕಮಿಟಿ ಮಾಡಿದ್ದನ್ನು ಒಪ್ಪಿದ್ದು ಮೊದಲನೇ ತಪ್ಪು. ಅದಕ್ಕೆ ದಂಡ ಕೊಡಬೇಕು. ಈ ಸದನದ ಕ್ಷಮೆ ಕೇಳಬೇಕು. ಎರಡನೆಯದಾಗಿ, ಅವರು ಬಂದಾಗ ಕೊಟ್ಟಂಥ ರೆಡ್‌ಕಾರ್ಪೆಟ್ ರಿಸೆಪ್ಷನ್. ಅದಕ್ಕೆ ನಿಮಗೇನು ಮಾಡಬೇಕು ಹೇಳಿ. ನಮ್ಮ ಕತ್ತು ಕುಯ್ಯುವುದಕ್ಕೆ ಬಂದಂಥ ಜನರಿಗೆ ತಾವು ಕೊಟ್ಟಂಥ ರೆಡ್‌ಕಾರ್ಪೆಟ್ ರಿಸೆಪ್ಷನ್‌ಗೆ ನಾವು ಏನು ಮಾಡಬೇಕು? ಈಗ ಏನು ಉತ್ತರ ಕೊಡುತ್ತೀರಿ ಹೇಳಿ. ಅಷ್ಟೇ ಅಲ್ಲ. ನೀವು ಹೋಗುವುದಲ್ಲ; ಅಧಿಕಾರಿಗಳನ್ನೂ ಕಳುಹಿಸಿದಿರಿ. ಸ್ಪಾಟ್‌ಗೂ ಕಳುಹಿಸಿದಿರಿ. ಕಲ್ಕತ್ತಕ್ಕೂ ಕಳುಹಿಸಿದಿರಿ. What prompted you to send officials of our state? ನಿಮ್ಮದು ಒಂದೇಒಂದು ಉದ್ದೇಶ. ಏನದು? ನಮ್ಮ ಪ್ರೈಮ್ ಮಿನಿಸ್ಟರ್‌ರವರ ಸ್ಥಾನ ಭದ್ರವಾಗಿರಲಿ ಎಂಬುದು. ಅವರು ಹೇಳುತ್ತಾರೆ ಸ್ವಾಮಿ. ಅವರು ದೇವರಲ್ಲಿ ನಂಬಿಕೆ ಇಟ್ಟಿರತಕ್ಕಂಥವರು. ಪ್ರೈಮ್ ಮಿನಿಸ್ಟರ್‌ರವರು. ಅವರು ಹೇಳುತ್ತಾರೆ. ದೇವರ ದಯೆ ಇರುವತನಕ ನಾನು ಇರುತ್ತೇನೆ, ದೇವರು ಎಲ್ಲಿಯತನಕ ಆಶೀರ್ವಾದ ಕೊಡುತ್ತಾನೋ ಅಲ್ಲಿಯತನಕ ನಾನಿರುತ್ತೇನೆ ಎಂದು. ನೀವು ಆ ಆಶೀರ್ವಾದವನ್ನು ನೀವು ಎಕ್ಸ್‌ಟೆಂಡ್ ಮಾಡಿಸುವುದಕ್ಕೆ ಹೋಗಿದ್ದಿರ? ತಾವು ಕೊಟ್ಟ ಆಶೀರ್ವಾದವನ್ನು ನೀವು ಎಕ್ಸ್‌ಟೆಂಡ್ ಮಾಡಿಸುವುದಕ್ಕೆ ಹೋಗಿದ್ದಿರಾ? ಅರ್ಥ ಆಗಬೇಕಲ್ಲಾ. It is a matter of paramount importance for this state. ಇದಕ್ಕಿಂತ ಅತೀ ಮುಖ್ಯವಾದಂಥ ಸಮಸ್ಯೆ ಇನ್ನು ಯಾವುದೂ ಇಲ್ಲ. ನಮ್ಮ ಅಳಿವು ಉಳಿವು, ನಮ್ಮ ರಾಜ್ಯದ ಅಳಿವು ಉಳಿವು, ಬಡತನ ನೀಗಿಸುವಂಥ ಹೆಚ್ಚಿನ ಹೆಚ್ಚುಗಾರಿಕೆ ಆ ಪ್ರಾಜೆಕ್ಟ್‌ನಲ್ಲಿದೆ.

ಅಧ್ಯಕ್ಷರು : ನಿಮಗೆ ದೇವರಲ್ಲಿ ನಂಬಿಕೆ ಇಲ್ಲವೇ?

ಶ್ರೀ ವೈ. ರಾಮಕೃಷ್ಣ : ನನಗೆ ಇನ್ನೂ ನಂಬಿಕೆ ಇದೆ. ಇಲ್ಲ ಎಂದು ಹೇಳಬೇಡಿ. ನನಗೆ ಇನ್ನೂ ಕೂಡ ದೇವರಲ್ಲಿ ನಂಬಿಕೆ ಇದೆ. He will enjoy his fortune and I will enjoy my fortune.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದರ ಆಧಾರದ ಮೇಲೆಯೇ ಅವರು ಬಿ.ಜೆ.ಪಿ.ಗೆ ಹೋಗಿದ್ದಾರೆ. ನೀವು ಇನ್ನೂ ನಂಬಿಕೆ ಇದೆಯೇ ಎಂದು ಕೇಳಿದರೆ ಹೇಗೆ?

ಶ್ರೀ ವೈ. ರಾಮಕೃಷ್ಣ : ಡೀವಿಯೇಷನ್ ಮಾಡಬೇಡಿ ದಯವಿಟ್ಟು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ನಂಬಿಕೆಯ ಮೇಲೇ ಆ ಕಡೆ ಹೋಗಿ ಸೇರಿದ್ದಾರೆ. ನೀವು ಇಲ್ಲವೇ ಎಂದರೆ ಹೇಗೆ?

ಅಧ್ಯಕ್ಷರು : ಆ ವಿಚಾರ ಮರೆತಿದ್ದೆ ನಾನು. ಥ್ಯಾಂಕ್ ಯು. ನಾನು ಕೇಳಿದ್ದೇ ತಪ್ಪಾಯಿತು.

ಶ್ರೀ ವೈ. ರಾಮಕೃಷ್ಣ : ಸ್ಪಷ್ಟವಾಗಿ ಹೇಳುತ್ತೇನೆ, ದೇವರಲ್ಲಿ ಅತ್ಯಂತ ನಂಬಿಕೆ ಇರತಕ್ಕ ವ್ಯಕ್ತಿಗಳ ಪೈಕಿ ನಾನು ಮೊದಲಿಗ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ನಿಮಗೆ ನೆನಪಿದೆಯೋ ಇಲ್ಲವೋ. ನಾವೆಲ್ಲಾ ಕಾರವಾರಕ್ಕೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಸದಸ್ಯರಾಗಿ ಹೋಗಿದ್ದೆವು ಆಗ ಆ ಸ್ಕೈಲಾಬ್ ಏನೋ ಹೇಳುತ್ತದೆ ಎಂದಾಗ ರೂಮಿನಿಂದ ಹೊರಕ್ಕೆ ಬರಲಿಲ್ಲ ನೀವು. ದೇವರನ್ನು ಪ್ರಾರ್ಥನೆ ಮಾಡಿಕೊಂಡು ರೂಮಿನಲ್ಲೇ ಇದ್ದುಬಿಟ್ಟಿದ್ದಿರಿ.

ಶ್ರೀ ವೈ. ರಾಮಕೃಷ್ಣ : ಹೌದು ಸ್ವಾಮಿ. ಇವತ್ತು ಗ್ರಹಣ. ಇವತ್ತು ನಾನು ದೇವರ ಪ್ರಾರ್ಥನೆ ಮಾಡಬೇಕಾಗಿತ್ತು. But duty called me here ನಾನು ಏತಕ್ಕೆ ಹೇಳಿದೆ ಅಂದರೆ.

ಅಧ್ಯಕ್ಷರು : ಸಮುದ್ರದ ಮೇಲೆ ಬೀಳುತ್ತದೆ ಎಂದು ಹೇಳಿದರೂ ನಾನು ಹೊರಕ್ಕೇ ಬರುವುದಿಲ್ಲ ಎಂದು ಪ್ರೇಯರ್ ಮಾಡಿಕೊಂಡಿದ್ದುಬಿಟ್ಟರು. We were saved on account of that.

ಶ್ರೀ ವೈ. ರಾಮಕೃಷ್ಣ : ಮತ್ತೊಂದು ವಿಚಾರ ಹೇಳುತ್ತೇನೆ ಸ್ವಾಮಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ನಮಗೆ ದೇವರ ಮೇಲೆ ನಂಬಿಕೆ ಇದೆ ಎಂಬುದು ಮುಖ್ಯವೋ ಅಥವಾ ದೇವರಿಗೆ ನಮ್ಮಗಳ ಬಗ್ಗೆ ನಂಬಿಕೆ ಇದೆ ಎಂಬುದು ಮುಖ್ಯವೋ?

MR. SPEAKER : I agree with you. Latter is more important.

ಶ್ರೀ ವೈ. ರಾಮಕೃಷ್ಣ : ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಈ ಸಭೆಯ ಎಲ್ಲಾ ಸದಸ್ಯರನ್ನು, ಈ ಸಭೆಯ ಎಲ್ಲಾ ಪಕ್ಷದವರನ್ನು ತಾವು ತಮ್ಮ ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಬೇಕಾಗಿತ್ತು. ಪ್ರತಿ ಸ್ಟೇಜ್‌ನಲ್ಲೂ ತೆಗೆದುಕೊಳ್ಳಬೇಕಾಗಿತ್ತು. ತಾವು ಮದ್ರಾಸಿಗೆ ಐದು ಸಾರಿ ಹೋಗಿದ್ದೀರಿ. ಅಧ್ಯಕ್ಷರೆ, ಕೇಳಿ ಏನಾಗಿದೆ ಇವತ್ತು ಪರಿಸ್ಥಿತಿ. ನಾನು ಅಲ್ಲಿ ನಡೆದಿದ್ದನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಆದರೆ ಒಂದು ಮಾತ್ರ ಹೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಅವರು ಹೇಳಿದ ಕಡೆಯೆಲ್ಲಾ ತಾವು ಹೋದಿರಿ. ಮದ್ರಾಸಿಗೆ ಬನ್ನಿ ಅಂದರು, ನೀವು ಹೋದಿರಿ. ಡೆಲ್ಲಿಗೆ ಬನ್ನಿ ಅಂದರೆ ಹೋದಿರಿ. ಬೆಂಗಳೂರಿಗೆ ಬರುತ್ತೇವೆ ಅಂದರೆ ಬನ್ನಿ ಅಂದಿರಿ. ನನಗೆ ಅದಕ್ಕೆ ಅಡ್ಡಿ ಇಲ್ಲ. ಕೊಟ್ಟು ತೆಗೆದುಕೊಳ್ಳುವುದು ಇರಬೇಕು. ಆದರೆ ನಿಮ್ಮ ಮಾತುಕತೆಯ ಫಲಿತಾಂಶ ಯಾವ ಮಟ್ಟಕ್ಕೆ ಬಂತು? How it ended? ಕರ್ನಾಟಕದ

ಜನ ನಾಚಿಕೆ ಪಡಬೇಕು. ಏಕೆ? ಕರೆಂಟ್ ಕೊಡುವುದಿಲ್ಲ ಎಂದು ಹೇಳಿದರು ಅವರು. ಎಲೆಕ್ಟ್ರಿಸಿಟಿ ಇವತ್ತು ನಾವು ಕೊಡುವುದಕ್ಕೆ ತಯಾರಾಗಿಲ್ಲ ಎಂದು ಹೇಳಿದರು. Is it the result of your negotiations with the Madras government? Are you going to justify it? ನಮ್ಮದೇನೂ ರಾಜ್ಯ ಅಲ್ಲವೇ? ನೀವು ಚೀಫ್ ಮಿನಿಸ್ಟರ್ ಅಲ್ಲವೇ? ನಾವು ಪ್ರಜೆಗಳಲ್ಲವೇ? ನಮಗೆ ಬೆಲೆ ಇಲ್ಲವೇ? ಉತ್ತರ ಕೊಡುವುದಕ್ಕೆ ನಮಗೂ ಬರುತ್ತದೆ. ನಿಮ್ಮ ಮುಲಾಜಿಗೆ ನಾವು ಕಟ್ಟುಬಿದ್ದಿದ್ದೇವಲ್ಲಾ. ನಿಮ್ಮ ಮುಲಾಜಿಗೆ ಕಟ್ಟುಬಿದ್ದು ನಾವು ನಿಮಗೆ ಸಬಾರ್ಡಿನೇಟ್ ಆಗಿ ಕುಳಿತಿದ್ದೇವೆ. Even though this House is a sovereign body, it cannot exercise its power, because you have got about 20 vote more. ನಾವು ಕೊಡತಕ್ಕ ಸಲಹೆಯನ್ನು ತಾವು ಮನ್ನಿಸಬೇಕಲ್ಲಾ. ಮನ್ನಣೆಗೆ ತೆಗೆದುಕೊಳ್ಳಬೇಕಲ್ಲಾ. ಇವತ್ತು ಏಕೆ ರಾಜೀನಾಮೆ ಕೊಡಬಾರದು ಸನ್ಮಾನ್ಯ ಮಂತ್ರಿಗಳು? ಈಗ ಧೈರ್ಯವಾಗಿ ಕೇಳುತ್ತಿದ್ದೇನೆ. ಯಾವಾಗ ಕರುಣಾನಿಧಿಯವರಿಂದ ನೀವು ನಿಕೃಷ್ಟವಾಗಿ 125 ಮೆಗಾವ್ಯಾಟ್ಸ್ ಎಲೆಕ್ಟ್ರಿಸಿಟಿ ಕೊಡುವುದಿಲ್ಲ ಎಂದು ಅನ್ನಿಸಿಕೊಂಡರೋ, ಪೇಪರ್‌ನಲ್ಲಿ ನಾನು ಓದಿದೆ; ನನಗೆ ಗೊತ್ತಿಲ್ಲ. ಪೇಪರ್‌ನಲ್ಲಿ ಬಂದ ವಿಷಯದ ಮೇಲೆ ನಾನು ಹೇಳುತ್ತಿದ್ದೇನೆ. ಅಂದಮೇಲೆ ನಿಮ್ಮ ಎಫರ್ಟ್ಸ್ ಏನಾಯಿತು? ಕೃಷ್ಣಾ ನದಿಯಲ್ಲಿ ಇಲ್ಲಿ ಫೇಲ್ ಆದಿರಿ. ಕಾವೇರಿ ನದಿಯಲ್ಲಿ ಇಲ್ಲಿ ಫೇಲ್ ಆದಿರಿ. ಮತ್ತೆ ನೀವು ಏತಕ್ಕಿರಬೇಕು ಕುರ್ಚಿಯಲ್ಲಿ ಮಂತ್ರಿಯಾಗಿ? ಮಂತ್ರಿಯಾಗಿ ಏತಕ್ಕಿರಬೇಕು is it to take salary? Is it to enjoy the prerogatives? Where you have succeeded? Where you have protected the interest of the State? Do you deserve to be the Minister of the State? You are most irresponsible. You have betrayed the House. You have to answer all these allegations. ಇದು ದುರದೃಷ್ಟಕರವಾದುದು. ನಾನು ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಇದು ಕೋಟ್ಯಾಂತರ ಜನರಿಗೆ ಸಂಬಂಧಪಟ್ಟಿರತಕ್ಕ ವಿಚಾರ. ನಿಮ್ಮ ನಾಲ್ಕು ಜನ ಮುಖ್ಯಮಂತ್ರಿಗಳು ಬಂದಾಗ, ನಮ್ಮ ಪಕ್ಷ ಭಾರತೀಯ ಜನತಾ ಪಾರ್ಟಿ ಅದನ್ನು ವಿರೋಧಿಸುವುದಕ್ಕೆ ಹೋಯಿತು. ನೀವು ಏನಾದರೂ ಅಂದುಕೊಳ್ಳಿ. ನೀವೇನಾದರೂ ಬೈಯ್ದುಕೊಳ್ಳಿ. I have been doing my job.

ಅಧ್ಯಕ್ಷರು : ಅವರು ಬೈಯ್ಯಲಿಲ್ಲ. ಅವರು ಏನು ಹೇಳಿದರು ಅಂದರೆ ಮಂತ್ರ ಉಚ್ಚಾರಣೆ ಮಾಡುತ್ತಿದ್ದಾರೆ, ಆದರೆ ಮಂತ್ರಿಕ್ಕಿಂತ ಉಗುಳು ಹೆಚ್ಚಾಗಿದೆ ಎಂದು ಹೇಳಿದರು.

ಶ್ರೀ ವೈ. ರಾಮಕೃಷ್ಣ : ಅವರಿಷ್ಟ ಬಂದಹಾಗೆ ಮಾಡಿಕೊಳ್ಳಲಿ. ಸ್ವಾಮಿ ನೀವು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದೇ ಧಾಟಿಯಲ್ಲಿ ಮಾತನಾಡಿ ಇದನ್ನು ಮುಗಿಸಿಬಿಡುತ್ತಾರೆ. ಉಗುಳು ಜಾಸ್ತಿಯಾಯಿತು ಮಂತ್ರಕ್ಕಿಂತಲೂ ಎಂದು ಹೇಳಿಕೊಂಡು ಅನ್ಯಾಯ ಮಾಡಿದ್ದಾರಲ್ಲಾ ಅದನ್ನು ಮುಚ್ಚಿಡಬೇಕಲ್ಲಾ ಯಾವುದಾದರೂ. ಅವರು ಹೇಳಿದ್ದೇನು? ಅಂದರೆ ಒಬ್ಬೊಬ್ಬರ ಜೊತೆಯಲ್ಲಿ ಹೀಗೆ ನಡೆದುಕೊಂಡಿರಿ ನಾಲ್ಕೈದು ಮೀಟಿಂಗ್‌ಗಳನ್ನು ಮಾಡಿ ಎಂದು ಅದರ ಬಗ್ಗೆ ಹೇಳುತ್ತಿದ್ದಾರೆ. ಅದಕ್ಕೇ ನಾನು ಹೇಳಿದ್ದುದು. ನೀವು ಇಂಜಿನ್ ಬಿಟ್ಟಿರಿ. ಬರೀ ಒಂದು ಡಬ್ಬಿ ಡಿಟ್ಯಾಚ್ ಮಾಡುತ್ತಿದ್ದೀರಿ. ಡಬ್ಬಿಗಳು ತಾನೇ ಹೋಗುತ್ತವೆಯೇ?

ಶ್ರೀ ವೈ. ರಾಮಕೃಷ್ಣ : ಆ ಇಂಜಿನ್ ಕೆಲಸ ನೀವು ಮಾಡುತ್ತೀರಿ ಎಂದು ನಿಮಗೆ ಬಿಟ್ಟಿದ್ದೆ. ನೀವು ಮಾಡಲಿಲ್ಲ. ಆದ್ದರಿಂದ ಈಗ ನಾನು ಮಾಡಬೇಕಾಗಿದೆ. ಇನ್ನೇನು ಮಾಡುತ್ತೀರಿ ? ಹೊಂಚಿಕೊಳ್ಳಬೇಕಲ್ಲಾ. ನಾಲ್ಕು ಮುಖ್ಯಮಂತ್ರಿಗಳು ಏನು ಬಂದರೋ ಆವತ್ತು ನಾವು ಹೇಳಿದೆವು ಬಹುಶಃ ಅಸೆಂಬ್ಲಿಯಲ್ಲೂ ಇದು ಪ್ರಸ್ತಾವಕ್ಕೆ ಬಂದಿತ್ತು. ನಮ್ಮ ಪಕ್ಷ, ಭಾರತೀಯ ಜನತಾ ಪಾರ್ಟಿ ಮಾನ್ಯ ಯಡಿಯೂರಪ್ಪನವರ ಅಧ್ಯಕ್ಷತೆಯಲ್ಲಿ ಹಾಗೂ ಸಂಬಂಧಪಟ್ಟ ಎಂ.ಎಲ್.ಎ. ಬಸವನಗೌಡರ ಜೊತೆ ಸಾವಿರಾರು ಜನ ಕಾರ್ಮಿಕರನ್ನು ತೆಗೆದುಕೊಂಡು ಹೋಗಿ ಅಲ್ಲಿ ಧರಣಿ ಮಾಡಿದರು. ಆಗ ನೀವು ಏನು ಮಾಡಿದಿರಿ? ಅರೆಸ್ಟ್ ಮಾಡಿಸಿದಿರಿ. ದೇಶಭಕ್ತರನ್ನು ಅರೆಸ್ಟ್ ಮಾಡಿಸಿದಿರಿ. ಯಾರು ಅವರಿಗೆ ಅಡಚಣೆ ಮಾಡುವುದಕ್ಕೆ ಹೋದೆವೋ ಯಾರು ರಾಜ್ಯ ಉದ್ಧಾರ ಮಾಡುವುದಕ್ಕೆ ಹೋದೆವೋ ಅಂಥ ನಮ್ಮವರು ಪೋಲೀಸ್ ಸ್ಟೇಷನ್ನಿಗೆ ಹೋಗಬೇಕಾಯಿತು. ಜೈಲಿಗೆ ಹೋಬೇಕಾಯಿತು. ನಮ್ಮನ್ನು ಕೊಲೆ ಮಾಡುವುದಕ್ಕೆ ಬಂದಂಥ ಜನರಿಗೆ ರೆಡ್‌ಕಾರ್ಪೆಟ್ ಹಾಕಿ ಇವತ್ತು ಇಂಥ ರಿಪೋರ್ಟ್ ತೆಗೆದುಕೊಂಡಿದ್ದೀರಿ. ನಾಚಿಕೆ, ಮಾನ ಮರ್ಯಾದೆ ಎಲ್ಲಾ ಹೋಯಿತು. ಈಗ ಏನಿದೆ? ಇನ್ನೇನು ಕರೆಯುತ್ತೀರಿ ನೀವು? ಯಾವ ವಿರೋಧಪಕ್ಷಗಳನ್ನು ಕರೆಯುವುದಕ್ಕೆ ನಿಮಗೆ ನೈತಿಕ ಹಕ್ಕಿದೆ? ಏನು ಹೇಳುತ್ತೀರಿ? ಸುಪ್ರೀಂ ಕೋರ್ಟಿಗೆ ಹೋಗಿರುವಾಗ, when the matter has gone to Supreme Court who will care for this government? Who will care for this Government? You have betrayed completely betrayed, 100% A to Z. ನಿಮ್ಮಲ್ಲಿ ಉಳಿದಿರುವುದು ಏನೂ ಇಲ್ಲ. ಒಂದೇ ಒಂದು ಇರುವುದು. ಸದನಕ್ಕೆ ಕ್ಷಮಾಪಣೆ ಕೇಳಬೇಕು. ಇಷ್ಟರಮಟ್ಟಿಗೆ ಸತ್ಯವನ್ನು ಮರೆಮಾಚಿ, ಇಷ್ಟರಮಟ್ಟಿಗೆ ಅದಕ್ಕೆ ಪೊಲಿಟಿಕಲ್ ಕಲರ್ ಕೊಟ್ಟು, ಕಾನ್‌ಸ್ಟಿಟ್ಯೂಷನ್‌ಲ್ಲಾಗಿ ಬಂದಂಥ ಹಕ್ಕನ್ನು, ರಾಜ್ಯಾಂಗದತ್ತವಾಗಿ ದೊರಕಿದ್ದಂಥ ಹಕ್ಕನ್ನು, ನ್ಯಾಯಬದ್ಧವಾಗಿ ದೊರಕಿದ್ದಂಥ ಹಕ್ಕನ್ನು, ಫೈನಾನ್ಸ್ ಕಮಿಷನ್ ಎಲ್ಲಾ ಕ್ಲಿಯರೆನ್ಸ್ ಕೊಟ್ಟು ವರ್ಲ್ಡ್ ಬ್ಯಾಂಕ್ ಕ್ಲಿಯರೆನ್ಸ್ ಕೊಟ್ಟಂಥ ಪ್ರಾಜೆಕ್ಟ್‌ನ್ನು ಈ ಮಟ್ಟಕ್ಕೆ ತಂದಿಟ್ಟು ರಾಜಕೀಯ ಮಾಡಿದ್ದೀರಿ. ಇದು ದುರಂತ. ಬಹುಶಃ ಇತಿಹಾಸದಲ್ಲಿ ಇದಕ್ಕಿಂತ ಫಸ್ಟ್ ಕ್ಲಾಸ್ ದುರಂತ ಮತ್ತೊಂದು ಇರಲಾರದು.

ಶ್ರೀ ವಾಟಾಳ್ ನಾಗರಾಜ್ : ಫಸ್ಟ್ ಕ್ಲಾಸಾ? ಸೆಕೆಂಡ್ ಕ್ಲಾಸ್ ಯಾವುದು?

ಶ್ರೀ ವೈ. ರಾಮಕೃಷ್ಣ : ಅದು ಇನ್ನೊಂದು ಬರುತ್ತದೆ. ನಾನು ಹೇಳುತ್ತೇನೆ ಅದು ಬಂದಾಗ. ಅದಕ್ಕೋಸ್ಕರ ಅಧ್ಯಕ್ಷರೇ, ಒಂದು ವಿಚಾರ ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. There was no cause of action. There was no cause of action for them to go to Supreme Court. But, you have created a cause of action. ಇದನ್ನು ಒಪ್ಪುತ್ತೀರೋ? ನಿಮ್ಮ ಲಾ ಮಿನಿಸ್ಟರ್‌ನ್ನು ಕೇಳಿ. There was no cause of action earlier. By their visit, by their association with our officers and by their decision, they have gone to Supreme Court. No only that, you have created an evidence for them. ಇದು ಬಹಳ ಮುಖ್ಯವಾದುದು. You have created pucca evidence in their favour ಇವತ್ತು ಅವರು ಕೇಳುತ್ತಾರೆ. ನಾಲ್ಕು ಜನ

ಮುಖ್ಯಮಂತ್ರಿಗಳು, ಅಲ್ಲಿಗೆ ಹೋಗಿದ್ದಂಥ ನಿಮ್ಮ ಅಧಿಕಾರಿಗಳ ಬಗ್ಗೆ ಅವರು ಕೋಟ್ ಮಾಡುತ್ತಾರಲ್ಲಾ. ಕೋಟ್ ಮಾಡಲೇಬೇಕು. ಅವರು ಏನು ಹೇಳಿದ್ದಾರೆ ಹೇಳಲೇಬೇಕು. ಅಫಿಡವಿಟ್ ಫೈಲ್ ಮಾಡಲೇಬೇಕು. ಏನು ಹೇಳುತ್ತೀರಿ ಅದಕ್ಕೆ? ಇಲ್ಲ ಎಂದು ಹೇಳುತ್ತೀರೋ ಇದು ಲೀಗಲ್ ಮ್ಯಾಟರ್ ಅಷ್ಟೇ ಅಲ್ಲ ಕಾನ್‌ಸ್ಟಿಟ್ಯೂಷನಲ್ ಮ್ಯಾಟರ್. Legal matter, and political matter. Ultimately it touches all people. ಇದು ಜನರಿಗೆ ಸಂಬಂಧಪಟ್ಟಿರತಕ್ಕ ವಿಚಾರ.

ಇವೆಲ್ಲವನ್ನು ನೀವು ಮರೆತಿರಿ. ಏತಕ್ಕೆ? ಕುರ್ಚಿ ಉಳಿಸುವುದಕ್ಕೋಸ್ಕರ Are you justified? ತಪ್ಪು ಇದ್ದರೆ ಒಪ್ಪಿಕೊಳ್ಳಿ. ಕ್ಷಮಾಪಣೆ ಕೇಳಿ. ನಮಗೆ ಏನಾಗಿದೆ ಅಂದರೆ ಸುಪ್ರೀಂ ಕೋರ್ಟ್‌ನಲ್ಲಿ how to get over this? ಎನ್ನುವುದಾಗಿದೆ ನನಗೂ ಸ್ವಲ್ಪ ಎಲಿಮೆಂಟ್ ಆಫ್ ನಾಲೆಡ್ಜ್ ಇದೆ. ನೀವು ನಮಗೆ ಕಾಗದವನ್ನು ತೋರಿಸುವುದಿಲ್ಲ, ತೋರಿಸಿ ಅಂದರೆ ತೋರಿಸುವುದಕ್ಕೆ ಹಿಂಜರಿಯುತ್ತೀರಿ, ಆದರೆ ಬೇರೆಯವರಿಗೆ ತೋರಿಸುತ್ತೀರಿ. ಇವತ್ತು ಸನ್ಮಾನ್ಯ ಪ್ರಧಾನ ಮಂತ್ರಿಗಳು ಏನು ಹೇಳಿದರು ಅದನ್ನು ನಾನು ಒಪ್ಪಿದೆ. ಇದು ನಿಮ್ಮ ಮತ್ತು ಅವರ ರಾಜ್ಯಕ್ಕೆ ಸಂಬಂಧಪಟ್ಟಿದುದು, ನೀವು ಏನಾದರೂ ಮಾಡಿಕೊಳ್ಳಿ ಎಂದರು. ನಾವು ಅವರನ್ನು ಏತಕ್ಕೆ ದೂಷಿಸಬೇಕು? ಈ ವಾದವನ್ನು ಮಾನ್ಯ ಮುಖ್ಯಮಂತ್ರಿಗಳು ಮುರಿದಿಟ್ಟು ಯಾವ ಒಂದು ಕಮಿಟಿ ಇವತ್ತು ಹೋಗದೆ, ಬಹಿಷ್ಕಾರ ಮಾಡಿ ಎಂದು ಹೇಳುವುದಿಲ್ಲ. ಹೋಗದೆ ನಮ್ಮ ಪಾಡಿಗೆ ನಾವು ಎಕ್ಸಿಕ್ಯೂಷನ್ ಮಾಡಿಕೊಂಡಿದ್ದರೆ ಏನಾಗುತ್ತಿತ್ತು? ಬಹುಶಃ ಇವರು ಯೋಚನೆ ಮಾಡಬೇಕಾಗಿತ್ತು. ಏನು ಅಂದರೆ ಪ್ರಧಾನ ಮಂತ್ರಿಗಳು ಕುರ್ಚಿಗೆ ಧಕ್ಕೆ ಬಂದರೆ ಇಲ್ಲಿ ನನ್ನ ಕುರ್ಚಿಗೂ ಧಕ್ಕೆ ಬರುತ್ತದೆ ಎಂದು, ಮಾನ್ಯ ನಾಗೇಗೌಡರು ಹೇಳಿದರು, ಪ್ರಧಾನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಹೋದ ಮೇಲೆ ನಾವೇನು ಮಾಡಲಿ, ಇದು ಒಂದಕ್ಕೊಂದು ಚೈನ್ ಇದ್ದಹಾಗೆ. ಚೈನ್ ಕಿತ್ತು ಹೋಗದ ಹಾಗೆ ನೀವು ಬಿಗಿ ಮಾಡಿಕೊಂಡಿದ್ದೀರಿ, ಇವತ್ತು ಚೈನ್‌ಗೆ ಕಟ್ಟಿದ್ದ ಗೂಟಾನ್ನೇ ಕಿತ್ತುಕೊಂಡು ಬಂತು. ಅದಕ್ಕೇ ನಿಮ್ಮಲ್ಲಿ ನಾನು ಹೇಳುವುದು ನಮ್ಮ ರಾಜ್ಯಧ ಜನರನ್ನು ನಂಬಿ ಈ ಮಾನ್ಯ ಹೌಸನ್ನು ತಾವು ನಂಬಿ, ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಕೇಳಿ ಎರಡು ಕಿವಿ ಬಿಚ್ಚುಕೊಂಡಿತು. ನಾವೇನು ಪಿತೂರಿಗಾರರಲ್ಲ. ನಮಗೇನೂ ಸೀಟುಗಳು ಬೇಕಾಗಿಲ್ಲ, ನಮಗೆ ಇರುವುದು ಒಂದೇ ಒಂದು, ಅದು ಏನೆಂದರೆ ಜನರ ಹಿತರಕ್ಷಣೆ, ಆಗಬೇಕಾದ ಕೆಲಸ ಆಗಬೇಕು. 2000ನೇ ವರ್ಷದ ಒಳಗಾಗಿ ಬಚಾವತ್ ತೀರ್ಪಿನ ಮೇರೆಗೆ ಅಲ್ಲಿ ಕಟ್ಟಬೇಕಾದ ಆಣೆಕಟ್ಟಿನ ಎತ್ತರವನ್ನು ಮಾಡಬೇಕು. ತಾವು ಕಟ್ಟಿಸಿದ್ದೀರಿ. ಕ್ರೆಸ್ಟ್‌ಗೇಟ್‌ಗಳನ್ನು ಹಾಕುವುದಕ್ಕೆ ಇನ್ನೂ ತಡ ಏತಕ್ಕೆ? Come what may. ಇದೇನು ಸಿ.ಎಂ. ಪರ್ಸನಲ್ ಅಥವಾ ನಿಮ್ಮ ಪರ್ಸನಲ್ಲೇ? ಏತಕ್ಕೆ ಹೇಳುತ್ತೇನೆಂದರೆ ರಾಜಕೀಯ ವ್ಯಾಮೋಹ ಬಿಟ್ಟು ರಾಜಕೀಯ ಹಿತವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕಾರ್ಯೋನ್ಮುಖರಾಗಿ ಇದು ನಮ್ಮ ಪಕ್ಷದಿಂದ ಕೊಡತಕ್ಕಂಥ ಕರೆ. Immediate programme should be chalked out. ಏನು ಅಂದರೆ ಕ್ರೆಸ್ಟ್‌ಗೇಟ್ ಇಡಬೇಕು, ಎಲ್ಲಾ ರೆಡಿಯಾಗಿದೆ. 15 x 15 ಎತ್ತರದ ಕ್ರೆಸ್ಟ್‌ಗೇಟ್ ರೆಡಿಯಾಗಿದೆ. ನಾನೇ ಹೋಗಿ ನೋಡಿದ್ದೇನೆ. ಫಿಕ್ಸ್ ಮಾಡಬೇಕು ಅಷ್ಟೇ. ಗೌಡರೇ, ಹೊಳೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆನೇ ಎಂದು ದೊಣ್ಣೆ ನಾಯಕನ ಅಪ್ಪಣೆಗೆ ಕಾಯುತ್ತಾ ಕುಳಿತಿದ್ದೀರೋ? Go ahead with your work. Let us see. ಇವತ್ತು ಸಿ.ಎಂ.ರವರು ಬಹಳ ಉದ್ದವಾಗಿ ಭಾಷಣ ಮಾಡಿದ್ದಾರೆ. ನನಗೆ ಬಹಳ

ಆಶ್ಚರ್ಯ ಆಯಿತು. "ತಜ್ಞರ ಸಮಿತಿಯವರಿಗೆ ನೆಲೆ ಇಲ್ಲ, ಬೆಲೆ ಇಲ್ಲ" ಅವರು ಹೇಳಿದ್ದಕ್ಕೆ ಅವರಿಗೆ ನೆಲೆ ಇಲ್ಲ ಮತ್ತು ಅವರಿಗೆ ಬೆಲೆ ಇಲ್ಲ. ಇದು ಒಂದು ಅವೈಜ್ಞಾನಿಕ ವರದಿ, ಮತ್ತು ಆಂಧ್ರಪ್ರದೇಶದವರು ಬಚಾವತ್ ಆಯೋಗದ ಉಲ್ಲಂಘನೆಯನ್ನು ಸಮಿತಿಯವರು ಗಮನಿಸಿಲ್ಲ". ಯಾವಾಗ ಜ್ಞಾನೋದಯ ಆಯಿತು ಮಾನ್ಯ ಮುಖ್ಯಮಂತ್ರಿಯವರೆಗೆ ಈ ತರಹ ಸ್ಟೇಟಮೆಂಟ್ ಮಾಡುವುದಕ್ಕ? ಆಟ ಮುಗಿದು, ತಂತಿ ಕಿತ್ತು ಹಾಕಿದ ಮೇಲೆ ಆಯಿತೇ? ಇವತ್ತು ಪೇಪರ್‌ನಲ್ಲಿ ಬಂದಿದೆ. ಬಹುಶಃ ಬಾಯಿ ಬಿಟ್ಟು ಅವರು ಹೇಳಲಾರರು.I know he is a sensible Chief Minister. He has understood his folly and he has realised what he ought to have done as Chief Minister. ಇದಕ್ಕೆ ಏನು ಪರಿಹಾರ, ಇದು ನಾವು ಫಿಕ್ಸ್ ಮಾಡಬೇಕಲ್ಲಾ, ನಮಗೆ ಮತ್ತು ಜನತೆಗೆ ನೋವು ಆಗಿದೆಯಲಾ. ನಾನು ಒಂದು ಮಾತನ್ನು ಹೇಳುತ್ತೇನೆ, ನೀವು ಏನೇ ಎಷ್ಟೇ ಬಣ್ಣ ಕಟ್ಟಿ ಮಾತನಾಡಿದರೂ ಜನತೆಗೆ ಸಂಪೂರ್ಣವಾಗಿ ಅರ್ಥ ಆಗಿಬಿಟ್ಟಿದೆ. ನಿಮ್ಮ ಪ್ಲಾಟ್, ನಿಮ್ಮ ರಾಜಕೀಯ ತಂತ್ರಗಾರಿಕೆ, ಅನ್‌ನೆಸಸರಿ ಡಿಲೆ, ಎಕ್ಸ್‌ಪೆಂಡಿಚರ್ ಮಹಾ ಜನರಿಗೆ ಎಲ್ಲ ಗೊತ್ತಾಗಿಬಿಟ್ಟಿದೆ. ನೀವು ವಾಲ್ಯೂಮ್ಸ್ ಆಫ್ ಬುಕ್ಸ್ ಬರೆದು ಮನೆಗೆ ನೂರುನೂರು ಕೊಟ್ಟರೂ ಕೂಡ ಅದನ್ನು ಯಾರೂ ನಂಬುವುದಿಲ್ಲ. You have lost that creditibility. The Government has lost its creditibility on this issue and it has no moral right to sit in office even for a second. I demand the resignation of not only you,but also the Chief Minister, in the interest of the State.

ಶ್ರೀ ಹೆಚ್. ಎನ್. ನಂಜೇಗೌಡರು : ಅವರು ಕೊಡದೇ ಇದ್ದರೂ ಪರವಾಗಿಲ್ಲ, ಸಿ.ಎಂ. ಕೊಟ್ಟರೆ ಸಾಕಲ್ಲವೇ?

ಶ್ರೀ ವೈ. ರಾಮಕೃಷ್ಣ : ಜಾಸ್ತಿ ತಪ್ಪು ಮಾಡಿದವರು ಅವರು ನಾನು ಧೈರ್ಯದಿಂದ ಹೇಳುತ್ತಿದ್ದೇನೆ. ಏಕೆಂದರೆ ಸ್ವಾಮಿ ಬೆಳಗ್ಗೆ ಎದ್ದರೆ ಡೆಲ್ಲಿ ಮತ್ತೆ ಬೆಳಗ್ಗೆ ಬೆಂಗಳೂರು, ನಾವು ತಿಳಿದುಕೊಂಡಿದ್ದೆವು, ಏನೋ ಒಂದು ಸೂಪರ್ ಹ್ಯೂಮನ್ ಪವರ್‌ಇದೆ ಏನೋ ನಮ್ಮ ಗೌಡರ ಕೈಯಲ್ಲಿ ಏನೋ ಮಾಡುತ್ತಾರೆ ಎಂದು ಅಲ್ಲಿ ನೋಡಿದರೆ ಕಾವೇರಿ ನೀರಿಗೆ ಹೋಗಿ ಎಲೆಕ್ಟ್ರಿಸಿಟಿ ಪವರ್ ಕೂಡ ಕಳೆದುಕೊಂಡೆವು. ಈ ಕಡೆ ಕೃಷ್ಣಾ ನದಿ ನೀರಿಗಾಗಿ ಅನ್‌ನೆಸಸರಿ ಎವಿಡೆನ್ಸ್ ಕ್ರಿಯೇಟ್ ಮಾಡಿ, ಸುಪ್ರೀಂ ಕೋರ್ಟ್‌ಗೆ ಹ್ಯಾಂಡ್ ಕೊಟ್ಟಿದ್ದೇವೆ. ಇಂಥವರು ಮಂತ್ರಿಗಳಾಗಿರಬೇಕೇ? ಇಂಥವರು ಸಿ.ಎಂ. ಆಗಿರಬೇಕೆ? ಬಹುಶಃ ನೀವೇ ಕಂಟಿನ್ಯೂ ಆಗಿದ್ದೇ ಆದರೆ ದೇಶವನ್ನು ಮಾರಿಕೊಂಡು ಬಿಡುತ್ತೀರಿ. In one way or the other you have utterly failed. Therefore, I demand the resignation of the Chief Minister as well as yours. Thank You.

+ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಸನ್ಮಾನ್ಯ ಅಧ್ಯಕ್ಷರೆ, ಬಹುಶಃ ಈ ವಿಚಾರದ ಬಗ್ಗೆ ಮಾತನಾಡತಕ್ಕಂಥ ಕಾಲದಲ್ಲಿ ನಾನು ರಾಜಕೀಯ ಮಾತನಾಡುವುದಕ್ಕೆ ಹೋಗುವುದಿಲ್ಲ. ಅನೇಕ ವಿಚಾರಗಳು ನೆನಪಿಗೆ ಬರುತ್ತದೆ. ಆ ಭಾಗದಲ್ಲಿ ಕೃಷ್ಣ ಜಲಾಯನ ಪ್ರದೇಶದ ನೀರು ಹಾಳಾಗುತ್ತಿದೆ ಎಂದು ಹೇಳಿ, ಈ ಭಾಗದ ಜನ ಚೆನ್ನಬಸಪ್ಪನವರು, ಅವರ ನಾಯಕತ್ವದಲಿ ನಾವು, ಹೋರಾಟ

ಮಾಡಿದಂತಹ ದಿನಗಳು. ಈ ಸದನದಲ್ಲಿ ಎಷ್ಟು ಸಾರಿ ಚರ್ಚೆ ಆಗಿದೆಯೋ, ನಾನು ರಾಜಕೀಯವಾಗಿ ಮಾತನಾಡುವುದಿಲ್ಲ ಎಂದು ಏಕೆ ಹೇಳಿದೆ ಅಂದರೆ ನನ್ನ ಮನಸ್ಸಿಸಲ್ಲೇ ಒಂದು ತರಹ ಕಸಿವಿಸಿ. ಪ್ರಧಾನ ಮಂತ್ರಿಗಳನ್ನು ಕೇಳಿದೆ ನಾನು, ನೀವು ಇದ್ದು ಏಕೆ ಈ ರೀತಿ ಆಯಿತು ಎಂದು ಅವರು ಇದು ಎಲ್ಲಾ ಮುಗಿದಮೇಲೆ ನನಗೆ ಗೊತ್ತಾಯಿತು ಎಂದು ಹೇಳಿದರು. ನಾನು ಹೇಳಿದೆ ನಿಮ್ಮ ಕುರ್ಚಿಗೋಸ್ಕರ ಈ ರಾಜ್ಯದ ಹಿತವನ್ನು ಬಲಿ ಕೊಡಲು ತಯಾರು ಇದ್ದೀರೋ. ಅದನ್ನಾದರೂ ಹೇಳಿ ಬಿಡಿ, ನಿಮ್ಮ ವಿಚಾರಕ್ಕೆ ನಾವು ಮರೆತು ಬಿಡುತ್ತೇವೆ.

ನಿರಾಶೆ ಆಗುತ್ತದೆ ಎಂದು ಹೇಳಿದೆ. ರಾಜ್ಯದ ಹಿತಕ್ಕೆ ತೊಂದರೆ ಆದರೆ ಅಧಿಕಾರ ಬಿಟ್ಟೇ ಬರುತ್ತೇನೆ ಎಂದು ಡಿಕ್ಲೇರ್ ಮಾಡಿದರು. ಇನ್ನೂ ಒಂದು ಹೇಳಿದರು, ನೀರಾವರಿಗೆ 300 ಕೋಟಿ ರೂ. ದುಡ್ಡು ಕೊಡಲಿಲ್ಲ ಎಂದು ರಾಜೀನಾಮೆ ಕೊಟ್ಟೆ, ಮೊದಲ ಬಾರಿಗೆ ಸ್ವಾತಂತ್ರ ಬಂದಮೇಲೆ ನೀರಾವರಿಗಾಗಿ ದುಡ್ಡನ್ನು ಅಲಾಯಿದ ಇಟ್ಟೇ, ನೀರಾವರಿಗೆ ದುಡ್ಡನ್ನು ಅಲಾಯಿದ ಇಟ್ಟೆ ಅಂದರೆ ಅದನ್ನು ಒಂದು ರಾಜ್ಯಕ್ಕೆ ಕೊಡುವುದಕಾಗಲಿಲ್ಲ ಎಂದು ಜಾಸ್ತಿ ಇಡಬೇಕಾಗಿತ್ತು, ನನ್ನ ದೃಷ್ಟಿ ಇದ್ದುದ್ದು ಕರ್ನಾಟಕದ ಹಿತ ಎಂದು, ಇದು ಎಲ್ಲಾ ಹೇಳಿದರು, ಜೊತೆಗೆ ಇನ್ನು ಏನೇನೋ ನೆನಪು ಬರುತ್ತದೆ. ಇಂದಿರಾಗಾಂಧಿಯವರನ್ನು ಚಿನ್ನದಲ್ಲಿ ತೂಗಿದೆವು, ನಿಜಲಿಂಗಪ್ಪನವರನ್ನು ಬೆಳ್ಳಿಯಲ್ಲಿ ತೂಕ ಮಾಡಿದೆವು. 1966ರಲ್ಲಿ ಈ ಸಭೆಯಲ್ಲಿ ರೆಸೆಲ್ಯೂಷನ್ ಕೂಡ ಆಯಿತು. ಕೇಂದ್ರ ಸರ್ಕಾರ ಸಹಾಯ ಮಾಡಿ ಈ ಯೋಜನೆಯನ್ನು ಕೈಗೊಳ್ಳುತ್ತೇವೆ ಎಂದು ಹೇಳಿ ಸರ್ವಾನುಮತದ ರೆಸೆಲ್ಯೂಷನ್. ಚಿನ್ನದಲ್ಲಿ ತೂಗಿದೆವು ಏನೂ ಆಗಲಿಲ್ಲ, ಕ್ಲಿಯರೆನ್ಸ್ ಸಿಗಲಿಲ್ಲ. ಉಳಿದಿದ್ದು ಹೋಗಲಿ, ದುಡ್ಡು ಕೊಡುವು ಹೋಗಲಿ, ನಮ್ಮ ಯೋಜನೆಗೆ ಕ್ಲಿಯರೆನ್ಸ್ ಸಿಗಲಿಲ್ಲ. ಯಾರ್‍ಯಾರು ಏನೇನು ಮಾತನಾಡುತ್ತಾರೋ, ವೀರೇಂದ್ರ ಪಾಟೀಲರು ಈ ಅಪ್ಪರ್ ಕೃಷ್ಣಾಗೆ 9 ಲಕ್ಷ ಎಕರೆಗೆ ಅಪ್ರೂವ್ ಮಾಡಿದ್ದರು.

ಆಗ ಬಿಜಾಪುರಕ್ಕೆ 21 ಲಕ್ಷ ಎಕರೆಗೆ ನೀರು ಕೊಡಬೇಕು ಎಂದು ಇದ್ದಾಗ ನಾನು ಮಂತ್ರಿ ಆಗಬೇಕಾಗಿತ್ತು. ಅದು ಇರಲಿ ರಾಮಕೃಷ್ಣ ಹೆಗಡೆರವರು ಪ್ಲಾನಿಂಗ್ ಕಮಿಷನ್ ವೈಸ್ ಛೇರ್ಮನ್ ಆಗಿದರು. ಎಲ್ಲವನ್ನೂ ಮೆಲಕು ಹಾಕುತ್ತಿದ್ದೆ. ಅವರಿಂದಲೂ ಹೇಳಿಕೊಳ್ಳತಕ್ಕ ಸಹಾಯ ಆಗಲಿಲ್ಲ. ಪ್ರಧಾನ ಮಂತ್ರಿಗಳನ್ನು ಯಾವಾಗ ದೂರುತ್ತೇನೆ ನಾನು ಅಂದರೆ, ದೂರವುದಲ್ಲ ತರಾಟೆಗೂ ತೆಗೆದುಕೊಳ್ಳುತ್ತೇನೆ. ಯಾವಾಗ, ಈ ರಾಜ್ಯದ ಹಿತಕ್ಕೆ ತೊಂದರೆ ಆದರೂ ಕೂಡ ಅವರು ಅಧಿಕಾರದಲ್ಲಿ ಇದ್ದರೆ ಅವತ್ತು ದೂರುತ್ತೇನೆ. ನನಗೆ ನಂಬಿಕೆ ಇದೆ. ಈ ರಾಜ್ಯದ ಹಿತಕ್ಕೆ ಮಾರಕವಾದಂತಹ ಕೆಲಸ ಆದರೆ ಖುರ್ಚಿ ಒದ್ದು ಅವರು ಬರುತ್ತಾರೆ ಎಂಬ ಖಚಿತವಾದ ಭರವಸೆ ನನಗಿದೆ. ಉದಾಹರಣೆಗೆ, ಹೋದ ವರ್ಷ 900 ಕೋಟಿ ರೂ. ಇಟ್ಟಿದ್ದಾರೆ. ಎಲ್ಲಾ ತಮಾಷೆ ಮಾಡುತ್ತಾರೆ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ರಾಜ್ಯಗಳಿಗೆ ನೀರಾವರಿಗೆ ಹಣ ಕೊಡತಕ್ಕಂಥದ್ದು ಪುಕ್ಕಟ್ಟೆಯ ಮಾತಲ್ಲ. ಇವರು ಪ್ರಥಮ ಪ್ರಧಾನ ಮಂತ್ರಿ. ಈ ವರ್ಷ 1300 ಕೋಟಿ ರೂ. ಇಟ್ಟಿದ್ದಾರೆ. ಬಹುಶಃ ಎಲ್ಲರೂ ಹೊತ್ತು ಚೆನ್ನಾಗಿದ್ದರೆ 10 ಸಾವಿರ ಕೋಟಿ ಇಡತಕ್ಕಂಥ ಮನಸ್ಸು ಇದೆ. ಇದರಲ್ಲಿ ಗುಟ್ಟು ಗುಮಾನ್ ಇಲ್ಲ. ನನಗೆ ಆಪ್ತರಾಗಿದ್ದಾರೆ, ನಾನು ಚರ್ಚೆ ಮಾಡುತ್ತೇನೆ. ಜನ ಏನು ಬೇಕಾದರೂ ಅಂದುಕೊಳ್ಳಲಿ. ಇರತಕ್ಕಂಥದ್ದು, ಆದರೆ ಒಂದು ಮಾತನ್ನು ಹೇಳುತ್ತೇನೆ.

ಅವರನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ ಈ ರಾಜ್ಯದ ಹಿತಕ್ಕೆ ಮಾರಕವಾದಂತಹ ಕೆಲಸ ಅವರು ಇರುವ ಕಾಲದಲ್ಲಿ ಆಗುವುದಾದರೆ ಅವರು ಕುರ್ಚಿ ಒದ್ದು ಬರುತ್ತಾರೆಯೇ ಹೊರತು, ಅಲ್ಲಿ ಅಂಟಿಕೊಂಡಿರುವುದಿಲ್ಲ ಎನ್ನತಕ್ಕಂಥ ಮಾತು ನನಗೆ ಅರ್ಥವಾಗಿದೆ. ಇದರಲ್ಲಿ ನನಗೆ ಎಲ್ಲಿ ಡಿಸ್‌ಅಪಾಯಿಂಟ್ ಮಾಡುತ್ತಾರೋ ಗೊತ್ತಿಲ್ಲ, ಇರಲಿ ಇನ್ನು ವರದಿ, ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆ ಹೇಳುವುದಕ್ಕೆ ಹೋಗಿಲ್ಲ, ಏಕೆಂದರೆ ಅವರು ಏನೂ ಕೊಟ್ಟಿರುವುದಕ್ಕೆ ಸಾಧ್ಯವಿಲ್ಲ. ಆಂಧ್ರದವರು ಏನು ಹೇಳುತ್ತಾರೋ ಅದನ್ನು ಕೊಟ್ಟಿರುತ್ತಾರೆ. ನಾನು ವರದಿಯನ್ನು ಓದಿಲ್ಲ. ಈಗ ತಾನೇ ಕಳುಹಿಸಿಕೊಟ್ಟರು. ಆಂಧ್ರದವರು ಏನು ಹೇಳುತ್ತಾರೋ ನಾವು ತೆಲಗು ಗಂಗಾ 29 ಟಿ.ಎಂ.ಸಿ ಕಟ್ಟುತ್ತೇವೆ ಅಂದರೆ ಅದನ್ನೇ ಹೇಳಿರುತ್ತಾರೆ.

ನಾವು ಶ್ರೀಶೈಲಮ್‌ದಲ್ಲಿ ರೀಜನರೇಟ್ ಆದದ್ದು, ಆಮೇಲೆ ಮತ್ತೊಂದು ಸೇರಿಸಿಕೊಂಡು ಒಂದು 18 ಟಿಎಂಸಿಎಫ್‌ಟಿ ಉಪಯೋಗಿಸುತ್ತೇವೆ ಎಂದರೆ ಅದನ್ನೇ ಕೊಟ್ಟಿರುತ್ತಾರೆ. ಇದು ಆಂಧ್ರದವರು ಏನು ಹೇಳಿರುತ್ತಾರೆ, ಆಂಧ್ರದವರ ಮುಖವಾಣಿಯಾಗಿರುತ್ತದೆ. ನನಗೆ ಮೊದಲೇ ಅದು ಗೊತ್ತಿತ್ತು. ಅದ್ದರಿಂದ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಏನೆಂದರೆ ನಮ್ಮ ಅಳಲು, ನಮ್ಮ ದೂರು ಏನೆಂದರೆ ಯಾವ ರೀತಿ ಕೇಂದ್ರ ಸರ್ಕಾರ ಇಲ್ಲಿಯವರೆಗೆ ಅಗ್ರಿಮೆಂಟ್ ಮಾಡಿಕೊಂಡರು, ಜಮಾಖರ್ಚು ಇಡದೇನೇ ಹೋಗಿದೆ ಎನ್ನತ್ತಕ್ಕಂಥಾದ್ದನ್ನು ನಾನು ಎರಡು-ಮೂರು ಮಾತಿನಲ್ಲಿ ಹೇಳಬೇಕಾಗಿದೆ. ಅದಕ್ಕೆ ಅನಿವಾರ್ಯವಾಗಿ ತೆಲಗುಗಂಗಾ ಬಗ್ಗೆ ಎರಡು ಮಾತನ್ನು ಹೇಳಲಾಗಿದೆ.

1976 ಏಪ್ರಿಲ್‌ನಲ್ಲಿ ಒಂದು ಒಪ್ಪಂದ ಆಯಿತು. ಮದ್ರಾಸ್ ಅಥವಾ ಚೆನ್ನೈ ನಗರಕ್ಕೆ ಕುಡಿಯುವ ನೀರಿನ ಅಭಾವ ಇದೆ. ನಮ್ಮ ಮೂರು ರಾಜ್ಯಗಳನ್ನೂ ನೀವು ಐದೈದು ಟಿ.ಎಂ.ಸಿ.ಎಫ್.ಟಿ ನೀರು ಕೊಡಬೇಕು ಎಂದು ಕೇಳಿದರು ಮತ್ತು ಅದನ್ನು ಕೊಡುವುದಕ್ಕೆ ಒಂದು ಒಪ್ಪಂದ ಆಯಿತು. ಎಲ್ಲಿ ಕೊಡಬೇಕು, ಯಾವರೀತಿ ಕೊಡಬೇಕು ಅದು ಕೃಷ್ಣಾ ನದಿಯಿಂದ ಎಂದು ಆಗಬೇಕಲ್ಲಾ. ಅದಕ್ಕೆ ಎರಡನೇ ಒಪ್ಪಂದ ಆಯಿತು. ಆ ಎರಡನೇ ಒಪ್ಪಂದವನ್ನು ನಾನು ಕೋಟಮಾಡಲೇಬೇಕು. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಅಧ್ಯಕ್ಷರೇ, ಆಲಮಟ್ಟಿಯಲ್ಲಿ ನಾವೇನೂ ಹಾದರ ಮಾಡಿಲ್ಲ. ತಪ್ಪು ತಿಳಿಯಬೇಡಿ ನಾನು ಒರಟು ಭಾಷೆ ಉಪಯೋಗಿಸುತ್ತಿದ್ದೇನೆ ಎಂದು ಆಂಧ್ರದವರು ಮಾಡಬಾರದ್ದೆಲ್ಲಾ ಮಾಡುತ್ತಿರುತ್ತಾರೆ. ಮಾಡಬಾರದ್ದನ್ನೆಲ್ಲಾ ಮಾಡುತ್ತಾರೆ. ಯಾವ ಅಗ್ರಿಮೆಂಟ್ ಇರಲಿ, ಎಲ್ಲಾ ಬೀದಿಗೆ ಎಸೆಯುತ್ತಾರೆ. ಏನೇನೂ ಇಲ್ಲ. ಕೇಳುವವರೂ ಇಲ್ಲ. ನಮ್ಮನ್ನು ಮೆತ್ತಗಾಗಿರುವವರನ್ನು ಮೊಳಕೆಯಲ್ಲಿ ತಿವಿದರು ಎಂದು ಹೇಳಿ, ನೂಕುತ್ತಾ ಇರುವುದು, ತಳ್ಳುತ್ತಾ ಇರುವುದು. ಇದು ನಾವು ಎಷ್ಟೇ ಸರಿಮಾರ್ಗದಲ್ಲಿ ಇದ್ದರೂ ಕೂಡ ಮಾಡತಕ್ಕಂಥ ಕಾರ್ಯ. ಅಧ್ಯಕ್ಷರೇ, ಅಗ್ರಿಮೆಂಟ್ ಒಂದನ್ನು ನಾನು ಕೋಟ್ ಮಾಡಲೇಬೇಕಾಗುತ್ತದೆ. ಒಂದೈದು ನಿಮಿಷ ಆದರೆ ಆಗಲಿ. ಇದು ಭಾರಿ ಪ್ರಸ್ತುತವಾಗಿರತಕ್ಕಂಥಾದ್ದು.

The agreement reads thus :

``The agreement amongst the States of Andhra Pradesh, Karnataka, Maharastra and Tamil Nadu regarding conveying 15 TMC Krishnawater for water supply to Madras City.

Whereas agreement was reached in April, 1976 that Governments of Andhra Pradesh, Karnataka and Maharastra will each allow the use of 5 TMC ft Krishna water to Tamil Nadu for water supplies to

Madras City and whereas in pursuance of the said agreement various alternative schemes were formulated and their cost estimated by the officers of the concerned States and the Government of India.

The aforesaid studies were considered at a meeting convened by the Union Minister for Agriculture and Irrigation on 27th October 1977 which was attended by the Chief Minister of Karnataka, Tamil Nadu and Maharastra and the Minister for Medium Irrigation of Andhra Pradesh, the Minister for Major Irrigation of Karnataka and the Minister for Works, Tamil Nadu under the Chairmanship of Union Minister for Agriculture and Irrigation, and the following decisions are taken:

The Government of Tamil Nadu shall be permitted to draw not more than 15 TMC of water in a year from Srisailam Reservoir during the period 1st July to 31st October through a open lined canal from Srisailam to Pennar designed to carry a discharge not exceeding 1500 cusecs which will enable conveyance of water to Madras City. The arrangements for the conductor system shall be agreed upon by Andhra Pradesh and Tamil Nadu.

The Government of Andhra Pradesh will co-operate in the acquisition of land for providing necessary storage. Andhra Pradesh will also provide facilities for construction of the canals and other structures and also for the maintenance and operation of water supply system.

Tamil Nadu shall bear the cost of arrangement for conveying of water from Srisailam to Poondy and will bear the maintenance and operational charges. The details can be worked out by the Governments of Andhra Pradesh and Tamil Nadu.

The lined canal between Srisailam and Somasaila from the point of off-take to be agreed upon by Andhra Pradesh and Tamil Nadu shall not

be utilised for irrigation or other consumptive purposes. The Central Government will make arrangements to inspect the system during the operational stages and ensure that the withdrawal of water into water supply system from Srisailam doesn't exceed 15 TMCft in a water year and the system is utilised only for water supply to Madras City and for no other purposes.

This agreement is subject to formal ratification by the respective States".

ಎಲ್ಲಾ ಸೈನ್ ಹಾಕಿದ್ದಾರೆ. Respective States - ಆಮೇಲೆ ರ್‍ಯಾಟಿಫೈ ಮಾಡಿದ್ದಾರೆ. ಅದದ್ದು ಏನು ಈಗ? ಇದು ಆದದ್ದು 1500 ಕ್ಯೂಸೆಕ್ಸ ಬದಲಾಗಿ ಅದು 11,500 ಕ್ಯೂಸೆಕ್ಸ್ ಆಯಿತು. The Tamil Nadu is an abettor for the offence committed by Andhra Pradesh. The Government of India is an abettor for the offence committed by Andhra Pradesh.

ನನಗನ್ನಿಸುತ್ತದೆ ನಾವೇನು ಈ 5 ಟಿ.ಎಂ.ಸಿ. ಯಷ್ಟು ಕುಡಿಯುವುದಕ್ಕೆ ನೀರು ಕೊಡುತ್ತೇವೆ, ಎಂದು ಹೇಳಿದ್ದೆವು, ಅದರಿಂದಲೂ ವಾಪಸ್ಸು ಬರಬೇಕು ಎನ್ನುವ ಮಟ್ಟಕ್ಕೆ ನಾವು ಹೋಗಬೇಕಾಗುತ್ತದೆ ಎನ್ನುವಂಥ ಪರಿಸ್ಥಿತಿ ಬಂದಿದೆ. ಅವರು ಹೇಳಿದ್ದನ್ನು ಒಪ್ಪಿಕೊಂಡು ಏನು ಅಗ್ರಿಮೆಂಟ್ ಆಯಿತು, ಅದರ ಪ್ರಕಾರ ಕಟ್ಟದೇ ಇರತಕ್ಕಂಥ ಕ್ಯಾನಲ್‌ಗೆ, ಅಧ್ಯಕ್ಷರೇ ಇದು ಹೊಸದಾಗಿ ನಾವು ಅಬ್ಜೆಕ್ಷನ್ ತೆಗೆದುಕೊಂಡಿಲ್ಲ. ನೋಡಿ, 28.8.85ರಲ್ಲಿ ಪ್ರಧಾನಮಂತ್ರಿಗಳಿಗೆ ಒಂದು ಮೆಮೊರೆಂಡಮ್ ಅನ್ನು ಕೊಟ್ಟೆವು. We the undersigned MPs ಎಂದು ಎಲ್ಲರೂ ಸಹಿಹಾಕಿ....``Telugu-Ganga Project is illegally and unilaterally undertaken by the Government of Andhra Pradesh in the river Krishna basin much to the detriment of the Upper riparian States of Karnataka and Maharastra. The allocation of waters of river Krishna by Krishna Water Dispute Tribunal headed by Hon'ble Justice R.M.Bachawat...." ಎಂದು ಹೀಗೆ 10 ಪುಟಗಳ ಮೆಮೊರೆಂಡಮ್‌ಗೆ ಸಹಿ ಹಾಕಿ ಕೊಟ್ಟಿದ್ದೆವು. ನನಗನ್ನಿಸುತ್ತದೆ ಇದು ರೆಕಾರ್ಡಿನಲ್ಲಿ ಇರಬೇಕು ಎಂದು, I am placing it on the Table of the House.

ಬೇಕಾಗುತ್ತದೆ, ಮುಂದೆ ಯಾರಾದರೂ ಓದುವವರು ಇದ್ದರೆ ಲೋಕಸಭೆ ಸದಸ್ಯರು ಏನೇನು ಮಾಡಿದ್ದಾರೆ ಎನ್ನತಕ್ಕಂಥಾದ್ದಕ್ಕೆ ಇದು ಗೊತ್ತಾಗುತ್ತದೆ. ಇದಾದಮೇಲೆ 11.3.1988ರಲ್ಲಿ ಶ್ರೀಮಾನ್ ಹೆಚ್.ಡಿ.ದೇವೇಗೌಡರು ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿ ಆಗಿದ್ದರು. ನಮಗೆಲ್ಲಾ ಒಂದು ಪತ್ರ ಬರೆದರು ತೆಲಗುಗಂಗಾ ಈ ತರಹ ಆಗುತ್ತಿದೆ ಎಂದು ಹೇಳಿ ಕರ್ನಾಟಕ ಗವರ್ನಮೆಂಟ್ ವ್ಯೂಪಾಯಿಂಟ್ಸ್ ಎಂದು ಎಲ್ಲಾ ಹಾಕಿ ನಮಗೆ ಒಂದು ಪತ್ರ ಬರೆದರು. ಅವರು ಕೊಟ್ಟಿರುವ

ಮೆಮೊರೆಂಡಮ್ ಅದನ್ನೂ ನಾನು ಟೇಬಲ್ ಮೇಲೆ ಇಡುತ್ತೇನೆ. ರೆಫರೆನ್ಸ್‌ಗೆ ಇದೆಲ್ಲಾ ಬೇಕಾಗುತ್ತದೆ. ಇದು ಆದಮೇಲೆ ಪುನಃ 16.3.1988ರಲ್ಲಿ ಮಾನ್ಯ ರಾಜೀವಗಾಂಧಿಯವರು ಪ್ರಧಾನಮಂತ್ರಿಯಾಗಿದ್ದರು. ಅವರಿಗೆ ಪುನಃ ನಾವೆಲ್ಲರೂ ಲೋಕಸಭಾ ಸದಸ್ಯರು ಸೇರಿ ಇನ್ನೂ ಒಂದು ಮೆಮೊರೆಂಡಮ್ ಅನ್ನು ಕೊಟ್ಟೆವು. Memorandum on Telugu-Ganga Project-Krishna basin case of Karnataka. ಕೊಟ್ಟಿದ್ದೇ ಕೊಟ್ಟದ್ದುದು ನಾವು. ಇದನ್ನೂ ಪ್ಲೇಸ್ ಮಾಡುತ್ತೇನೆ. ಆಮೇಲೆ ಪುನಃ 23.3.1988ರಲ್ಲಿ ಇನ್ನೊಂದು ಮೆಮೊರೆಂಡಮ್ ಅನ್ನು ಕೊಟ್ಟೆವು. ನಮಗೂ ಆತುರ, ಅವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ, 11,500 ಕ್ಯೂಸೆಕ್ಸ್ ಅವರು ಬಳಕೆ ಮಾಡುತ್ತಿದ್ದಾರೆ ಎಂದು ಹೇಳಿ.ಅದನ್ನೂ I will place on the table. 23.3.1988ರಲ್ಲಿ ಎಲ್ಲಾರೂ ಸೇರಿ ಮೆಮೊರೆಂಡಮ್ ಅನ್ನು ಕೊಟ್ಟೆವು. ಇದು ಅಲ್ಲಿ ಹಾಗೆಯೇ ಬಿದ್ದಿದೆ. ಇದನ್ನೂ ನಾನು ಪ್ಲೇಸ್ ಮಾಡುತ್ತಿದ್ದೇನೆ. ಅದಾದಮೇಲೆ 1988ನೇ ಇಸವಿಯಲ್ಲಿ ನಾಲೆ ತೆಗೆಯುವುದಕ್ಕೆ ಹೇಳಿದರು ದೊಡ್ಡದು ಮಾಡಿಯೇಬಿಟ್ಟರು. ಪುನಃ ದೂರು ಕೊಟ್ಟೆವು. ಆಗ ಪುನಃ ರಾಜೀವ್‌ಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದರು. ಎಲ್ಲಾ ಲೋಕಸಭಾ ಸದಸ್ಯರು ಸೇರಿ ಪುಟಗಟ್ಟಲೆ ಮೆಮೊರೆಂಡಮ್‌ನ್ನು ಕೊಟ್ಟೆವು.

ನಮಗೂ ಕಸಬು ಇಲ್ಲ ಎಂದು ಹೇಳಿ ಬರೆದಿದ್ದೇ ಬರೆದದ್ದು. ಬಾಳೆಕುಂದ್ರಿ ಎಂದು ಒಬ್ಬರು ಇದ್ದರು. ಅವರಿಗೆ ಗೋಳು ಹೊಯ್ದುಕೊಳ್ಳುವುದು, ಅವರ ಅಸಿಸ್ಟೆನ್ಸ್ ತೆಗೆದುಕೊಳ್ಳುವುದು, ನಾವು ಡ್ರಾಫ್ಟ್ ಮಾಡುವುದು ಮತ್ತು ಕೊಟ್ಟಿದ್ದೇ ಕೊಟ್ಟಿದ್ದುದು. ಇದನ್ನೂ ನಾನು ಪ್ಲೇಸ್ ಮಾಡುತ್ತಿದ್ದೇನೆ. ಅದಾದಮೇಲೆ, ಪುನಃ 24.9.1988ರಲ್ಲಿ ಇನ್ನೊಂದು ಪತ್ರ ಮುಖೇನ ವಿನಂತಿಸಿಕೊಂಡೆವು. ಅಧಿಕಾರಿಗಳು ಹದ್ದುಮೀರಿ ಹೋಗುತ್ತಿದ್ದಾರೆ...

ಅಧ್ಯಕ್ಷರು : ಒಂದು ನಿಮಿಷ. Which are all the documents which you want them to become part of the proceedings you will have to kindly say that you are placing them on the Table of the House.

Sri H.N. Nanje Gowda : I have already said these are all I am placing on the table of the House. ನಾನು ಆಗಲೇ ಹೇಳಿಬಿಟ್ಟಿದ್ದೇನೆ.

MR.SPEAKER : We will incorporate it as part of the proceeding.

ಶ್ರೀ ಎಚ್.ಎನ್. ನಂಜೇಗೌಡ : ಏಕೆಂದರೆ ಯಾರಾದರು, ಇಂಟರೆಸ್ಟ್ ಇದ್ದವರು ಓದಿಕೊಳ್ಳಲಿ ಎಂದು. ನಾನು ಏನಾದರೂ ಓದುವುದಕ್ಕೆ ಹೋದರೆ ಒಂದು ದಿನ ಆಗಿಬಿಡುತ್ತದೆ.

ಅಧ್ಯಕ್ಷರು : ಥ್ಯಾಂಕ್ಯು.

ಶ್ರೀ ಎಚ್.ಎನ್. ನಂಜೇಗೌಡ : 24 ಸೆಪ್ಟೆಂಬರ್ 1988 ಇದನ್ನೂ I am placing on the Table of the House.ಇದು ಅದಾದಮೇಲೆ, ಅಷ್ಟರೊಳಗೆ ನಾನು ಲೋಕಸಭೆಯನ್ನು ಬಿಟ್ಟುಬಿಟ್ಟೆ.

4.2.1993ರಲ್ಲಿ ಶ್ರೀಮಾನ್ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದರು. ಅವರಿಗೆ ಒಂದು ಪತ್ರ ಬರೆದು ವಿನಂತಿಸಿಕೊಂಡೆವು. ನೀವು ಏಕೆ ಕಣ್ಣುಮುಚ್ಚಿಕೊಂಡು ಕುಳಿತಿದ್ದೀರಿ?

ಅನುಬಂಧ 1 ರಿಂದ 6 ರವರೆಗೆ ಸೇರಿಸಿದೆ.

12.00 ಪಿ.ಎಂ.

ಇದನ್ನೂ ನಾನು ಪ್ಲೇಸ್ ಮಾಡುತ್ತಾ ಇದ್ದೇನೆ, ಇವಿಷ್ಟನ್ನೂ ಇಟ್ಟುಕೊಳ್ಳಿ. ಅಧ್ಯಕ್ಷರೇ, ದುರ್ದೈವ ಏನೆಂದರೆ, ಮಾನ್ಯ ಶಂಕರಾನಂದರವರೇ, ನೀರಾವರಿ ಮಂತ್ರಿಗಳು. ಸ್ಕೀಮ್(ಬಿ) ಇಂಪ್ಲಿಮೆಂಟ್‌ಮಾಡಿ ಎಂದು, ಒಂದುಸಾರಿ ಅಲ್ಲ, ಅನೇಕಸಾರಿ ಕೇಳಿದ್ದೇವೆ. ಬಹುಶಃ ನಾವು ಲೋಕಸಭೆಯಲ್ಲಿ ಮಾತನಾಡಿದಂಥ ಕಾಲದಲ್ಲೆಲ್ಲಾ ಹೇಳಿದ್ದೇವೆ. ಅದು ಸಾಮಾನ್ಯ ಚರ್ಚೆ ಇರಬಹುದು. Fully fund the projects which are located in the droughtprone areas which are going to feed the droughtprone areas in the country.

ಇದನ್ನು ಹೇಳಿದೆವು. ಆದರೆ, ಏನೂ ಆಗಲಿಲ್ಲ. ಇದೆಲ್ಲಾ ಆಯಿತು. ಇವತ್ತು ಏಕೆ ಒಂದು ಉದಾಹರಣೆ ಕೊಟ್ಟೆ ಎಂದರೆ, ಆಂಧ್ರದವರು ಹೇಳಿದರು. ತೆಲಗು ಗಂಗಾ 29 ಟಿಎಂಸಿಗೇ ಪ್ಲಾನ್ ಮಾಡುತ್ತಾ ಇರತಕ್ಕಂಥಾದ್ದು ಎಂದು ಒಂದುಸಾರಿ ಇದು ಲೋಕಸಭೆಯಲ್ಲೂ ಚರ್ಚೆಗೆ ಬಂತು. ಕರ್ನಾಟಕದವರು ನೀರನ್ನೂ ಉಪಯೋಗಿಸಿಕೊಳ್ಳುವುದಿಲ್ಲ, ಬೇರೆಯವರು ಉಪಯೋಗಿಸುವುದಕ್ಕೂ ಬಿಡುವುದಿಲ್ಲ. ಇದೇನು ಅನ್ಯಾಯ, ಈ ಜನದ್ದು ಯಾವ ಲೆಕ್ಕ? ಕರ್ನಾಟಕದವರು ಮಾಯ ಮಂತ್ರ ಮಾಡುವುದಕ್ಕಾಗುತ್ತದೆಯೇ? ಶತಮಾನಗಳಿಂದ ನಮ್ಮನ್ನು ಪಾಳು ಬಿಟ್ಟಿದ್ದಾರೆ, ಚಾರಿತ್ರಿಕವಾದ ಹಿನ್ನೆಲೆ ತೆಗೆದುಕೊಂಡರೆ, ನಮಗೆ ಎಲ್ಲಿ ಅನುಕೂಲವಾಗಿದೆ? ಸ್ವತಂತ್ರ್ಯ ಬಂದಾದ ಮೇಲೆಯೂ ಇಲ್ಲ.1956ನೇ ಇಸವಿಯಾದ ಮೇಲೆ ನಾವು ಕಣ್ಣು ಬಿಡಬೇಕಾದರೆ, 1960-61ಆಯಿತು. ಆ ಭಾಗದ ಜನಕ್ಕೆ ನಾವು ಪಾಠ ಹೇಳಬೇಕಾಯಿತು. ನೀವು ಹೋರಾಟ ಮಾಡಿ ಎಂದು ಹೇಳಿ ಕೊಡಬೇಕಾಯಿತು. ನಮ್ಮ ಹಕ್ಕನ್ನು ನಾವು ರಿಯಲೈಸ್ ಮಾಡಿಕೊಳ್ಳುವಷ್ಟರಲ್ಲಿ, ಸ್ಟೇಟ್‌ರೀಆರ್ಗನೈಸೇಷನ್ ಆಗುವುದಕ್ಕೆ ಮುಂಚೆಯೇ ಬೇಕಾದಷ್ಟು ಏರಿಯಾ ಅವರು ಡೆವಲಪಮೆಂಟ್ ಮಾಡಿಕೊಂಡಿದ್ದರು. ತೆಲಗು ಮಾತನಾಡುವವರದ್ದೂ ಡೆವಲಪ ಆಗಿತ್ತು. ಮರಾಠಿ ಮಾತನಾಡುವವರೂ ಡೆವಲಪ್ ಆಗಿದ್ದರು. ಕನ್ನಡಿಗರು ಮಾತ್ರ ಉಳಿದುಕೊಂಡಿದ್ದರು, ಕನ್ನಡ ಪ್ರದೇಶ ಮಾತ್ರ ಉಳಿದುಕೊಂಡಿತ್ತು. ಹಣಕಾಸು ಇಲ್ಲ, ಇದನ್ನೆಲ್ಲಾ ಇಟ್ಟುಕೊಂಡು ನಾವು, please fully fund the projects in Krishna Basin ಎಂದು ನಾವು ಕೇಳಿಕೊಂಡೆವು. Because droughtprone ಏರಿಯಾದಲ್ಲಿ, ಇಡೀ ರಾಷ್ಟ್ರದಲ್ಲಿರತಕ್ಕ ಶೇಕಡ22 ಭಾಗ ನಮ್ಮಲ್ಲೇ ಇದೆ. ಇದಕ್ಕಿಂತ ಇನ್ನೇನು ಬೇಕು? ಆದ್ದರಿಂದ ಅಧ್ಯಕ್ಷರೇ, ಸ್ವತಂತ್ರ ಬಂದಮೇಲೆ, ಸ್ಟೇಟರೀಆರ್ಗನೈಸೇಷನ ಆದಮೇಲೆ, ಈ ಪರಿಸ್ಥಿತಿಯಲ್ಲಿ ನಾವು ಚಾರಿತ್ರಿಕವಾದಂಥ ಕಾರಣಕ್ಕೆ ಹಿಂದೆ ಬಿದ್ದಿದ್ದೇವೆ. ಏಕೆಂದರೆ, ನಾನು ಪದೇಪದೇ ಇದನ್ನು ನೆನೆಸಿಕೊಳ್ಳುತ್ತಿರುತ್ತೇನೆ. 1956ನೇ ಇಸವಿಯಾದ ಮೇಲೆ, ಆ ಪ್ರಾಜೆಕ್ಟ್ power generation ಮಾಡುತ್ತಾರಲ್ಲಾ, ಕೊಯ್ನಾ ಪ್ರಾಜೆಕ್ಟ್‌ನಲ್ಲಿ ನಿಮ್ಮ ಒರಿಜಿನಲ್‌ಪ್ಲಾನ್ ಅಪ್ರೂವ್ ಆದ ಪ್ರಕಾರ, ಬಿಜಾಪುರ ಜಿಲ್ಲೆಗೆ ನೀರಾವರಿಗೆ ಕೊಡಬೇಕಾಗಿತ್ತು.

ಆದರೆ, ಕೊಡಲಿಲ್ಲ. ಸ್ಟೇಟ್ ರೀಆರ್ಗನೈಸೇಷನ್ ಆಯಿತು. ಆ ಸರ್ಕಾರ ನಮಗೆ ಬರೆದರು, ನಾವು ಬರೆಯಲಿಲ್ಲ. ನಿಮ್ಮದು ಪ್ರಾಜೆಕ್ಟ್ ಏನಿದೆ, ನೀವು ನೀರು ತೆಗೆದುಕೊಳ್ಳಬೇಕಾಗುತ್ತದೆ, ನೀವು ಇಷ್ಟು ಕಟ್ಟೆಗೂ ದುಡ್ಡು ಕೊಡಬೇಕಾಗುತ್ತದೆ, ನಿಮ್ಮನಾಲೆಯನ್ನು ನೀವು ತೋಡಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಚರ್ಚೆ ಮಾಡೋಣ ಎಂದು ಅದೇನು ಬುದ್ಧಿವಂತಿಕೆಯೋ ಗೊತ್ತಿಲ್ಲ. ಅಂದಿನ ಸರ್ಕಾರದವರು ಬರೆದರು.

We are not interested for the present ಎಂದು. ನಮ್ಮ ತಲೆಮೇಲೆ ನಾವೇ ಕಲ್ಲು ಹಾಕಿಕೊಂಡಿದ್ದೇವೆ. ನಾವು ಬರೆದಿದ್ದೇವೆ, ಅವರು ಬರಿಯಲಿಲ್ಲ. We are not interested for the present ಎಂದು 1972ರಲ್ಲಿ ನಾನು ಮಂತ್ರಿಯಾದೆ. ಆಗ ನಾವು ಪುನಃ ಇನ್‌ಷಿಯೇಟ್ ಮಾಡಿದೆವು. ಆಗ ಅಲ್ಲಿ ಮುಖ್ಯಮಂತ್ರಿಗಳಾಗಿ ನಾಯಕ್‌ರವರು ಇದ್ದರು. ಇಲ್ಲಿ ಮಾನ್ಯ ದೇವರಾಜ್ ಅರಸು ಇದ್ದರು. ಅವರು ಹೇಳಿದರು, ಇಷ್ಟು ವರ್ಷವಾದ ಮೇಲೆ ಕೇಳಿದರೆ, ನಾವೇನು ಮಾಡೋಣ, everything is over. The project is over, we are utilising the water and we are nothing to do now ಎಂದರು.

ನಿಮ್ಮ ಷೇರ್‌ನಲ್ಲಿ ಏನು ಬರುತ್ತದೆಯೋ ಅದನ್ನು ನೀವು ಹೇಗೋ ಮಾಡಿಕೊಳ್ಳಿ. ಕೊಯ್ನಾ ರಿವರ್‌ನಿಂದ ಬಿಜಾಪುರ ಜಿಲ್ಲೆಗೆ ಎಷ್ಟು ಸಿಗಬೇಕಾಗಿತ್ತೋ ಅದಕ್ಕೆ ಆಮೇಲೆ ನಾವು ಲಿಫ್ಟ್ ಇರಿಗೇಷನ್ ಎಂದು ಮಾಡಿಕೊಂಡು, ಸೆಕೆಂಡ್‌ಸ್ಟೇಜ್ ಎಂದು ಮಾಡಿಕೊಂಡು 21 ಲಕ್ಷಕ್ಕೆ ಏರಿಸತಕ್ಕಂಥ ಕಾರ್ಯ ಮಾಡಬೇಕಾಯಿತು.

ಇದಕ್ಕೆ ರಾಜಕೀಯ ಕಾರಣಗಳೂ ಇವೆ. ನಾನು ಹೆಚ್ಚಿಗೆ ಹೇಳುವುದಿಲ್ಲ. ಮಾನ್ಯ ಜೆ.ಹೆಚ್.ಪಟೇಲ್‌ರು ಒಂದನ್ನು ಒಪ್ಪಿ ಕೊಳ್ಳಬೇಕಾಗುತ್ತದೆ. ನೀವು ಎಡವಿದ್ದೀರಿ, ನಾನೂ ಕೂಡ ಬಾರಿ ಯೋಜನೆ ಮಾಡಿದೆ. ಅಲ್ಲಿಗೆ ಏತಕ್ಕೆ ಹೋಗಬೇಕಾಗಿತ್ತು? ಇದೇನು ಒಂದು ಮನೆಯ ವಾರ್ತೆಯೇ? ಒಂದು ರಾಜ್ಯ ವ್ಯವಹಾರ ಬಂದಾಗ, ದೇಶದಲ್ಲಿ ಕಾನೂನು ಕಟ್ಟಳೆ ಇದೆ, ರಾಜ್ಯಾಂಗದ ಅಡಿಯಲ್ಲಿ ನಾವು ಕೆಲಸ ಮಾಡುತ್ತಾ ಇದ್ದೇವೆ. ನೀವು ಏಕೆ ಒಪ್ಪಿಕೊಂಡಿರಿ? ಆ 4 ಜನ ಮುಖ್ಯಮಂತ್ರಿಗಳು ಯಾರು ಅವರಿಗೆ ಬೇಕಾದರೆ ನಿಮ್ಮ ಮನೆಯಲ್ಲಿ ಊಟ ಹಾಕಿಸಿ ಕಳುಹಿಸಿ. ಆ ಪ್ರಶ್ನೆ ಬೇರೆ. ಮಹಾಜನ್‌ಕಮಿಷನ್ ಕೂಡ ಹೀಗೆಯೇ ಆಗಿದ್ದು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ತೀರ್ಮಾನ ಮಾಡುತ್ತಾರೆ. ಈ ರಾಜ್ಯದ ರಾಷ್ಟ್ರದ ಗ್ರಹಚಾರ ಏನೆಂದರೆ, ಕಾನೂನು ಚೌಕಟ್ಟಿನಲ್ಲಿ, ಆಗಬೇಕಾಂಥವು, ರಾಜ್ಯಾಂಗದ ನೆರಳಿನಲ್ಲಿ ಆಗಬೇಕಾದಂಥ ಕೆಲಸ ಪಕ್ಷದ ವೇದಿಕೆಯಲ್ಲಿ ತೀರ್ಮಾನವಾಯಿತು. ಕಾಂಗ್ರೆಸ್‌ಪಕ್ಷದ ವೇದಿಕೆಯಲ್ಲಿ ಮಹಾಜನ್ ಕಮಿಷನ್ ನೇಮಕವಾಯಿತು.

ಇದರ ಮೇಲೆ ಸರ್ಕಾರ ಒಂದು ಆದೇಶ ಹೊರಡಿಸಿತು.ಯಾವಾಗ ವೇದಿಕೆಯಲ್ಲಿ ಆಯಿತೋ, ನಾನು ಆವತ್ತೇ ಪ್ರಧಾನ ಮಂತ್ರಿಗಳನ್ನು ಕೇಳಿಕೊಂಡೆ. ನೀವು ಪಾರ್ಟಿ ಇದ್ದೀರಿ, ಮಹಾಜನ್ ಕಮಿಷನ್‌ಗೆ ಮಾಡಿದಹಾಗೆ ನೀವು ಸರ್ಕಾರ ಆದೇಶ ಹೊರಡಿಸುತ್ತೀರೋ ಎಂದು ಕೇಳಿದೆ. ಅದಕ್ಕೆ

ಅವರು ನನಗೂ ಅದಕ್ಕೂ ಸಂಬಂಧವೇ ಇಲ್ಲವೆಂದು ಹೇಳಿದರು. ಈಗ ಪ್ರಧಾನ ಮಂತ್ರಿಗಳ ಸ್ಟಾಂಡ್ ಏನು? ಅವರ ಪಾಲು ಎಷ್ಟಿದೆ, ಅಥವಾ ಏನೂ ಇಲ್ಲವೇ? ಅಥವಾ ನೀವೇ ಹೊಣೆಗಾರರೇ ಇದನ್ನೂ ಕೂಡ ಇವತ್ತು ನೀವು ಹೇಳಬೇಕಾಗುತ್ತದೆ.ಇಷ್ಟನ್ನು ಹೇಳಿ ಇವತ್ತು ಎಡವಿದ್ದೇವೆ ಎನ್ನುವುದನ್ನು ನೀವು ನೆನೆದುಕೊಂಡು ಮುನ್ನಡೆಯಿರಿ.

ಇದು ಏನಾಗುತ್ತದೆಂದರೆ, ಯಾವುದೋ ಹಂತದಲ್ಲಿ ಕಾವೇರಿ ಟ್ರಿಬ್ಯುನಲ್ ಮುಂದೆ, ನನ್ನದೊಂದು ಪ್ರೆಸ್ ಸ್ಟೇಟ್‌ಮೆಂಟ್ ತೆಗೆದುಕೊಂಡು ಹೋಗಿ, ಅದನ್ನೇ ಎವಿಡೆನ್ಸ್ ಎಂದು ಹಾಕಿದರು. ಈಗ ಅವರು ಎಂಥದ್ದೋ ರಿಪೋರ್ಟ್ ಕೊಟ್ಟಿದ್ದಾರೆ. ಆಂಧ್ರದವರು ಹೇಳಿಯೇ ಬರೆಸಿರಬಹುದು. ಏಕೆಂದರೆ, ಆಂಧ್ರದವರು 29 ಟಿಎಂಸಿಎಫ್‌ಟಿ ತೆಲುಗು ಗಂಗಾ ಲಿಮಿಟ್ ಮಾಡಿಕೊಳ್ಳುವುದಾಗಿದ್ದರೆ, ಸ್ಕೀಮ್ 'ಬಿ' ಒಪ್ಪಿಕೊಳ್ಳುತ್ತಾರೆ. ಸ್ಕೀಮ್(ಬಿ)ಯಲ್ಲಿ ಹತ್ತಿರ, ಹತ್ತಿರ 58 ಟಿಎಂಸಿಎಫ್‌ಟಿ ನೀರು ಅವರಿಗೆ ಸಿಗುತ್ತದೆ. ಇಲ್ಲಿದು 29; ಶ್ರೀಶೈಲಂ 18 ಟಿಎಂ.ಸಿಎಫ್‌ಸಿ. ಕಡ್ಡಾಯವಾಗಿ ಅವರು ಇದನ್ನು ಇರತಕ್ಕಂಥ 333 ಟಿಎಂಸಿಎಫ್‌ಟಿ ರಿಮೈನಿಂಗ್ ವಾಟರ್ ಏನಿದೆಯೋ ಅಷ್ಟನ್ನೂ ಅಪ್ರೋಪ್ರಿಯೇಟ್ ಮಾಡಿಕೊಂಡು, ಆಮೇಲೆ ನಾವು ಮಾಡಿಕೊಂಡು ಬಿಟ್ಟಿದ್ದೇವೆ, ಖರ್ಚಾಗಿದೆ ಎಂದರೆ It will become infructuous ಭತ್ತ ಎಲ್ಲಿ ಬೆಳೆದರೇನು? ಯಾರು ಬೆಳೆದರೇನು? ರಾಷ್ಟ್ರದ ಸ್ವತ್ತು. ಶರೀರದ ಯಾವುದೋ ಒಂದು ಭಾಗಕ್ಕೆ ಲಕ್ವಾ ಹೊಡೆದರೂ ಪರವಾಗಿಲ್ಲ. ಕರ್ನಾಟಕ ರಾಜ್ಯ ಇಂಬ್ಯಾಲೆನ್ಸ್ ಆದರೂ ಪರವಾಗಿಲ್ಲ. ರೀಜನಲ್ ಇಂಬ್ಯಾಲೆನ್ಸ್ ಆದರೂ ಪರವಾಗಿಲ್ಲ. ಇದನ್ನೆಲ್ಲಾ ಉಪಯೋಗಿಸಿಕೊಳ್ಳಬೇಕೆಂಬ ದುರುದ್ದೇಶವನ್ನು ಅವರು ಇಟ್ಟುಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹೇಳುತ್ತೀರಿ. ತಮ್ಮದೊಂದು ಲೆಟರನ್ನೇ as an ಎವಿಡೆನ್ಸ್ ಎಂದು ಹೇಳಿ, ತೆಗೆದುಕೊಂಡಿದ್ದಾರೆ ಎನ್ನುವ ಮಾತನ್ನು ಹೇಳಿದರು. Though it is irrelevant. ಅಂದರೆ, ನೀವು ಕೇಳಿಕೊಂಡಂತೆಯೇ, ಅದೇ ಒಂದು ಪೀಸ್ ಆಫ್ ಎವಿಡೆನ್ಸ್ ಎಂದು ಹೇಳಿ, ಅವರು ಸುಪ್ರೀಂ ಕೋರ್ಟಿನಲ್ಲಿ ಪ್ರಸೆಂಟ್ ಮಾಡಿದರು. ಅದಕ್ಕೇ ನಾವು ಹೇಳಿದ್ದುದು, ತಾವು ಆಗ ಇರಲಿಲ್ಲ. ಕೋರ್ಟ ಮುಂದೆ, ಟ್ರಿಬ್ಯುನಲ್ ಮುಂದೆ ಒಂದು ರೀತಿ ಎವಿಡೆನ್ಸ್ ಆಗುತ್ತದೆ ಎಂದು. ಪ್ರಧಾನ ಮಂತ್ರಿಗಳು 10ನೇ ತಾರೀಖು ಎಲ್ಲರಿಗೂ ಕರೆಯಿಸಿ, ಮೆಮೋರ್‍ಯಾಂಡಮ್ ಏನು ತೆಗೆದುಕೊಂಡರು, ಅದರಲ್ಲಿ ಮಾನ್ಯ ಜೆ.ಹೆಚ್. ಪಟೇಲರು ನಮ್ಮೆಲ್ಲರ ಪರವಾಗಿ ಒಂದು ಮೆಮೋರ್‍ಯಾಂಡಂ ಕೊಟ್ಟರು. ಆಂಧ್ರಪ್ರದೇಶದವರೂ ಕೊಟ್ಟರು, ಮಹಾರಾಷ್ಟ್ರದವರೂ ಕೂಡ ಕೊಟ್ಟರು. ಒಂದುಸಾರಿ ಮೀಟಿಂಗ್ ಕರೆದ ಮೇಲೆ, ಲೀಗಲಿ ಅಥವಾ ಇಲ್ಲೀಗಲಿ, ಅಲ್ಲಿ ಮೆಮೊರ್‍ಯಾಂಡಮ್ ಸಬ್‌ಮಿಟ್ ಮಾಡಿದ ಮೇಲೆ, ಪ್ರೊಸೀಡಿಂಗ್ಸ್ ಆದಮೇಲೆ, ಆ ಪ್ರೊಸೀಡಿಂಗ್ಸ್‌ನ್ನೂ ಎವಿಡೆನ್ಸ್ ಎಂದು ನಾಳೆ, ಕಾಲಫಾರ್ ಮಾಡುತ್ತಾರೆ ಅಥವಾ ಇಂಟ್ರೆಸ್ಟೆಡ್ ಪಾರ್ಟೀಸ್ ಪ್ರಸೆಂಟ್ ಮಾಡುತ್ತಾರೆ.

ಅದೇರೀತಿಯಾಗಿ ಈ ಎಕ್ಸ್‌ಪರ್ಟ್ ಕಮಿಟಿ ರಿಪೋರ್ಟ್ ಕೂಡ, ಲೀಗಲಿ ಕಾನ್ಸ್‌ಸ್ಟಿಟ್ಯೂಟ್ ಆಗದೇ ಹೋದರೂ ಇವತ್ತು ಅದೂ ಕೂಡ ಎವಿಡೆನ್ಸ್ ಎಂದೇ ಸುಪ್ರೀಂ ಕೋರ್ಟಿನಲ್ಲಿ ಬರುತ್ತಾ ಇದೆ. ಅದಕ್ಕೆ ನಾನು ಹೇಳುವುದೇನೆಂದರೆ, ಇದು ಪ್ರಾರಂಭವಾಗಿದ್ದೇ ಪ್ರಧಾನ ಮಂತ್ರಿಗಳ ಆಫೀಸಿನಿಂದ. ಅದಕ್ಕೆ

ಪ್ರೋತ್ಸಾಹ ನೀಡಿದ್ದು ಮುಖ್ಯಮಂತ್ರಿಗಳೂ ಕೂಡ. ಕೊನೆಗೆ ಎಡವಿದ್ದೂ ಕೂಡ ಅವರೇ. ಈ ಮಾತನ್ನು ಕೂಡ ಸ್ವಲ್ಪ ಗಮನಕ್ಕೆ ತರಬೇಕು. ತಾವು ಹೇಳಿದಹಾಗೆ, ಅವರ ಪಾಲಿಗೆ ಏನು ಬೇಕಾಗಿತ್ತು. ಅವರಿಗೆ (ಬಿ)ಸ್ಕೀಮಿನಲ್ಲಿ ಬರತಕ್ಕಂಥ 78 ಟಿಎಂಸಿ ನೀರು, ಇದ್ದರೆ, ಇವತ್ತು ಅವರು ಪ್ಲಾನ್ ಹಾಕಿದ್ದು 108 ಟಿಎಂಸಿ ನೀರಿಗೆ. ಅದು ಶ್ರೀಶೈಲಂ ರೈಟ್‌ಬ್ಯಾಂಕ್ ಇರಬಹುದು, ಲೆಫ್ಟ್ ಬ್ಯಾಂಕ್ ಇರಬಹುದು, ಪುಲಿಚಿಂತನ ಇರಬಹುದು ಅಥವಾ ತೆಲುಗು ಗಂಗಾ ಇರಬಹುದು. ಇವೆಲ್ಲಾ ಲೆಕ್ಕ ಹಾಕಿಕೊಂಡರೆ 108 ಟಿಎಂ.ಸಿ ಆದರೆ, ಆಗಸ್ಟ್ 10 ರಿಂದ ಪ್ರಾರಂಭವಾಯಿತಲ್ಲಾ, ಅದಕ್ಕೆ ಯಾರು ಹೊಣೆ ಎನ್ನುವುದನ್ನೂ ಸ್ವಲ್ಪ ಹೇಳಿದರೆ ಚೆನ್ನಾಗಿರುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ : ನಾವು ಎಕ್ಸಿಬಿಟ್ಟಾಗಿ ಯಾವುದನ್ನಾದರೂ ಕೋರ್ಟಿನಲ್ಲಿ ಪ್ರಸೆಂಟ್ ಮಾಡಬಹುದು. ಅದನ್ನು ಕೋರ್ಟಿನಲ್ಲಿ ಎವಿಡೆನ್ಸಾಗಿ ಪುರಸ್ಕಾರ ಮಾಡಬಹುದೇ, ಬಿಡಬಹುದೇ ಎಂಬುದು ಮೆರಿಟ್ ಮೇಲೆ ಹೋಗುತ್ತದೆ. ಅಥವಾ ಜಡ್ಜ್ ದಡ್ಡನಾದರೆ ಇನ್‌ಫ್ಲೂಯೆನ್ಸ್ ಆಗಲೂಬಹುದು. ಜಡ್ಜ್ ದಡ್ಡನಾದರೆ, ಮೆಟೀರಿಯಲ್ ಫ್ಯಾಕಟ್ಸ್ ಎಲ್ಲಾ ರಿಜೆಕ್ಟ್ ಮಾಡಿ ಇನ್‌ಫ್ಲೂಯೆನ್ಸ್ ಆಗಬಹುದು. ಆದರೆ ಎಗ್ಸಿಬಿಟ್ ಎಂದು.,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗೆ ಹೇಳುವುದಕ್ಕೆ ಬರುವುದಿಲ್ಲ. ಏಕೆಂದರೆ ಒಂದು ದೇಶದ ಪ್ರಧಾನ ಮಂತ್ರಿ ಒಮ್ಮೆ ಕರೆದು ಮಿಟಿಂಗ್ ಮಾಡಿದರು. ನಾಲ್ಕು ರಾಜ್ಯದ ಮುಖ್ಯಮಂತ್ರಿಗಳು ಸೇರಿ ಒಂದು ಕಮಿಟಿ ಮಾಡಿದರು. ಅದರಲ್ಲಿ ದಡ್ಡರೇ ಇಲ್ಲ. ಅನೇಕ ಎಕ್ಸ್‌ಫರಟ್ಸ್ ಇದ್ದಾರೆ ಅಂದಾಗ ಒಂದು ವರದಿ ಬಂದಾಗ ಸ್ವಲ್ಪವಾದರೂ ಸುಪ್ರೀಂ ಕೋರ್ಟಿನಲ್ಲಿ ಅದು ಪರಿಣಾಮ ಬಿರುತ್ತದೆಯೇ ಇಲ್ಲವೋ ಎನ್ನತಕ್ಕಂಥದ್ದು ನೋಡಬೇಕಾಗುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ಇರಲಿ. ಈಗ ಇದು ಏನಾಗಿದೆ ಎಂದರೆ ನಾವು ಸುಮ್ಮಸುಮ್ಮನೆ ತೊಡರುಗಾಲು ಹಾಕಿಸಿಕೊಂಡ ಹಾಗೆ ಆಗಿದೆ. ಅನಾವಶ್ಯಕವಾಗಿ ಅನಗತ್ಯವಾಗಿ ಇದೇನೂ ಅಗತ್ಯ ಇರಲಿಲ್ಲ. ಚಂದ್ರಬಾಬು ನಾಯ್ಡು ಬ್ಲಾಕ್‌ಮೇಲೆ ರಾಜಕೀಯ ಮಾಡುತ್ತಾರೆ ಪುಣ್ಯಾತ್ಮ. ಅಷ್ಟಕ್ಕೆ ನಿಲ್ಲಿಸುವುದಿಲ್ಲ. ಸಮಿತಿಯ ವರದಿಯನ್ನು ಸಭೆಯಲ್ಲಿ ಮಂಡಿಸುವುದು ಏನು ಇದೆ ಅದು ಆ ಸಭೆಯ ಪಾವಿತ್ರ್ಯವನ್ನೇ ಹಾಳು ಮಾಡಿದಂತೆ. ಆಂಧ್ರ ವಿಧಾನಸಭೆಯ ಪಾವಿತ್ರ್ಯತೆಯನ್ನು ಹಾಳು ಮಾಡಿದ್ದಾರೆ ಇವತ್ತ ಇಂಥ ಒಂದು ಅನಧಿಕೃತವಾದಂಥ ಒಂದು ರಿಪೋರ್ಟನ್ನು ಅಂಗೀಕರಿಸಿ. ನಾಳೆ ಪೇಪರ್‌ನಲ್ಲಿ ಒಂದು ವರದಿ ಬಂದರೆ ಅದನ್ನು ಅಡಾಪ್ಟ್ ಮಾಡಿಕೊಂಡು ಬಿಡಬಹುದಲ್ಲಾ ಒಂದು ಅಸೆಂಬ್ಲಿ. ಇದು ಲೀಗಲೀ ಕಾನ್‌ಸ್ಟಿಟ್ಯೂಟೆಡ್ ಅಲ್ಲ. ಕಾನ್‌ಸ್ಟಿಟ್ಯೂಷನ್ ಸ್ಟೇಟಸ್ ಇಲ್ಲ. ಇಂತಹ ಒಂದು ಚೂರು ಹಾಳೆ ತಂದು ಅಸೆಂಬ್ಲಿಯೊಳಗೇ ಅಡಾಫ್ಟ್ ಮಾಡಿಕೊಂಡು ತನ್ನ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡು ಆ ಅಸೆಂಬ್ಲಿಯ ಪಾವಿತ್ರ್ಯತೆಯನ್ನು ಹಾಳು ಮಾಡಿದ್ದಾರೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಇದಕ್ಕೆ ಏಕೆ ಅವಕಾಶ ಕೊಟ್ಟರು ಅಲ್ಲಿಯ ಸದಸ್ಯರು ಎನ್ನತಕ್ಕಂಥದ್ದು. I don't think Everybody is a parochial man in Andhras.

ಯಾರಾದರೂ ಹೇಳಬೇಕಾಗಿತ್ತು ಇದು ಸಭೆಗೆ ಘನತೆ ಗೌರವತರತಕ್ಕಂಥದು ಅಲ್ಲ ಈ ಕಾರ್ಯ ಎಂದು. ಅಷ್ಟು ತೊಡರಾಗುತ್ತದೆಂದು ನಾನು ಅಂದುಕೊಂಡಿಲ್ಲ ಅದಕ್ಕೆ ನಾನು ಅದನ್ನು ಓದಿದೆ. ತೊಡರಾಗುತ್ತದೆ ಎನ್ನುವಂಥದ್ದೇನಿಲ್ಲ. ಇದನ್ನು ಪೊಲಿಟಿಕಲ್ ಪರ್ಪಸ್‌ಗೆ ಉಪಯೋಗಿಸಿಕೊಳ್ಳಬಹುದೇ ಹೊರತು ಇವರಲ್ಲಿ ಅಂಥ ಹೇಳತಕ್ಕದ್ದು ಮೇರಿಟ ಆಗಲಿ, ಮತ್ತೊಂದು ಆಗಲಿ ಏನೇನೂ ಇಲ್ಲ. ಅಲ್ಲಿ ಸಪೋರ್ಟಿಂಗ್ ಆಗಿ ಅಲ್ಲಿ ಆರ್ಗ್ಯುಮೆಂಟ್ ಏನು ಇಲ್ಲ, ಅವರು ಕೊಟ್ಟಿರುವುದಕ್ಕೆ ಆಂಧ್ರದವರು ಹೇಳಿದ್ದಾರೆ ಅವರು ಬರೆದಿದ್ದಾರೆ. ನಾನು ಇಷ್ಟು ಅಲ್ಲಿರತಕ್ಕಂಥನ್ನು ಓದಿದ್ದೇನೆ. ಇದು ಏನಾಗುತ್ತದೆಂದರೆ ತೆಲುಗು-ಗಂಗಾ ಆಯಿತು, ಅದು ವಯಲೇಷನ್. ಶ್ರೀಶೈಲಂ ಲೆಫ್ಟ್ ಬ್ಯಾಂಕ್ ಆಯಿತು ಅದು ವಯಲೇಷನ್. ಶ್ರೀಶೈಲಂ ರೈಟ್‌ಬ್ಯಾಂಕ್ ಆಯಿತು ಅದು ವಯಲೇಷನ್. ಪುಲಚಿಂತ ಆಯಿತು ವಯಲೇಷನ್. ಎಷ್ಟು ವಯಲೇಟ್ ಮಾಡುತ್ತಾರೆ ಅವರು ? ಅವರು ರಾಷ್ಟ್ರದ ಮುಂದೆ ಹರಿಶ್ಚಂದ್ರರರು, ಸತ್ಯವಂತರು ಏನೇನೂ ಮಾಡಲಿಲ್ಲ. ಪ್ಲಾನಿಂಗ್ ಕಮಿಷನ್ ಅಪ್ರೂವಲ್ ಕೊಟ್ಟಿದೆ. ಹಳ್ಳಿ ಹುಡುಗನಿಗೂ ಗೊತ್ತಾಗುತ್ತದೆ. ಅವರು ಏನು ವಿದ್ಯಾವಂತರು ಆಗಬೇಕೆಂದಿಲ್ಲ. ಪವರ್ ಪ್ರೊಡ್ಯೂಸ್ ಆದಮೇಲೆ ಜನರೇಟ್ ಆದಮೇಲೆ ಆ ನೀರು ಅವರಿಗೆ ವಾಪಸ್ ಹೋಗುತ್ತದೆ. ಆ ವ್ಯಾಲಿಗೆ ಎಂದು ಇದಕ್ಕಿಂತ ಇನ್ನೇನು ಬೇಕು ? ದಡ್ಡತನ, ನಗೆಪಾಟಲು, ಇದನ್ನು ತೆಗೆದುಕೊಂಡು ಹೋಗಿ ಅಯ್ಯಯ್ಯೋ ಪವರ್ ಜನರೇಟ್ ಮಾಡುತ್ತಾರೆ ಎನ್ನುತ್ತಾರೆ.

ಹಿಂದೆ ಅರಸು ಅವರ ಕಾಲದಲ್ಲಿ ನಾನು ಬಿಟ್ಟಮೇಲೆ ಒಂದು ಪವರ್ ಪ್ರಾಜೆಕ್ಟ್‌ಗೆ ಮದ್ರಾಸಿನವರಿಗೂ ನಮಗೂ ಒಂದು ವ್ಯವಹಾರ ನಡೆಯಿತು. ಹೊಗೇನಕಲ್‌ನಲ್ಲಿ. ಅವರದೇನು ಕಂಡೀಷನ್? ನೀವು ಪವರ್ ಜನರೇಟ್ ಮಾಡಿ, ನೀವೇ ಕಟ್ಟಿಕೊಳ್ಳಿ, 300 ಟಿ.ಎಂ.ಸಿ.ಎಫ್.ಟಿ ಜನರೇಟ್ ಮಾಡಿ ಎಂದು ಒಪ್ಪಿಕೊಳ್ಳುವ ಹಂತದಲ್ಲಿತ್ತು ಆವತ್ತು ಕರ್ನಾಟಕ ಸರಕಾರ. ನಾವೆಲ್ಲಾ ಬಾಯಿ ಹಾಕದೇ ಇದ್ದರೆ ವಾಟಾಳರೇ,300 ಟಿ.ಎಂ.ಸಿ.ಎಫ್.ಟಿ ನೀರಂತೂ ಗ್ಯಾರಂಟಿ ಆಗಿಬಿಡುವುದು. ಪವರ್ ಜನರೇಟ್ ಮಾಡಿದರೆ ಬಹುಶಃ ಜನರೇಟ್ ಮಾಡಿಬಿಡಿ ಅಂದುಬಿಡಬೇಕಾಗಿತ್ತು. ಏಕೆಂದರೆ ಎಲ್ಲಾ ನೀರು ಅವರಿಗೇ ಹೋಗುವುದಿಲ್ಲ. ಅಂದರೆ ಇಂಥ ಒಂದು ಪ್ರೈಮಾಫೇಸಿ. ಅಂಗೈ ಹುಣ್ಣಿಗೆ ಕನ್ನಡಿ ಬೇಕಾ? ಪವರ್‌ಗೆ ನೀರು ಉಪಯೋಗಿಸಿಕೊಂಡರೆ ನದಿಗೆ ಹರಿದು ಹೋಗುತ್ತದೆ, ಅದು ಅವರಿಗೇ ಹೋಗುತ್ತದೆ. ಇದು ಕಾಲು ಕರೆದುಕೊಂಡು ತೀಟೆ ಜಗಳ. ಈಗ ಇನ್‌ಸ್ಟೆಬಿಲಿಟಿ ಇರಬಹುದು ಆಂಧ್ರ ಚೀಫ್ ಮಿನಿಸ್ಟರ್‌ಗೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಎಲ್ಲರಿಗೂ ಇರುತ್ತದೆ.

ಆದರೆ ಇಂಥ ಮಹತ್ವದ ವಿಚಾರಗಳನ್ನು ತೆಗೆದುಕೊಂಡು ತನ್ನ ಕುರ್ಚಿ ಉಳಿಸಿಕೊಳ್ಳುವುದಕ್ಕೆ ಇವರಲ್ಲಿ ರಾಜಕೀಯ ಮಾಡಿಕೊಳ್ಳಬಾರದು. ಬೇರೆ ವಿಚಾರ ಮಾಡಿಕೊಳ್ಳಲಿ ಅವರು. ಈಗ ಹಾರ್ಸ್ ಟ್ರೇಡಿಂಗ್ ಆಗುತ್ತಿರುತ್ತದೆ. ಮತ್ತೊಂದು ಆಗುತ್ತಾ ಇರುತ್ತದೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಾರೆ. ಎಲ್ಲಾ ರಾಜ್ಯದಲ್ಲೂ ಆಗುತ್ತಲೇ ಇದೆ. ಅದೇನಾದರೂ ಮಾಡಿಕೊಳ್ಳಲಿ. ಹೋಗಿಹೋಗಿ ಕೃಷ್ಣಾ ಟ್ರಿಬ್ಯೂನಲ್‌ನಲ್ಲಿ ತೀರ್ಮಾನ ಕೊಟ್ಟಿದ್ದಾರೆ. ಇಂಥ ಒಂದು ಇಷ್ಯೂ ತೆಗೆದುಕೊಂಡು ಇದರಲ್ಲಿ ಒಂದು ಜನಾಭಿಪ್ರಾಯ ರೂಢಿಸುತ್ತೇನೆ, ಬ್ಲಾಕ್‌ಮೇಲೆ ಮಾಡುತ್ತೇನೆ ಎನ್ನತಕ್ಕ ಕಾರ್ಯ ಮಾಡತಕ್ಕಂಥದ್ದು

ಯಾವುದೇ ರಾಜಕಾರಣಿಗೆ ರಾಷ್ಟ್ರದಲ್ಲಿ ಶೋಭಿಸುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಿ ಇವತ್ತು ಹೆಚ್ಚಿಗೆ ಮಾತನಾಡದೇ ಸರ್ಕಾರದಿಂದಲೇ ಜಾಸ್ತಿ ಉತ್ತರ ನಿರೀಕ್ಷೆ ಮಾಡುತ್ತೇವೆ ನಾವು. ನಾನು ಮಾತನಾಡುವುದಕ್ಕಿಂತ ಅವರು ಮಾತನಾಡುವುದೇ ಹೆಚ್ಚಿಗೆ ಇದೆ. ಏಕೆಂದರೆ ಇವತ್ತು ಮುಖ್ಯಮಂತ್ರಿಗಳು ಹೊರಗೆ ಬರಬೇಕಾಗಿದೆ. ಅವರ ಬಗ್ಗೆ ಅನುಮಾನಗಳು ಹುಟ್ಟಿಕೊಂಡಿವೆ. ಅನುಮಾನ ಅಂದರೇನು? ಎಡವಿದರು ಎಂದು ಎಲ್ಲಿ ತಪ್ಪು ಮಾಡಿದರು ಎಂದು. ನಾನು ತಪ್ಪು ಮಾಡಿಲ್ಲ ಎಂದು, ಅವರು ಹೊರಗೆ ಬರಬೇಕು. ಏನು ಮಾಡುತ್ತೀರಿ? ಏನು ಪರಿಹಾರ ಕಂಡುಹಿಡಿದಿದ್ದೀರಿ? ಯಾಕೆ ಇದು ಹುಲ್ಲುಕಡ್ಡಿ ಹೋಗಿ ಬೆಟ್ಟ ಆಯಿತು? ಇದು ಹುಲ್ಲುಕಡ್ಡಿಯೇ ನನ್ನ ದೃಷ್ಟಿಯಲ್ಲಿ. ಬೆಟ್ಟ ಆಗಿದೆ ಇವತ್ತು. ಗುಡ್ಡ ಆಗಿದೆ ಇವತ್ತು ಒಂದು ಹುಲ್ಲುಕಡ್ಡಿ ಹೋಗಿ. ಅದನ್ನು ಯಾವರೀತಿ ಅನ್ನತಕ್ಕದ್ದನ್ನು ಅವರೇ ಉತ್ತರ ಕೊಡಲಿ ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನನಗೂ ನಂಜೇಗೌಡರಿಗೂ 35 ವರ್ಷಗಳ ಸ್ನೇಹ. ಪಟೇಲ್‌ರ ಜೊತೆಯಲ್ಲೂ ನಾನು 30 ವರ್ಷ ಓಡಾಡಿದ್ದೇನೆ. ಅವತ್ತಿನ ಕ್ಷಾತ್ರ, ಆ ಶಕ್ತಿ, ಆ ಸಿಂಹಗರ್ಜನೆ ಇವತ್ತು ಸ್ವಲ್ಪ ಕಡಿಮೆಯಾಯಿತು ಏನೋ ಎಂದು ನನ್ನ ಮನಸ್ಸಿಗೆ ಭಾಸವಾಗುತ್ತಿದೆ. ನಾನು ನಂಜೇಗೌಡರು 1967ರಲ್ಲಿ ಒಟ್ಟಿಗೆ ಬಂದೆವು. ಆಗ ಪಟೇಲರು ಲೋಕಸಭೆಯಲ್ಲಿದ್ದರು. ಅವರ ಶಕ್ತಿಯುತವಾದ ಹೋರಾಟ, ಬಿಸಿರಕ್ತದ ಆ ಚೈತನ್ಯದ ಮಾತುಗಳು ಅದು ಇವತ್ತು ಇತಿಹಾಸದಲ್ಲಿ ಹೋಗತಕ್ಕ ಮಾತುಗಳೇ. ಅವರ ಬಗ್ಗೆ ನನ್ನದೇನೂ ತಕರಾರಿಲ್ಲ. 30 ವರ್ಷಗಳಲ್ಲಿ ರಕ್ತಗಳೆಲ್ಲಾ ಬದಲಾವಣೆ ಆಗಿಬಿಟ್ಟರೆ ಪರಿಸ್ಥಿತಿ ಹೇಗೆ? ಆ ಶಕ್ತಿ ಆ ಕ್ಷೇತ್ರಕ್ಕೆ ರಾಜ್ಯದ ಬಗ್ಗೆ ಎಲ್ಲಿಯವರೆಗೆ ಬೇಕಾದರೂ ನಿಲ್ಲುತ್ತೇವೆ ಎನ್ನುವ ದಿಕ್ಕು ತಪ್ಪಿ ಎಲ್ಲೋ ಹೋಗುತ್ತಿದೆಯಲ್ಲಾ ಎನ್ನುವಂಥ ಮನಸ್ಸಿನ ವೇದನೆ ಮತ್ತು ನೋವು ಅನುಭವಿಸುತ್ತಿದ್ದೇವೆ ನಾವು. ನಾವು ಅವರು ಸ್ನೇಹಿತರೇ ನೀನು ಸರಿಯಿಲ್ಲ ನೀನು ಸರಿಯಿಲ್ಲ ಅಂದಕೊಂಡು ಬಿಟ್ಟರೆ ಇದು ವೇದಿಕೆಯಲ್ಲ ಅದಕ್ಕೆ, ಆದರೆ ಈ ರಾಜ್ಯದಲ್ಲಿ ನೀರಾವರಿ ಬಗ್ಗೆ ಚೆನ್ನಬಸಪ್ಪನವರು ನಂತರ ನಂಜೇಗೌಡರು. ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಶಕ್ತಿ ಕುಂದುತ್ತದೆ ಅನ್ನುವ ನೋವು ಅಷ್ಟೆ ನನಗೆ. ಅದರ ಬಗ್ಗೆ ಚಕಾರ ಏನೂ ಇಲ್ಲ, ಏಕೆಂದರೆ ಯಾವುದೇ ಸಂದರ್ಭದಲ್ಲಿ ಅಧಿಕಾರದಲ್ಲಿರಲಿ ಇಲ್ಲದೇ ಇರಲಿ.

ಅಧ್ಯಕ್ಷರು : ನೀವು ಏನು ಹೇಳುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದು ನನಗೆ ಅವರಿಗೆ ಇಬ್ಬರಿಗೆ ಅರ್ಥವಾಗುತ್ತದೆ.

ಅಧ್ಯಕ್ಷರು : ಈ ಸಭೆಗೆ ಅರ್ಥವಾಗುವುದು ಬೇಡವೋ?

ಶ್ರೀ ಹೆಚ್.ಎನ್.ನಂಜೇಗೌಡರು : ಈಗಲೂ ನಾನು ಮಾತ್ರೆ ತೆಗೆದುಕೊಂಡೆ. ನನಗಿನ್ನೂ ಹುಷಾರಿಲ್ಲ. ವಾಟಾಳ್‌ರು ತಪ್ಪು ತಿಳಿದುಕೊಳ್ಳುವುದು ಬೇಡ. ನಿಮಗೇನು ವೇದನೆಯಾಯಿತು. ಅದರ ಹತ್ತರಷ್ಟು ವೇದನೆ ನನಗೂ ಆಗುತ್ತದೆ. ರಾಜ್ಯದ ನೀರಾವರಿ ಬಗ್ಗೆ ಅನ್ಯಾಯ ಆದರೆ, ನಾವು ಯಾರಿಗೂ ಕಡಿಮೆ ಇಲ್ಲ. ಯಾವುದೂ ಕಡಿಮೆ ಆಗಿಲ್ಲ. ಸ್ವಲ್ಪ ಅನಾರೋಗ್ಯ ಇರುವುದರಿಂದ ನಾನು ಜಾಸ್ತಿ ಹೊತ್ತು

ಮಾತನಾಡಿಲ್ಲ. ಜಾಸ್ತಿ ಟೀಕೆ ಮಾಡಿಲ್ಲ. ಏಕೆಂದರೆ ಅನಗತ್ಯವಾಗಿ ಟೀಕೆ ಮಾಡುವುದು ಬೇಡ ಎಂದು ನಾನು ರಾಜಕೀಯ ಮಾಡುವುದು ಬೇಡ ಎಂದು ನನ್ನ ತೀರ್ಮಾನ ಮೊದಲೇ ಹೇಳಿಬಿಟ್ಟೆ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ನನಗೆ ಅನಿಸುತ್ತದೆ. ಎದ್ದರೆ ಬಿದ್ದರೆ ಯಾವಾಗಲೂ ಈ ತರಹಃ ಅನ್ಯಾಯವಾಗಿದೆಯೆಂದು ನನಗೆ ಅವರು ಫೋನ್ ಮಾಡುವುದು ನಾನು ಅವರಿಗೆ ಫೋನ್ ಮಾಡುವುದು, ತಕ್ಷಣ ಬೆಳಿಗ್ಗೆ ಒಂದು ಸಭೆ ಸೇರಬೇಕು, ಅದಕ್ಕೊಂದು ಗದ್ದಲ ಆಗಬೇಕು ಇದು ನಡೆದುಕೊಂಡು ಬಂದಿರತಕ್ಕಂಥ ರೀತಿ ನೀತಿಗಳು. ಪಟೇಲರು ಅಷ್ಟೇ ಈ ದೇಶದಲ್ಲಿ ಯಾರಿಗೂ ಹೆದರತಕ್ಕಂಥ ಆಸಾಮಿ ಅಲ್ಲ. ಬಹಳ ಗಟ್ಟಿಯಾಗಿ ನಿಲ್ಲತಕ್ಕಂಥವರು. ಏನು ಒಂದು ತರಹಃ ಆ ಗಟ್ಟಿತನ ಅದೆಲ್ಲಾ ಬದಲಾವಣೆಯಾಗಿ ಏನು ಒಂದು ರೀತಿ ಬದಲಾವಣೆಯಾಗಿದೆ ಏನೋಎನ್ನುವ ಭಾವನೆ ನನಗೆ ಉಂಟಾಗಿದೆ. ಅದೇ ಪಟೇಲರು ಹೌದೋ ಅಥವಾ ಅಲ್ಲವೋ ಒಂದು ಸ್ವಲ್ಪ ಅನುಮಾನ ಬರುತ್ತಿದೆ. ನಾನೇ ಅವರ ಜೊತೆ30 ವರ್ಷಗಳು ಓಡಾಡಿಕೊಂಡು ನೋಡಿದವನಿಗೇ ಒಂದೊಂದು ಸಾರಿ ಆ ತರಹ ಅನುಮಾನ ಬರುತ್ತದೆ ಅದಕ್ಕೆ ಕಾರಣಗಳು ಏನು. ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದು ಅದು ಸರಿಯಲ್ಲ. ಅವರು ಮುಖ್ಯಮಂತ್ರಿಗಳಾಗಿದ್ದಾರೆ. ಆಗ ಅವರು ಮುಖ್ಯಮಂತ್ರಿಗಳಾಗಿರಲಿಲ್ಲ. ಆದರೆ ಈಗ ಅವರ ಸುತ್ತ ಅನೇಕ ಸಮಸ್ಯೆಗಳು, ಆ ಸಮಸ್ಯೆಗಳ ಮಧ್ಯೆ, ಆ ಸುಳಿಯ ಮಧ್ಯೆ ಅವರು ಇಂದು ಮುಖ್ಯಮಂತ್ರಿಗಳಾಗಿದ್ದಾರೆ. ಯಾವ ಕಡೆ ಹೋದರೂ ಅವರು ಸುಳಿಯಲ್ಲಿ ಸಿಕ್ಕುತ್ತಾರೆ. ಆ ಸುಳಿಯಲ್ಲಿ ಅವರು ಮುಳುಗತಕ್ಕಂಥ ಪ್ರಶ್ನೆ ಇರಬೇಕು ಎಂದು ಕಾಣುತ್ತದೆ. ಆದ್ದರಿಂದ ಆ ಪ್ರಶ್ನೆ ಬೇರೆ ಇವತ್ತು ಕರ್ನಾಟಕ ಸತ್ತವರ ಮನೆಯಾಗಿದೆ. ಅದರಲ್ಲಿ ಏನೂ ಅನುಮಾನ ಇಲ್ಲ. ಕರ್ನಾಟಕ ಸತ್ತವರ ಮನೆ. ಸತ್ತವರ ಮನೆಯಲ್ಲಿ ಅವರ ದುಃಖವನ್ನು ಯಾರೂ ಕೇಳುವವರು ಇಲ್ಲ. ನೀವು ಏಕೆ ಸತ್ತಿದ್ದೀರಿ ಏನು ಎಂದು ದುಃಖವನ್ನು ಯಾರೂ ಕೇಳುತ್ತಿಲ್ಲ. 1956 ರಿಂದ ಇಲ್ಲಿಯವರೆಗೆ ನಂಜೇಗೌಡರು ಹೇಳಿದರು ಯಾರ ಯಾರ ಕಾಲದಲ್ಲಿ ಏನೇನು ಆಗಿದೆ ಎಂದು ನಾನು ಈ ಸದನದಲ್ಲಿ ಚಾರಿತ್ರಾರ್ಹವಾದಂಥ ಒಂದು ಸಮಗ್ರವಾದಂಥ ಇತಿಹಾಸ. ಯಾರ ಯಾರ ಕಾಲದಲ್ಲಿ ನೀರಾವರಿ ಏನೇನಾಯಿತು? ಎಷ್ಟರಮಟ್ಟಿಗೆ ಮಾಡಿದ್ದಾರೆ? ಪ್ರಪ್ರಥಮವಾಗಿ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾದಾಗಿನಿಂದ ಇಲ್ಲಿಯವರೆಗೆ ಏನೇನು ನಡೆದಿದೆ ಎಂಬುದಕ್ಕೆ ಅದನ್ನು ಒಂದು ಶ್ವೇತ ಪತ್ರ ಎಂದು ಆದರೂ ಎನ್ನಬಹುದು ಅಥವಾ ವರದಿ ಎಂದು ಆದರೂ ಎನ್ನಬಹುದು ಸರ್ಕಾರ ಅದನ್ನು ಮಂಡಿಸಲಿ.

ಆಗ ಎಲ್ಲರ ಬಣ್ಣ ಬಯಲಾಗಲಿ. ಯಾರ್‍ಯಾರ ಕಾಲದಲ್ಲಿ ಏನೇನು ಆಗಿದೆ? ಈ ರಾಜ್ಯಕ್ಕೆ ಯಾರ್‍ಯಾರ ಕಾಲದಲ್ಲಿ ಏನೇನು ಅನ್ಯಾಯ ಮಾಡಿದ್ದಾರೆ. ಎನ್ನತಕ್ಕಂಥಾದ್ದನ್ನು ನಾವು ಸಂಪೂರ್ಣವಾಗಿ ಬಯಲು ಮಾಡೋಣ. ಇದು ಅತ್ಯಂತ ಪ್ರಾಮುಖ್ಯವಾದುದು ಎಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಈ ಚಾಲನಾ ಸಮಿತಿಯಾವುದು? ಚಾಲನಾ ಸಮಿತಿಯಲ್ಲಿರತಕ್ಕಂಥವರು ಯಾರ್‍ಯಾರು? ಆಲಮಟ್ಟಿ ಜಲಾಶಯನ ಎತ್ತರ ಮಾಡಬೇಕೇ ಬಿಡಬೇಕೇ ಎನ್ನತಕ್ಕಂಥ ತೀರ್ಮಾನ ಮಾಡುವುದಕ್ಕೆ ನಾಲ್ಕು ಜನ ಮುಖ್ಯ ಯಾವುದೋ ನೇಮಕವಾದಂತಹ ಹಿನ್ನೆಲೆ ಏನು? ನೇಮಕ

ಅಲ್ಲದರೆ ಮಳೆ ರೀತಿ ಬಂತು. ಯಾವುದೋ ಒಂದು ಬೀಜ ಬಿದ್ದಿದ್ದು ಅದು ಇದ್ದಕಿದ್ದ ಹಾಗೆ ಬೆಳೆ ಆಯಿತು ಅದು ಎರಡು ಕವಲು ಹೊಡೆಯಿತು ಆಮೇಲೆ ಚಿಗುರು ಆಯಿತು ಆಮೇಲೆ ಹಣ್ಣು ಬಂತು ಎಂದು ಹೇಳುವುದಕ್ಕೆ ಸಾಧ್ಯವೇ? ಇಲ್ಲ, ಯಾರಾದರೂ ಬೀಜ ಹಾಕಿರಬೇಕಲ್ಲಾ. ಯಾರಾದರೂ ನೀರು ಹಾಕಿರಬೇಕಲ್ಲಾ. ಯಾರು ಎಂದು ಹೇಳಲೇಬೇಕಲ್ಲಾ. ಆದ್ದರಿಂದ ನನಗನಿಸುತ್ತದೆ ಈ ಚಾಲನಾ ಸಮಿತಿಯಲ್ಲಿ 4ಜನ ಮುಖ್ಯಮಂತ್ರಿಗಳು ಅವರಾಗಿಯೇ ಅವರೇ ಉದ್ಭವವಾಗಿಬಿಟ್ಟರಾ? ಇವರು ಉದ್ಭವ ಮೂರ್ತಿಗಳೇ? ರಾತ್ರೋರಾತ್ರಿ ಉದ್ಭವವಾಗಿ ಅವರನ್ನು ನಾವು ದೇವತೆಗಳು ಎಂದು ಕರೆದು ಅಥವಾ ನ್ಯಾಯಾಧೀಶರುಗಳು ಎಂದು ಕರೆದು ಉದ್ಭವವಾದಂತಹವರ ವಾಕ್ಯಗಳನ್ನು ನಾವು ಕೇಳುತ್ತಿದ್ದೇವೆಯೇ? ಕಾರಣ ಏನು? ಚಾಲನಾ ಸಮಿತಿಯಲ್ಲಿ ಈ ನಾಲ್ಕು ಜನ ಮುಖ್ಯಮಂತ್ರಿಗಳು ಉದ್ಭವವಾದ ಇತಿಹಾಸ ಏನು? ಈ ಭಾರತದೇಶದಲ್ಲಿ ಎಲ್ಲೂ ಇಂತಹ ನಾಲ್ಕು ಜನ ಮುಖ್ಯಮಂತ್ರಿಗಳನ್ನು ನೇಮಕ ಮಾಡಿ ಬೇರೆ ರಾಜ್ಯದಲ್ಲಿ ಆಗಿರತಕ್ಕಂಥ ಅನ್ಯಾಯದ ಬಗ್ಗೆ ನೀವು ಹೋಗಿ ಅಲ್ಲಿ ತನಿಖೆ ಮಾಡಿ ನ್ಯಾಯ ದೊರಕಿಸಿ ಎಂದು ಹೇಳಿರತಕ್ಕಂಥಾದ್ದನ್ನು ನಾನಂತೂ ಕೇಳಲಿಲ್ಲ. ನನ್ನ ಗಮನಕ್ಕೆ ಅದು ಎಲ್ಲೂ ಬಂದಿಲ್ಲ. ಬಹುಶಃ 30 ವರ್ಷಗಳಲ್ಲಿ ನಾಲ್ಕು ಜನ ಮುಖ್ಯಮಂತ್ರಿಗಳು ಸೇರಿಕೊಂಡು ಬೇರೆ ರಾಜ್ಯದ ಮೇಲೆ ಒಂದು ಸಮಿತಿ ಮಾಡಿ ಆ ಸಮಿತಿ ಒಂದು ತಜ್ಞರ ಸಮಿತಿ ಎಂದುಮಾಡಿ ರಚನೆ ಮಾಡಿರತಕ್ಕಂಥ ಇತಿಹಾಸ ನನಗಂತೂ ಗೊತ್ತಾಗಲಿಲ್ಲ. ಈಗ ಏನಾಗಿದೆ ಪ್ರಧಾನ ಮಂತ್ರಿಗಳ ಪಾತ್ರ ಇದರಲ್ಲಿ ಇಲ್ಲ. ಮುಖ್ಯಮಂತ್ರಿಗಳ ಪಾತ್ರ ಇದರಲ್ಲಿ ಇಲ್ಲ. ನೀರಾವರಿ ಸಚಿವರ ಪಾತ್ರ ಇಲ್ಲ. ಇನ್ನು ಯಾರ ಪಾತ್ರ? ಇದು ಬಹಳ ಕಷ್ಟ. ಒಂದು ನ್ಯಾಯ ಹೇಳಿದರು. ಇಬ್ಬರು ಶೆಟ್ಟರ ಅಂಗಡಿ ಮುಂದೆ ಹೊಡೆದಾಡುತ್ತಿದ್ದರು. ಶೆಟ್ಟರ ಅಂಗಡಿ ಬಹಳ ಚೆನ್ನಾಗಿ ತೆಗೆದಿತ್ತು. ಹಗಲು ಹೊತ್ತು. ಕತ್ತಲು ಗಿತ್ತಲು ಏನೂ ಇರಲಿಲ್ಲ.

ಇಬ್ಬರು ಹೊರಗಡೆಯಿಂದ ಬಂದು ಹೊಡೆದಾಡುತ್ತಿದ್ದರು. ಹೊಡೆದಾಟ ಏನೂ ಕಡಿಮೆ ಹೊಡೆದಾಟ ಅಲ್ಲ. ಶೆಟ್ಟರು ಕಣ್ಣಲ್ಲಿ ಸಂಪೂರ್ಣ ಹೊಡೆದಾಟ ನೋಡುತ್ತಿದ್ದರು. ಹೊಡೆದಾಟ ಆಯಿತು ಶೆಟ್ಟರು ನೋಡಿದರು. ಯಾರ್‍ಯಾರು ಯಾರನ್ನು ಹೊಡೆದರು ಎಂದು ಶೆಟ್ಟರಿಗೆ ಸಂಪೂರ್ಣವಾಗಿ ಗೊತ್ತು. ಹೊಡೆದವರು ಯಾರು? ಹೊಡೆಸಿಕೊಂಡವರು ಯಾರು ಎನ್ನುವುದು ಶೆಟ್ಟರಿಗೆ ಗೊತ್ತು. ಇದಾದ ನಂತರ ಶೆಟ್ಟರಿಗೆ ಅಂಗಡಿ ವ್ಯಾಪಾರ ಆಗಬೇಕು. ಹೊಡೆಸಿಕೊಂಡವರೂ ವ್ಯಾಪಾರಕ್ಕೆ ಬರಬೇಕು, ಹೊಡೆದವರೂ ವ್ಯಾಪಾರಕ್ಕೆ ಬರಬೇಕು. ಈ ವಿಷಯ ನ್ಯಾಯಾಲಯಕ್ಕೆ ಹೋಯಿತು. ನ್ಯಾಯಾಲಯಕ್ಕೆ ಹೋದಾಗ ಶೆಟ್ಟರು ಆ ಕಟಕಟೆಗೆ ಬರುತ್ತಾರೆ ಸಾಕ್ಷಿ ಹೇಳುವುದಕ್ಕೆ, ಶೆಟ್ಟರೇ, ಯಾರು ಯಾರಿಗೆ ಹೊಡೆದು ನೋಡಿದ್ದೀರಾ? ತಾವು ಸತ್ಯ ಹೇಳಬೇಕು ಸತ್ಯವಲ್ಲದೇ ಬೇರೆ ಏನೂ ಹೇಳಬಾರದು ಎಂದು ನ್ಯಾಯಾಧೀಶರು ಹೊಡೆದವನು ನನ್ನ ಪರ ಎಂದು ಕುಳಿತಿದ್ದಾನೆ. ಹೊಡೆಸಿಕೊಂಡವನು ನನ್ನ ಪರ ಎಂದು ಕುಳಿತಿದ್ದಾನೆ. ಶೆಟ್ಟರು ನ್ಯಾಯ ಹೇಳುತ್ತಾರೆ, ಸ್ವಾಮಿ, ಆಗ ಬಾರಿ ದೊಡ್ಡ ಗಾಳಿ ಬಂದುಬಿಟ್ಟಿತು. ಕಣ್ಣಿಗೆ ಮಣ್ಣು ಬಿದ್ದುಬಿಟ್ಟಿತು. ಕಣ್ಣು ಮುಚ್ಚಿಕೊಂಡೆ ಶಬ್ಧ ಕೇಳಿಸುತ್ತಿತ್ತು. ಯಾರು ಯಾರಿಗೆ ಹೊಡದರೋ ಗೊತ್ತಾಗಲಿಲ್ಲ ಎಂದು. ನಮ್ಮ ಪ್ರಧಾನಮಂತ್ರಿಗಳು ಈಗ ಆ ರೀತಿ ಆಗಿದ್ದಾರೆ. ಪ್ರಧಾನ ಮಂತ್ರಿಗಳ ಹೇಳಿಕೆ ಎಲ್ಲಿಯಾದರೂ ಉಂಟೇ? ನಿನ್ನೆ ಮೊನ್ನೆ ಹುಟ್ಟಿದ ಸಣ್ಣ ಮಕ್ಕಳೂ ಸಹ ಇದನ್ನು ನಂಬುವುದಿಲ್ಲ. ನನಗೆ ಇದು ಸಂಬಂಧ ಇಲ್ಲ. ನನಗೆ ಚಾಲನಾ ಸಮಿತಿಗೂ ಸಂಬಂಧವಿಲ್ಲ. ನಾನು ಅಲ್ಲಿ ಸೇರಿಲ್ಲ. ನಾನು

ಅಲ್ಲಿ ಕುಳಿತಿಲ್ಲ. ನಮ್ಮ ಮನೆಯಲ್ಲಿ ಇದು ನಡೆಯಲಿಲ್ಲ, ಅಂದರೆ ಇದು ಏನು ? ಯಾವ ಯುಗದಲ್ಲಿ ನಾವು ಇದ್ದೇವೆ ? ದೇಶದ ಜನಕ್ಕೆಲ್ಲಾ ಕಣ್ಣಿಗೆ ಮಣ್ಣು ಎರೆಚುವುದಕ್ಕೆ ಆಗುತ್ತದೆಯೇ ಇದು ? ಸಾಧ್ಯ ಇಲ್ಲ. ಚಾಲನಾ ಸಮಿತಿ ನಡೆದಿದ್ದು ಇವರಿಗೆ ಗೊತ್ತಿಲ್ಲವೇ? ತಜ್ಞರ ಸಮಿತಿ ನಡೆದಿದ್ದು ಗೊತ್ತಿಲ್ಲ ಇವರಿಗೆ? ಪ್ರಾಮಾಣಿಕವಾಗಿ ನನಗೆ ಅವರ ಬಗ್ಗೆ ಬಹಳ ಗೌರವ ಇದೆ. ಆದರೆ ಇದು ನಿಜವಾಗಿಯೂ ಅವರ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ಈ ನಾಟಕ. ಇದು ದಶಾವತಾರ. ದಶಾವತಾರ ಮಹಾ ಪುಣ್ಯಾತ್ಮ ಹಿಂದೆ ಶ್ರೀಮಾನ್ ನಾರಾಯಣ ಹಿಂದೆ ದಶಾವತಾರ ಎತ್ತಿದರು. ಮಾನ್ಯ ದೇವೇಗೌಡರದು ಇದು ಒಂದು ಅವತಾರ. ಆ ದಶ ಬಿಟ್ಟು. ಮುಂದಕ್ಕೆ ಹೋಗಿದ್ದಾರೆ. ಇದು 11ನೇ ಅವತಾರ. ಈ 11ನೇ ಅವತಾರದಲ್ಲಿ ನಾವೆಲ್ಲಾ ಒಂದು ರೀತಿಯಲ್ಲಿ ಭಕ್ತರಾಗಿದ್ದೇವೆ. ಈ ದೇಶದಲ್ಲಿ ನಾವೆಲ್ಲಾ ಅತ್ಯಂತ ಪ್ರಿಯವಾಗಿ ಅವರು ಹೇಳಿದ ಮಾತುಗಳನ್ನೆಲ್ಲಾ ನಾವು ಚಾಚೂ ತಪ್ಪದೆ ಕೇಳುತ್ತಿದ್ದೇವೆ. ನನಗೆ ಅವರ ಬಗ್ಗೆ ಬಹಳ ಗೌರವ ಇದೆ. ಅವರು ರಾಜ್ಯಸಭೆಗೆ ನಿಂತಾಗ ನಾನು ಅವರಿಗೆ ಹೇಳಿದೆ ಅವರು ನಮ್ಮ ರಾಜ್ಯದಿಂದ ಅವಿರೋಧವಾಗಿ ಆಯ್ಕೆ ಆಗಬೇಕು ಎಂದು ಹೇಳಿ.

ಆದರೆ ಅವರು ಹೆಜ್ಜೆ ಹೆಜ್ಜೆಗೂ ಮಾತನಾಡತಕ್ಕಂಥಾದ್ದು ಕೇಳತಕ್ಕಂಥಾದ್ದು ಅವರಿಗಾದರೂ ಅರ್ಥವಾಗ ಬೇಡವೇ, ನಾನು ಈ ರೀತಿಯಾಗಿ ಮಾತನಾಡುತ್ತಿದ್ದೇನೆ. ಯಾರಾದರೂ ಸಣ್ಣ ಮಕ್ಕಳು ನಕ್ಕು ಬಿಟ್ಟಾರು ಎಂದು ದೊಡ್ಡವರು ಬಿಡಿ. ಏನೂ ಗೊತ್ತಿಲ್ಲದೇ ಇರತಕ್ಕಂಥ ಮಕ್ಕಳು ನನ್ನ ಮಾತನ್ನು ಕೇಳಿ ನಕ್ಕುಬಿಟ್ಟಾರು ಎನ್ನುವಂತಹ ಭಯಭೀತಿ ಬೇಡವೇ? ಎಲ್ಲವನ್ನೂ ಗೊಂದಲ ಮಾಡಿದ್ದಾರೆ. ಕರ್ನಾಟಕ ರಾಜ್ಯ ಒಂದು ರೀತಿ ತಬ್ಬಲಿ ಆಗಿದೆ. ಕರ್ನಾಟಕ ರಾಜ್ಯವನ್ನು ಯಾರೂ ಕೇಳುವವರು ಇಲ್ಲ. ಹೇಳುವವರು ಇಲ್ಲ. ಕಾವೇರಿಯಲ್ಲಿ ನಿರಂತರವಾಗಿ ಅನ್ಯಾಯ ನಡೆದಿದೆ. ಯಾರು ಸ್ವಾಮಿ ಕಾವೇರಿಯ ನ್ಯಾಯ ಮಂಡಲಿಯನ್ನು ರಚನೆ ಮಾಡಿದವರು ? ಅದಕ್ಕೆ ಕಾರಣಕರ್ತರು ಯಾರು ? ಅದರ ಪರಿಸ್ಥಿತಿ ಏನು? ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯನ್ನು ಓಲೈಸುವುದಕ್ಕೆ ಹಿಂದಿನ ಪ್ರಧಾನ ಮಂತ್ರಿಯಾಗಿದ್ದಂತಹ ಶ್ರೀಮಾನ್ ವಿ.ಪಿ. ಸಿಂಗ್ ಅವರು ಮಾಡಿದ್ದು. ನಾನು ವೈಯಕ್ತಿಕವಾಗಿ ಹೇಳಬೇಕು ಎಂದು ಅಲ್ಲ. ನ್ಯಾಯ ಮಂಡಲಿಯ ಮಧ್ಯಂತರ ಆಜ್ಞೆಯನ್ನು ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಣೆ ಮಾಡಬಾರದು ಎಂದು ಹೇಳಿ ವಿರೋಧಪಕ್ಷದ ಎಲ್ಲಾ ಮುಖಂಡರುಗಳು ಹೋಗಿ ಅಲ್ಲಿ ಕಾಲಿಗೆ ಬೀಳುವುದು ಒಂದು ಬಾಕಿ ಸ್ವಾಮಿ, ಆವತ್ತು ಜಯಲಲಿತಾರವರ ವಿಶ್ವಾಸಕ್ಕೋಸ್ಕರವಾಗಿ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ನರಸಿಂಹರಾಯರು ಅವರಿಗೋಸ್ಕರವಾಗಿ ನಮ್ಮನ್ನು ಕೈ ಬಿಟ್ಟರು. ಇವತ್ತು ನಮ್ಮವರೇ ಪ್ರಧಾನಿ. ಈ ಪರಿಸ್ಥಿತಿಯಲ್ಲಿ ನಾವು ಏನು ನಿರೀಕ್ಷಣೆ ಮಾಡಬಹುದು ನಿನ್ನೆ ಅವರಿಗೆ ಸಂಬಂಧಪಟ್ಟಿದ್ದು ಎಂದಿದ್ದಾರೆ. ಇದು ಚೆನ್ನಾಗಿದೆ. ಕೈ ಮುರಿದು ಕಾಲು ಮುರಿದು ಒದ್ದು ನನಗೆ ಇದು ಏನೂ ಸಂಬಂಧ ಇಲ್ಲ ಎಂದು ಹೇಳಿಬಿಟ್ಟರೆ ಪರಿಸ್ಥಿತಿ ಏನು? ಈ ದೇಶದ ಪರಿಸ್ಥಿತಿ ಏನು? ಇದಕ್ಕೆ ಯಾರು ಹೊಣೆಗಾರರು ? ದೇಶಪಾಂಡೆಯವರೇ, ಅವರ ತಪ್ಪಿಗೆ ತಾವು ಹೊಣೆಗಾರರು ಆಗುತ್ತೀರಾ ? ಮಾನ್ಯ ಮುಖ್ಯಮಂತ್ರಿಗಳ ಪರಿಸ್ಥಿತಿ ಈಗ ಏನು? ಅವರ ಪರಿಸ್ಥಿತಿ ಡೋಲಾಯಮಾನ ಆಗಿದೆ. ಕೇಂದ್ರದ ಮಾತು ಕೇಳಬೇಕೇ ಬಿಡಬೇಕೇ.ಅವರು ಎಷ್ಟು ವರ್ಣಮಯವಾದ ಪರಿಸ್ಥಿತಿಗೆ ಅವರು ಸಿಕ್ಕಿದ್ದಾರೆ ಎಂದು ಹೇಳಿದರೆ ಯಾರು ಏನೇ ಹೇಳಲಿ ಈ ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ

ಮಾನ್ಯ ಮುಖ್ಯಮಂತ್ರಿಗಳು ಎಡವಿ ಎಡವಿ ಬಿದ್ದಿದ್ದಾರೆ. ಒಂದು ಸಾರಿ ಕಾವೇರಿ ಬಗ್ಗೆ ಚರ್ಚೆ ನಡೆಯಿತು. ನಾವು ಪತ್ರಿಕಾ ಹೇಳಿಕೆ ಓದುತ್ತಿದ್ದೆವು. ಇದು ಒಂದು ಐತಿಹಾಸಿಕ ಚರಿತ್ರೆ. ನಾವು ಒಂದು ಇತಿಹಾಸವನ್ನು ನಿರ್ಮಾಣ ಮಾಡಿದ್ದೇವೆ.

ನಮಗೂ ಕರುಣಾನಿಧಿಯವರ ಮಾತು ಹೇಗಿದೆ ಎಂದು ಹೇಳಿದರೆ ನೂರಾರು ವರ್ಷಗಳ ಇತಿಹಾಸ ಮುಗಿಯಿತು. ಒಂದು ಸಾರಿ ಸರಿಯಾಗಿ ಕೊಟ್ಟರು. ಕರುಣಾನಿಧಿಯವರನ್ನು ಇವರು ಅರ್ಥ ಮಾಡಿಕೊಂಡಿಲ್ಲ. ಏನು ಇದು ಹಣೆಬರಹ. ನಿಮ್ಮ ಹಣೆಬರಹ ನೋಡಿ ರಾಜ್ಯದ ಹಣೆಬರಹ ಕೆಟ್ಟು ಹೋಯಿತು. ನಾ ಮಾಡಿದ ಕರ್ಮ ಬಲವಂತವಾಗಿದ್ದರೆ ನೀ ಮಾಡುವುದು ಏನು ಹರಿಯೇ? ಅದಕ್ಕೆ ನೀವೇನು ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಕರ್ಮ. ನಿಮ್ಮ ರಾಜ್ಯ ನಮ್ಮ ಕರ್ಮ. ನಮ್ಮ ಪ್ರಧಾನಿ. ನಮ್ಮ ಕರ್ಮ. ನಮ್ಮ ಕರ್ಮಕ್ಕೆ ಅವರು ಪ್ರಧಾನಿ ಆದರಾ? ಇಷ್ಟ ನಮ್ಮ ಮನಸ್ಸಿಗೆ ನೋವಾಗುತ್ತಿದೆ. ಕರುಣಾನಿಧಿಯವರನ್ನು ಇವರು ಎಷ್ಟು ನಂಬಿಬಿಟ್ಟರು. ಅವರನ್ನು ಪಂಚತಾರಾ ಹೋಟಲ್‌ಗೆ ಕರೆದರು. ಅವರು ಆರಾಮವಾಗಿ ಬಣ್ಣ ಬಣ್ಣದ ವಲ್ಲಿಗಳನ್ನು ಹಾಕಿಕೊಂಡು ಬಂದರು. ಇಲ್ಲಿ ನಮ್ಮವರು ಏನು. ನಾನು ಬಂದು ಸುತ್ತಾ ನಿಂತಿದ್ದೇನೆ. ಕಪ್ಪು ಬಾವುಟ ಹಿಡಿಯೋಣ ಎಂದು ಹೇಳಿ. ಯಾವುದೋ ದೇಶದ ಪಾನ್ ಮೇಜರ್ ಬಂದ ಏನೋ ಎಂದು ನಾನು ತಿಳಿದುಕೊಂಡೆ. ಕರುಣಾನಿಧಿಯವರಿಗೆ ಬ್ಯಾಂಡ ಸೆಟ್‌ಗಳು ಏನು, ಅವರಿಗೆ ಕೊಡುವ ಸ್ವಾಗತ ಏನು? ನಮ್ಮ ರಾಜ್ಯದ ಪೂರಾ? ಮುಗಿದೇ ಹೋಯಿತು ನಮ್ಮ ಕಥೆ. ಆ ಗಾರ್ಡ್ ಆಫ್ ಹಾನರ್ ಯಾರಿಗೆ ಕೊಟ್ಟಿರಿ ನೀವು? ಕರುಣಾನಿಧಿಯವರಿಗೆ. ಹಿಂದಕ್ಕೆ ತೆಗೆದುಕೊಳ್ಳುತ್ತೀರಾ ಈಗ. ಏತಕ್ಕೆ ಕೊಟ್ಟಿರಿ ಅದನ್ನು, ನಿಮಗೆ ಅನುಕೂಲ ಮಾಡುತ್ತಾರೆ ಎಂದು ಹೇಳಿ. ನಿಮ್ಮಗತಿ ಏನಾಯಿತು? ಪರಿಸ್ಥಿತಿ ಏನಾಯಿತು? ನೀವು ಅವರ ಊರಿಗೆ ಹೋದಿರಿ ಇದು ಹಾಸ್ಯವಾಗಿರಬಹುದು. ಪರಿಸ್ಥಿತಿ ಇವರದ್ದು ಅವರದ್ದು ಏನು ಭಾಯಿ ಭಾಯಿ! ಪಂಚತಾರಾ ಹೋಟೆಲ್‌ನಲ್ಲಿ ಮಾತುಕತೆ. ಗೋಪ್ಯವಾಗಿ ಮಾತನಾಡುವುದು ಒಂದು ಬಹಿರಂಗವಾಗಿ ಮಾತನಾಡುವುದು ಒಂದು. ಕೊನೆಗೆ ಒಂದು ದಿವ ಹಿಗ್ಗಾಮುಗ್ಗಾ ಒದ್ದು ಕಳುಹಿಸಿದರು ಕರುಣಾನಿಧಿ 50 ವರ್ಷಗಳ ರಾಜಕಾರಣದಲ್ಲಿ ಇರತಕ್ಕಂಥವರು. ಇವರು ಕರುಣಾನಿಧಿಯನ್ನು ಅರ್ಥ ಮಾಡಿಕೊಳ್ಳಲಿಲ್ಲ.

12.30 ಪಿ.ಎಂ

ಕರುಣಾನಿಧಿಯು, ತನ್ನ ರಾಜ್ಯವನ್ನು ಉಳಿಸಿಕೊಳ್ಳುವುದಕ್ಕೆ, ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ, ತ ರಾಜ್ಯದ ಜನತೆಯ ಪ್ರೀತಿಯನ್ನು ಗಳಿಸುವುದಕ್ಕೆ ಏನು ಬೇಕಾದರೂ ಮಾಡುತ್ತಾರೆ. ನಮ್ಮವರ ತರಹವೇ? ಹೋದರೆ ಹೋಗಲಿ, ಬಿಟ್ಟರೆ ಬಿಡಲಿ, ಏನು ಬೇಕಾದರೂ ಹೋಗಲಿ ನಮ್ಮ ಜಾಗ ಮಾತ್ರ ಉಳಿಯಲಿ ಎನ್ನತಕ್ಕಂಥ ವ್ಯವಸ್ಥೆ ಕರುಣಾನಿಧಿಯವರದಲ್ಲ. ಇದು ಸ್ಪಷ್ಟ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, 1925 ರಿಂದ, ಯಾವುದೇ ಸರ್ಕಾರ ಬಂದರೂ ಈ ಸಮಸ್ಯೆಯನ್ನು ಇಟ್ಟುಕೊಂಡೇ ಸರ್ಕಾರವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ರಾಜಕೀಯಕ್ಕೋಸ್ಕರ ಈ ಕಾವೇರಿದ್ದು, ಆಲಮಟ್ಟಿದ್ದು ಸಮಸ್ಯೆ ಇದ್ದೇ ಇರಬೇಕು. ಆವಾಗ ತಾನೇ ಸರ್ ರಾಜಕೀಯ ಮಾಡುವುದಕ್ಕಾಗುವುದು?

ಅಧ್ಯಕ್ಷರು : ನಿಮಗೆ ಈಗ ಅರ್ಥವಾಯಿತಲ್ಲಾ

ಶ್ರೀ ವಾಟಾಳ್ ನಾಗರಾಜ್ : ಮೊನ್ನೆ ದಿವಸ ಈ ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿದರು, ಈ ನಿರ್ಣಯವನ್ನು ಮಂಡಿಸುವಾಗ ನಮಗೆ ಭಯ ಹುಟ್ಟಿಸಿಬಿಟ್ಟರು. ಈ ನಿರ್ಣಯದ ಬಗ್ಗೆ ಯಾರೂ ಮಾತನಾಡಬಾರದು, ಮಾತನಾಡಿಬಿಟ್ಟರೆ ಏನೋ ಆಗಿಬಿಡುತ್ತದೆ, ಹುಷಾರ್, ಅದರ ವಿರುದ್ಧ ಒಂದು ಶಬ್ಧವನ್ನು ಆಡಬಾರದೆಂದು ಎಲ್ಲರೂ ಬಾಯಿ ಮುಚ್ಚಿಕೊಂಡು ಕುಳಿತುಕೊಂಡು ಬಿಟ್ಟರು. ಆಗ ಅದರ ಬಗ್ಗೆ ಚರ್ಚೆ ಆಗಬೇಕೆಂದು ನಾನು ಕೇಳಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸಿಟ್ಟು ಮಾಡಿಕೊಂಡು ಬಿಟ್ಟರು. ಎಂದೂ ನನ್ನ ಮೇಲೆ ಮುಖ್ಯಮಂತ್ರಿಗಳು ಸಿಟ್ಟು ಮಾಡಿಕೊಂಡಿರಲಿಲ್ಲ. ಆವತ್ತು ಏಕೆ ಸಿಟ್ಟು ಮಾಡಿಕೊಂಡರೋ ನನಗೆ ಗೊತ್ತಾಗಲಿಲ್ಲ. ನನ್ನ ಇತಿಹಾಸದಲ್ಲಿ ಅವರು ಸಿಟ್ಟು ಮಾಡಿಕೊಂಡಿದ್ದುದು ಅವತ್ತೇ ನಾನು ನೋಡಿದ್ದು. ಏಕೆ ಸಿಟ್ಟುಮಾಡಿಕೊಳ್ಳುತ್ತೀರೆಂದು ನಾನು ಕೇಳಿದ್ದೇನೆ. ಈ ನಿರ್ಣಯವನ್ನು ಮಂಡಿಸಿದ್ದರೂ ಏನು ಪ್ರಯೋಜನ ಆಯಿತು? ಸತ್ತವರ ಮನೆಯಲ್ಲಿ ತಿಥಿ ಮಾಡುವಂಥ ಸಂದರ್ಭದಲ್ಲಿ ಪುರೋಹಿತರು ಬಂದು, ನೀನು ವೈಕುಂಠಕ್ಕೆ ಹೋಗು, ನರಕಕ್ಕೆ ಹೋಗು ಆ ಲೋಕಕ್ಕೆ ಹೋಗು ಎಂದು ಹೇಳುವ ರೀತಿ ಸತ್ತವ ಮನೆಯ ಸ್ತೋತ್ರ ಹೇಳುತ್ತೇವಲ್ಲಾ, ಹಾಗೆ ಈ ನಿರ್ಣಯ. ಆ ರಾಜ್ಯದ ಶಾಸನ ಸಭೆಯಲ್ಲೂ ಒಂದು ಸರ್ವಾನುಮತದ ನಿರ್ಣಯವನ್ನು ಮಾಡಿದ್ದಾರೆ. ಅದೇ ರೀತಿ ಈ ನಿರ್ಣಯವನ್ನು ನಿನ್ನೆ ದಿವಸವೇ ಏಕೆ ಮಾಡಬೇಕಾಗಿತ್ತು? ಒಂದು ವಾರದ ಮುಂಚೆ ಮಾಡಬಹುದಾಗಿತ್ತಲ್ಲಾ? ಒಂದು ತಿಂಗಳು ಅಥವಾ6 ತಿಂಗಳು ಮುಂಚಿತವಾಗಿ ಮಾಡಬಹುದಾಗಿತ್ತಲ್ಲಾ? ಏಕೆ ಮಾಡಲಿಲ್ಲ? ಅವರಿಗೆ ಉತ್ತರ ಕೊಡುವುದಕ್ಕಾಗಿ ತಾನೇ ಈ ನಿರ್ಣಯ ಮಾಡಿದ್ದು? 'ತಜ್ಞರ ಸಮಿತಿಯ ವರದಿಯಲ್ಲಿ ಈ ಸಭೆ ಮುಂದೆ ಇಡಬಾರದು, ಅದು ಬಹಳ ಅಪಾಯ, ಅದನ್ನು ಯಾರೂ ಮುಟ್ಟಬಾರದು.

ಶ್ರೀ ಹೆಚ್.ಎನ್.ನಂಜೇಗೌಡ : ಅಪವಿತ್ರ ಮಾಡಿಕೊಳ್ಳಬಾರದು ನಮ್ಮ ಸಭೆಯನ್ನು ಎಂದು ಹಾದಿ ಬೀದಿಯಲ್ಲಿ ಹೋಗುವವರು ಕೊಡುವ ಪೇಪರ್‌ಗಳನ್ನೆಲ್ಲಾ ತಂದು ನಾವು ಸಭೆಯಲ್ಲಿ ಇಡುವುದಕ್ಕೆ ಆಗುತ್ತದೆಯೇ? ಎಲ್ಲಾದರೂ ಉಂಟೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾದಿಯಲ್ಲಿ ಹೋಗುವವರು ಕೊಟ್ಟಿರುವ ಪೇಪರ್‌ಗಳಾಗಿದ್ದರೆ ಉತ್ತರ ಏಕೆ ಕೊಡಬೇಕಾಗಿತ್ತು, ಲೆಟರ್ ಏತಕ್ಕೆ ಬರೆದಿರಿ?

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಇದು ಹೇಗೆ ಆಗಿದೆ ಎಂದರೆ, ಸಂತೆಯಲ್ಲಿ ಬಟ್ಟೆ ಬಿಚ್ಚಿದ ಹಾಗೆ ಆಗಿದೆ. ಸಂತೆಯಲ್ಲಿ ಬಟ್ಟೆ ಬಿಚ್ಚಿ ಆಗಿಹೋಗಿದೆ. ಮತ್ತೆ ಇದಕ್ಕೆ ಮಹತ್ವ ಕೊಡಬಾರದು, ಇದು ಗೋಪ್ಯವಾಗಿದೆ ಎಂದು ಹೇಳುವುದು ಸರಿಯಲ್ಲ. ಮಾನ್ಯ ನಂಜೇಗೌಡರಿಂದ ಈ ತರಹ ನಾನು ನಿರೀಕ್ಷಣೆ ಮಾಡಿರಲಿಲ್ಲ. ಈ ವಿಷಯ ಇಡೀ ದೇಶದಲ್ಲಿ ಜಗಜ್ಜಾಹೀರಾಗಿದೆ. ಆಂಧ್ರಪ್ರದೇಶದ ಶಾಸನ ಸಭೆಯಲ್ಲಿ ಅದರ ಅಕ್ಷರ ಅಕ್ಷರವನ್ನೂ ಮಂಡಿಸಿದ್ದಾರೆ; ಮತ್ತು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಇವತ್ತಿನ 'ಡೆಕನ್ ಹೆರಾಲ್ಡ್ ಪತ್ರಿಕೆಯನ್ನು' ನೋಡಿ. ಅದು ಲೋಕ ಸಭೆಯಲ್ಲೂ ಬಂದಿದೆ.

ಅಧ್ಯಕ್ಷರು : ನೀವು 'ಡೆಕನ್ ಹೆರಾಲ್ಡ್‌ನ್ನು' ಏಕೆ ಓದಿದಿರಿ?

ಶ್ರೀ ವಾಟಾಳ್ ನಾಗರಾಜ್ : ಅದು ಇರಲಿ, ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾಡಿದ ನಿರ್ಣಯವು ತಮ್ಮ ಕೊಠಡಿಯಲ್ಲಿ ತಯಾರಾಯಿತು.

ಅಧ್ಯಕ್ಷರು : ನನ್ನ ಕೊಠಡಿಯಲ್ಲಿ ನಿರ್ಣಯ ತಯಾರಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಂದರೆ, ತಮ್ಮ ಕೊಠಡಿಯಲ್ಲ ಕುಳಿತು ಚರ್ಚಿಸಿ ಅಷ್ಟೇ. ಈ ನಿರ್ಣಯದ ಬರಹಗಾರರು ಯಾರು? ಕವಿಗಳು ಯಾರು? ತಲೆ ಯಾರದು ಎಂಬುದು ಗೊತ್ತಿದೆ. ದೆಹಲಿಯಿಂದ ಸೀದಾ ಫ್ಯಾಕ್ಸ್‌ನಲ್ಲಿ ಬಂತು, ಫ್ಯಾಕ್ಸ್‌ನಲ್ಲಿ ಬಂದಿದ್ದನ್ನು ಹಾಗೂ ಹೀಗೂ ಬದಲಾವಣೆ ಮಾಡಿ ನಮ್ಮ ಮುಂದೆ ಇಡಲಾಯಿತು. ನಂಜೇಗೌಡರು ಮತ್ತು ನಾನು ಎಂದೂ ಜಗಳ ಆಡಿದವರಲ್ಲ. ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ನನಗೂ ಅವರಿಗೂ ನಿನ್ನೆ ದಿವಸ ಜಗಳ ಆಗಿಹೋಯಿತು. ಅವರು ಎರಡು ನಿಮಿಷ ಟೈಮ್ ಕೊಡುತ್ತೀರಾ ಎಂದು ಕೇಳಿದಾಗ ನನಗೆ ಕೋಪ ಬಂದು ಒಂದೆರಡು ಮಾತುಗಳನ್ನು ಆಡಿದ್ದೇನೆ.ಆ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ನಂಜೇಗೌಡರು ನನ್ನ ಮೇಗೆ ಬೇಜಾರು ಮಾಡಿಕೊಳ್ಳಬಾರದು, ಮತ್ತು ಅದಕ್ಕೆ ಸಂಬಂಧಪಟ್ಟಂತೆ ನನ್ನನ್ನು ಕ್ಷಮಿಸಬೇಕು. ಏಕೆಂದರೆ, ನಿಮ್ಮ ಬಗ್ಗೆ ನನಗೆ ಗೌರವ ಇದೆ. ಅದರಲ್ಲಿ ಬೇರೆ ಮಾತಿಲ್ಲ.

ಶ್ರೀ ಎಸ್. ಕೃಷ್ಣಪ್ಪ : ಇಂಥವರ ಮೇಲೆ ಗೌರವ ಇಲ್ಲವೆಂದು ಇದುವರೆಗೂ ಒಬ್ಬರ ಮೇಲೂ ಹೇಳಿಯೇ ಇಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ : ಅವರಿಗೆ ನನ್ನ ಮೇಲೆ ಅಪಾರವಾದ ಗೌರವ ಇದೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ಮಂಡಿಸುವ ಮೊದಲು ನಮಗೆ ಎಷ್ಟು ಭಯ ಭೀತಿ ತಂದು ಬಿಟ್ಟರೆಂದರೆ, ಇವತ್ತೇ ಈಗಲೇ ಆಗಿಬಿಡಬೇಕೆಂದು ಹೇಳಿದರು. ಜೊತೆಗೆ ಆ ದಿವಸ ಸಾಯಾಂಕಾಲ ರಾಷ್ಟ್ರಪತಿಯವರ ಕಾರ್ಯಕ್ರಮ ಕೂಡ ಇತ್ತು. ಆ ಸಮಯದಲ್ಲಿ ನಿರ್ಣಯವನ್ನು ಮಂಡಿಸಿ. ಅದನ್ನು ಯಾರೂ ತೆಗೆಯಬಾರದು, ಮುಟ್ಟಬಾರದು ಎಂದು ಹೇಳುವುದು ಏಕೆ ಸ್ವಾಮಿ? ಅದರಲ್ಲಿ ಏನಿದೆ? ತಿಥಿ ಮಾಡುವುದನ್ನು 12 ದಿವಸಕ್ಕೆ ಮಾಡಿದರೇನು? ವರ್ಷಕ್ಕೆ ಮಾಡಿದರೇನು? ತಿಂಗಳಿಗೆ ಮಾಡಿದರೇನು? ಯಾವಾಗ ಮಾಡಿದರೂ ಅದು ತಿಥಿಯೇ ಮತ್ತು ತಿಥಿಯ ಪ್ರವಚನ. ಬೇರೆ ಏನೂ ಅದರಲ್ಲಿ ಸ್ಪಷ್ಟವಾಗಿ ಇಲ್ಲ. ಆದ್ದರಿಂದ, ಇದು ಅಲ್ಲವೇ ಅಲ್ಲವೆಂದು ತಮಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು : ತಿಥಿಯನ್ನು ಯಾವಾಗ ಅಂದರೆ ಆವಾಗ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : 12 ದಿವಸಕ್ಕೆ ಒಂದು ಸಾರಿ, ತಿಂಗಳಿಗೆ ಒಂದು ಸಾರಿ ವರ್ಷಕ್ಕೆ ಒಂದು ಸಾರಿ, ಆವಾಗ ಮಾಡುಬಹುದಲ್ಲಾ; ಆದ್ದರಿಂದ, 12 ದಿವಸದಲ್ಲಿ ಮಾಡದೇ ಇದ್ದರೆ ತಿಂಗಳಲ್ಲಿ ಮಾಡಬಹುದು, ಅದು ಏನು ಮಹಾ ಅಂಥಾದ್ದು; ಇದರಲ್ಲಿ ಆಪಿಪತ್ರ ಮತ್ತು ಪಾವಿತ್ರ್ಯ ಏನಿದೆ? ಏನು ಪರಿಸ್ಥಿತಿ ಇದೆ? ಈ ಬಗ್ಗೆ ಕರ್ನಾಟಕದ ಜನ ಕ್ಷಮಿಸುವುದಿಲ್ಲ.

ಅಧ್ಯಕ್ಷರು : ನಿರ್ಣಯ ಒಪ್ಪಿಗೆಯಾದ ಮೇಲೆ ಚರ್ಚೆ ಏಕೆ ಎಂದು ಮುಖ್ಯಮಂತ್ರಿಗಳು ಕೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ನಿರ್ಣಯದ ವಿರೋಧವಾಗಿ ಮಾತನಾಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿರ್ಣಯದ ವಿರುದ್ಧ ಯಾರೂ ಮಾತನಾಡಲಿಲ್ಲ. ಏಕೆಂದರೆ, ಅದರಲ್ಲಿ ಇರುವ ಸ್ಕೀಮ್ 'ಬಿ' ಯನ್ನು ಇಂಪ್ಲಿಮೆಂಟ್ ಮಾಡಿ, ಅವರಿಗೆ ಇರತಕ್ಕಂಥ ಡ್ಯಾಮ್ಸ್‌ಗಳಲ್ಲಿ, ಶ್ರೀಶೈಲ ಲೆಫ್ಟ್ ಬ್ಯಾಂಕ್, ರೈಟ್ ಬ್ಯಾಂಕ್, ತೆಲುಗು ಗಂಗಾ, ಪುಲಿಚಿಂತಲ ಮತ್ತು ಭೀಮ ಲೆಫ್ಟ್‌ನ್ನು ನಿಲ್ಲಿಸಿ ಎನ್ನುವುದೇ ನಿರ್ಣಯದಲ್ಲಿರತಕ್ಕಂಥದ್ದು, ಮತ್ತು ಆಲಮಟ್ಟಿ ಡ್ಯಾಮ್‌ನ್ನು ನಾವು ಯಾವುದೇ ರೀತಿಯಲ್ಲೂ ಕೆಳಗೆ ಇಳಿಸುವುದಿಲ್ಲ, 528 ಅಡಿ ಎತ್ತರವನ್ನು ಕಟ್ಟೇ ಕಟ್ಟುತ್ತೇವೆಂದು ಮಾತ್ರ ಅದರಲ್ಲಿ ಇದೆ. ಅದಕ್ಕೂ ಇದಕ್ಕೂ ಏನು ವಿರುದ್ಧ ಇದೆ? ನೀವು ಮಾಡಿದ ತಪ್ಪನ್ನು ಹೇಳಬಾರದು ಎಂದರೆ ಹೇಗೆ?

ಅಧ್ಯಕ್ಷರು : ಸಭಾಧ್ಯಕ್ಷನಾಗಿ ನನ್ನ ಸ್ಥಿತಿ ಏನಿದೆಯೆಂದರೆ, ಸಾಮಾನ್ಯವಾಗಿ ಒಂದು ನಿರ್ಣಯವು ಸರ್ವಾನುಮತದಿಂದ ಅಂಗೀಕಾರ ಮಾಡಿದ ಮೇಲೆ ಪುನಃ ಅದರ ಮೇಲೆ ಚರ್ಚೆ ಮಾಡತಕ್ಕಂಥಾದ್ದು ಸರಿಯಲ್ಲ.ಆ ದಿವಸ ನಿರ್ಣಯವನ್ನು ಸಿದ್ದ ಮಾಡಿಕೊಂಡು ಬಂದಿದ್ದೇ ನಾಲ್ಕೂವರೆ ಗಂಟೆಗೆ.5 ಗಂಟೆಗೆ ರಾಷ್ಟ್ರಪತಿಗಳ ಒಂದು ಕಾರ್ಯಕ್ರಮ ಕೆಳಗಡೆ ಇತ್ತು. ಆಗ ಚರ್ಚೆಯಾಗಲೇಬೇಕೆಂಬ ಅಭಿಪ್ರಾಯವನ್ನು ತಾವು ವ್ಯಕ್ತಪಡಿಸಿದ್ದಿರಿ. ಈಗ ಮಾಡತಕ್ಕಂಥಾದ್ದು ಹೊಸ ಪದ್ಧತಿಯಾದರೂ ಕೂಡ ಅನಿವಾರ್ಯವಾಗಿ ನಾನು ಅಸಹಾಯಕ ಸ್ಥಿತಿಯಲ್ಲಿರುವಾಗ ನಾನು ಏನು ಮಾಡಲಿ? ಆ ದಿವಸ ಮೂರು ಗಂಟೆಗೆ ಎರಡೂವರೆಗೆ ಗಂಟೆಗೋ ನಿರ್ಣಯವನ್ನು ತಂದು ಕೊಟ್ಟಿದ್ದಿದ್ದರೆ, ಬಹುಶಃ ಆವತ್ತೇ ಎಲ್ಲಾ ಮುಗಿದುಹೋಗಿಬಿಡುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮೇಲೆ ನಾವು ಏನೂ ಹೇಳಲಿಲ್ಲ. ದಯಿವಿಟ್ಟು ತಾವು ಕ್ಷಮಿಸಬೇಕು.

ಅಧ್ಯಕ್ಷರು : ಇದು ಹೊಸ ನಮೂನೆ ಆಯಿತಲ್ಲಾ ಎಂದು ನನ್ನ ಹತ್ತಿರ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದರು.

ಶ್ರೀ ವಾಟಾಳ್ ನಾಗರಾಜ್ : ನಿರ್ಣಯ ಮಾಡಿರುವುದರ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಒಂದು ವಿಷಯವಿಲ್ಲದೆ ನಾವು ಏನೂ ಮಾತನಾಡುವುದಕ್ಕಾಗುವುದಿಲ್ಲವಲ್ಲಾ, ಮಾತನಾಡುವುದಕ್ಕೆ ಏನಾದರೂ ಒಂದು ಆಧಾರ ಬೇಕಲ್ಲಾ! ಈ ನಿರ್ಣಯವನ್ನು ನಾವು ಏಕೆ ಮಾಡಿದೆವು? ಆ ನಿರ್ಣಯವನ್ನು ಸರ್ವಾನುಮತಿಂದ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆ ನಿರ್ಣಯವನ್ನು ಬಹಳ ಗಂಭೀರವಾಗಿ, ಭಯ ಭೀತಿಯಿಂದ ಮಾಡತಕ್ಕಂಥ ಪರಿಸ್ಥಿತಿ ಏನಾಗಿತ್ತು? ತಜ್ಞರ ಸಮಿತಿ ರಚನೆಯಾದದ್ದನ್ನು ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳು ಸ್ವಾಗತ ಮಾಡಿದರು. ಹಾಗೆಯೇ ಇತರೆ ನಾಲ್ಕು ರಾಜ್ಯದ ಮುಖ್ಯಮಂತ್ರಿಗಳೂ ಸ್ವಾಗತ ಮಾಡಿದರು. ಅವರು ಏನು ವರದಿ ಕೊಡುತ್ತಾರೋ ಕೊಡಲಿ ಎಂದು ಅನೇಕ ಬಹಿರಂಗ ಸಭೆಗಳಲ್ಲಿ ಹೇಳಿದರು. ಅಲ್ಲಿಂದ ಬಂದಂಥ

ತಜ್ಞರುಗಳಿಗೆ ಅಶೋಕ ಹೋಟೆಲ್‌ನಲ್ಲಿ ಅತಿಥ್ಯ ಕೊಟ್ಟರು. ಆಲಮಟ್ಟಿ ಜಲಾಶಯಕ್ಕೆ ಅವರು ಹೋದರು, ಇವೆಲ್ಲವೂ ನಡೆದಿವೆ. ಕೊನೆಗೆ ಮುಖ್ಯಮಂತ್ರಿಗಳು ಬಸು ಅವರಿಗೆ ಒಂದು ಪತ್ರವನ್ನು ಬರೆಯುತ್ತಾರೆ. " ಆಲಮಟ್ಟಿ ಆಣೆಕಟ್ಟು ಎತ್ತರದ ಬಗೆಗೆ ತಜ್ಞರ ಸಮತಿಯು ನೀಡಿರುವ ವರದಿಯು ಸಂಪೂರ್ಣವಾಗಿ ತಪ್ಪು ಹೇಳಿಕೆಯೆಂದು ಕೂಡಿದ್ದು, ಅದು ಅಂಗೀಕಾರಾರ್ಹ ಅಲ್ಲವೆಂದು ಕರ್ನಾಟಕದ ಹೇಳಿಕೆಯನ್ನು, ಅದು ಗಮನಕ್ಕ ತೆಗೆದುಕೊಂಡೇ ಇಲ್ಲ, ಅಂದರೆ, ಎಲ್ಲವೂ ನಡೆದಿದೆ. ಇವರ ಹೇಳಿಕೆ ಅವರಿಗೆ ಕೊಟ್ಟಿದ್ದಾರೆ, ಅವರ ಜೊತೆಯಲ್ಲಿ ಇವರು ಮಾತನಾಡಿದ್ದಾರೆ, ಪ್ರತಿಯೊಂದೂ ವ್ಯವಹಾರ ನಡೆದಿದೆ. ಈಗ ವರದಿ ಸರಿಯಿಲ್ಲವೆಂದು ಹೇಳಿದ್ದಾರೆ. ಸಮಿತಿ ರಚನೆಯಾದ ದಿವಸವೇ ಅದು ಬೇಡವೆಂದು ಹೇಳಬೇಕಾಗಿತ್ತು.

ಆವತ್ತು ಸಮಿತಿ ರಚನೆಯಾದ ದಿವಸವೇ ಆ ಸಮಿತಿಗೆ ಯಾವುದೇ ಗಾಂಭೀರ್ಯ, ಘನತೆ ಶಕ್ತಿ ಎನ್ನುವುದು ಇಲ್ಲ ಎಂದು ಹೇಳಬಹುದಿತ್ತು. ಆದರೆ ಅದನ್ನು ಯಾವುದೂ ಹೇಳಲಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ ಕರ್ನಾಟಕ ಕಾವೇರಿ ಬಗ್ಗೆ, ಕೃಷ್ಣಾ ಬಗ್ಗೆ ಇವತ್ತು ನಮ್ಮ ಕರ್ನಾಟಕದಲ್ಲಿ ಬೆಂಕಿ ಬಿದ್ದಿದೆ. ಹೀಗೆ ಬೆಂಕಿ ಬಿದ್ದಿರುವಾಗ ಆಂಧ್ರದವರೂ ಈ ಬೆಂಕಿಗೆ ಗಳುವನ್ನು ಇರಿಸುತ್ತಿದ್ದಾರೆ, ತಮಿಳುನಾಡಿನವರು ಇರಿಸುತ್ತಿದ್ದಾರೆ. ಅದಕ್ಕೆ ನೀರು ಹಾಕತಕ್ಕಂಥವರು ಯಾರು? ಈ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಆದ್ದರಿಂದ ರಾಜ್ಯದ ಐದು ಕೋಟಿ ಕನ್ನಡಿಗರು ಕರ್ನಾಟಕದ ಹಿತಕ್ಕಾಗಿ ಆಲಮಟ್ಟಿ ಆಣೆಕಟ್ಟಿನ ಎತ್ತರವನ್ನು ಇಳಿಸಿದರೆ ಕರ್ನಾಟಕದಲ್ಲಿ ರಕ್ತಪಾತವಾಗುತ್ತದೆ. ಇರಬಹುದು ಚಳುವಳಿ ನಡೆದಿಲ್ಲ, ಆಗಿಲ್ಲವೆನ್ನತಕ್ಕಂಥ ಮಾತುಗಳು ಇರಬಹುದು. ಆದರೆ ರಕ್ತಪಾತವಾಗುತ್ತದೆ. ಇದರ ಬಗ್ಗೆ ರಸ್ತೆ ರಸ್ತೆಗಳಲ್ಲಿ, ಬೀದಿ ಬೀದಿಗಳಲ್ಲಿ ಹೋರಾಟವಾಗುತ್ತದೆ. ಇದರಿಂದ ಅತ್ಯಂತ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಜನರ ಕೈಯಲ್ಲಿ ಈ ಚಳುವಳಿ ಹೋಗುತ್ತದೆ ಎನ್ನುವ ಮಾತನ್ನು ಹೇಳಿ ಈ ಅನೈತಿಕವಾದಂಥ ವರದಿ ಎಂದು ಏನು ಹೇಳುತ್ತೀರಿ ಇದನ್ನು ನಾನು ಈ ಸದನದಲ್ಲಿ ಸುಡುತ್ತೇನೆ.

ಅಧ್ಯಕ್ಷರು : ಅವೆಲ್ಲಾ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್ : ಇದು ಅನೈತಿಕವಾದಂಥ ವರದಿ ಎಂದು ಹೇಳಿದ ಮೇಲೆ ನಿಜ, ನನಗೆ ಈ ಸದನದ ಗಾಂಭೀರ್ಯದ ಬಗ್ಗೆ...

ಅಧ್ಯಕ್ಷರು : ನೀವು ದಯಮಾಡಿ ಕೇಳಿ. ನೀವು ಸದನದ ಅತ್ಯಂತ ಹಿರಿಯ ಗೌರವಾನ್ವಿತ ಸದಸ್ಯರು, ಇದ್ದೀರಿ. ನೀವು ಇನ್ನಷ್ಟು ಕಠಿಣವಾದ ಭಾಷೆಯನ್ನು ಪ್ರಯೋಗ ಮಾಡಿ ಅದಕ್ಕೆ ನನ್ನ ಅಭ್ಯಂತರ ಇಲ್ಲ. ಆದರೆ ದಯಮಾಡಿ ಆ ರೀತಿಯ ಕೆಲಸಕ್ಕೆ ಅವಕಾಶ ಕೊಡಬೇಡಿ. ನಾನು ನಿಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಮನಸ್ಸಿನಲ್ಲಿ ವೇದನೆಯಾಗಿದೆ. ನನ್ನ ಉದ್ದೇಶ ಈ ಸದನಕ್ಕೆ ಅಗೌರವ ತರಬೇಕು ಎಂದು ಅಲ್ಲ. ಇದು ಅನೈತಿಕವಾದ ವರದಿ ಎಂದು ಹೇಳಿದ ಮೇಲೆ ಇದಕ್ಕೆ ಏನು ಮಾಡಬೇಕು? ತಾವೇ ಹೇಳಿ. ಈ ಪರಿಸ್ಥಿತಿ ನಿರ್ಮಾಣವಾಗಿದೆ. ದಯಮಾಡಿ ತಾವು ವೈಯಕ್ತಿಕವಾಗಿ ನನ್ನ ಮೇಲೆ ಬೇಜಾರು ಮಾಡಿಕೊಳ್ಳಬೇಡಿ, ಕೋಪ ಮಾಡಿಕೊಳ್ಳಬೇಡಿ. ಈ ಸದನದ ಎಲ್ಲಾ ಸದಸ್ಯರನ್ನೂ ಅತ್ಯಂತ ಕಳಕಳಿಯಿಂದ ಕೈಮುಗಿದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ದಯಮಾಡಿ ನೀವು ಅಲ್ಲಿಯವರೆಗೆ ಇದನ್ನು ತೆಗೆದುಕೊಂಡು ಹೋಗಬೇಡಿ. ನೀವು ಬೇಕಾದರೆ ಈ ಕೆಲಸವನ್ನು ಹೊರಗಡೆ ಚಳುವಳಿಯನ್ನು ಮಾಡಿದ ಮೇಲೆ ಮಾಡಿ. ಸದನದಲ್ಲಿ ಅದನ್ನು ಮಾಡಬೇಡಿ. ದಯಮಾಡಿ ಸದನದ ಒಳಗೆ ಅವಕಾಶ ಕೊಡಬೇಡಿ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಇದನ್ನು ವಿರೋಧ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಇವತ್ತು ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಅನೈತಿಕವಾದಂಥ ವರದಿ, ಇದು ಒಂದು ಸಣ್ಣ ಪೇಪರ್.

ಮಾನ್ಯ ಸದಸ್ಯರು : ಇದರ ಬಗ್ಗೆ ಗಂಟೆಗಟ್ಟಲೆ ಟೀಕೆ ಮಾಡಿದ್ದಾರೆ. ಆದರೂ ನಾವು ಸುಮ್ಮನೆ ಕುಳಿತಿದ್ದೇವೆ. ಏನೂ ಮಾತನಾಡುವುದಕ್ಕೆ ಹೋಗಲಿಲ್ಲ.

ಅಧ್ಯಕ್ಷರು : ನೋಡಿ ನಾನು ಏನು ಹೇಳುತ್ತೇನೆ ಎಂದರೆ ನಮ್ಮಿಬ್ಬರ ಪರಸ್ಪರ ಸಂಬಂಧ ಬಹಳ ಚೆನ್ನಾಗಿದೆ. ತಾವು ಸದಸ್ಯರಾಗಿ, ನಾನು ಸಭಾಧ್ಯಕ್ಷನಾಗಿ ತಾವೆಲ್ಲರೂ ಕೂಡ ಅನೇಕ ಸಂದರ್ಭಗಳಲ್ಲಿ ನನಗೆ ಮಾರ್ಗದರ್ಶನ ಕೊಟ್ಟು ಸಹಕರಿಸಿಕೊಂಡು ಹೋಗುತ್ತಿದ್ದೀರಿ. ನಾನು ಈ ಸ್ಥಾನದಲ್ಲಿ ಕುಳಿತುಕೊಂಡು ಅದಕ್ಕೆ ಅನುಮತಿಯನ್ನು ಕೊಡುವುದಕ್ಕಾಗುವುದಿಲ್ಲ. ಇದರ ಮೇಲೆ ನಾನು ನಿಮ್ಮ ನಿರ್ಣಯಕ್ಕೆ ಬಿಡುತ್ತೇನೆ. ನಾನು ಇಲ್ಲಿ ಇರಬಾರದು ಎನ್ನುವ ಆಸೆ ನಿಮಗೆ ಇರುವುದಾದರೆ ನೀವು ಏನು ಬೇಕಾದರೂ ಮಾಡಿ. ಇದನ್ನು ಹೊರಗಡೆ ಮಾಡಿ ನನ್ನ ಅಭ್ಯಂತರ ಏನೂ ಇಲ್ಲ. ಇನ್ನೂ ಬೇಕಾದರೆ ಹತ್ತು ನಿಮಿಷ ಟೀಕೆ ಮಾಡಿ. ಆದರೆ ಸುಡುವುದು ಮಾತ್ರ ಈ ಸದನದ ಒಳಗಡೆ ದಯವಿಟ್ಟು ಮಾಡಬೇಡಿ. ಇದು ಏನಾಗುತ್ತದೆ ಅಂದರೆ ನಾನೇ ಅಧ್ಯಕ್ಷನಾಗಿದ್ದು ನಿಮ್ಮ ಮೇಲೆ ಕ್ರಮ ಜರುಗಿಸಬೇಕು. ಅದು ನನಗೆ ಇಷ್ಟವಿಲ್ಲ. ಆ ಕೆಲಸವನ್ನು ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ಆದುದರಿಂದ ನಾನು ನಿಮಗೆ ನೇರವಾಗಿ ಇಲ್ಲ ಹೇಳಿಬಿಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಮೇಲೆ ತಾವು ಕ್ರಮ ಜರುಗಿಸುವುದಿಲ್ಲ ಎಂದು ನನಗೆ ಗೊತ್ತು.

ಅಧ್ಯಕ್ಷರು : ನಾನು ಜರುಗಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಸದನ ಬಿಟ್ಟು ಹೋಗತಕ್ಕಂಥ ಪರಿಸ್ಥಿತಿಗೆ ನಾನು ಹೋಗುವುದಿಲ್ಲ.

ಅಧ್ಯಕ್ಷರು : ಅಲ್ಲ, ಸದನ ಬಿಟ್ಟು ಹೋಗುವ ಪ್ರಶ್ನೆ ಅಲ್ಲ. ನಾನು ಇಲ್ಲಿ ಅಧ್ಯಕ್ಷನಾಗಿದ್ದು ನೀವು ಆ ಕೆಲಸವನ್ನು ಮಾಡುವುದಾದರೆ ನಾನು ನೋಡಿಕೊಂಡು ಕುಳಿತುಕೊಳ್ಳಲಿಕ್ಕೆ ಆಗುವುದಿಲ್ಲ. ನಾನು ಇಲ್ಲಿ ಕುಳಿತಿರಬೇಕು ಎಂದರೆ ನಾನು ಕ್ರಮ ಜರುಗಿಸಬೇಕು. ನನಗೆ ನಿಮ್ಮ ಮೇಲೆ ಕ್ರಮ ಜರುಗಿಸುವುದಕ್ಕೆ ನನಗೆ ಮನಸ್ಸಿಲ್ಲ. ಆದುದರಿಂದ ಮುಂದಿನ ಪರಿಣಾಮ ಏನಾಗುತ್ತದೆ ಎಂದು ನೀರೇ ಊಹಿಸಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ತಾವು ನನ್ನ ಮೇಲೆ ಕ್ರಮ ಜರುಗಿಸಿ.

ಅಧ್ಯಕ್ಷರು : ಇಲ್ಲ, ಇಲ್ಲ. ದಯಮಾಡಿ ಇಲ್ಲಿ ಅದಕ್ಕೆ ಅವಕಾಶ ಇಲ್ಲ. ನೀವು ನನ್ನ ಜೊತೆ ಸಹಕರಿಸುತ್ತೀರಿ ಎಂಬ ವಿಶ್ವಾಸ ನನಗೆ ಇದೆ. ಯಾವಾಗಲೂ ಜಗಳ ಮಾಡಿಕೊಂಡು ಅವರ ಜೊತೆಗೆ ಸಹಕರಿಸುತ್ತೀರಿ. ನನ್ನ ಜೊತೆಗೂ ಒಂದು ಸಲ ಸಹಕರಿಸಿ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಜೊತೆ ನಾನು ಯಾವಾಗಲೂ ಸಹಕರಿಸುತ್ತೇನೆ.

ಅಧ್ಯಕ್ಷರು : ನೀವು ಇನ್ನೂ ಕಠಿಣವಾದ ಟೀಕೆ ಮಾಡಿ, ನನಗೆ ಅಭ್ಯಂತರ ಇಲ್ಲ. ಬೇಕಾಗಿದ್ದರೆ ರಾಜ್ಯಪಾಲರ ಭಾಷಣ, ಬಜೆಟ್ ಎಲ್ಲಾ ಹರಿದು ಹಾಕಬೇಕು ಎಂದು ಹೇಳಿದರೆ ಅದಕ್ಕೆ ಅನುಮತಿ ಕೊಡುತ್ತೇನೆ, ಹರಿದು ಹಾಕಿಬಿಡಿ. ಆದರೆ ಬೆಂಕಿ ಹಚ್ಚುವುದು ಮಾತ್ರ ಮಾಡಬೇಡಿ. ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ ನಾನು ಇದನ್ನು ಲಘುವಾಗಿ ಕಾಣುತ್ತಿಲ್ಲ, ವ್ಯಂಗ್ಯ ಮಾಡುತ್ತಿಲ್ಲ. ಪ್ರಾಮಾಣಿಕವಾಗಿ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ನಾನು ತಮ್ಮನ್ನು ವ್ಯಂಗ್ಯ ಮಾಡುತ್ತಿದ್ದೇನೆ ಎಂದು ತಾವು ತಿಳಿದುಕೊಂಡರೆ, ದಯಮಾಡಿ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ, ನಾನು ಈ ದೃಷ್ಟಿಯಿಂದ ಹೇಳುತ್ತಿಲ್ಲ. ಖಂಡಿತ ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಅದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ಅದಕ್ಕೆ ಅವಕಾಶ ಕೊಡುವುದು ಬೇಡ. ದಯಮಾಡಿ ತಾವು ಸಹಕರಿಸಬೇಕು.

ಶ್ರೀ ಯು.ಆರ್. ಸಭಾಪತಿ : ಆ ಸಂಪ್ರದಾಯ ಬೇಡ ಎಂದು ಸಭಾಧ್ಯಕ್ಷರು ವಿನಂತಿ ಮಾಡಿಕೊಳ್ಳುತ್ತಿದ್ದಾರೆ. ಅದನ್ನು ಸ್ವಲ್ಪ ಬದಲಾವಣೆ ಮಾಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ತಾವು ಮನಸ್ಸಿಗೆ ನೋವು ಮಾಡಿಕೊಳ್ಳಬಾರದು.

ಅಧ್ಯಕ್ಷರು : ನನ್ನ ಪ್ರಶ್ನೆ ಅದಲ್ಲ. ಇದು ಸ್ಥಾನ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರು ಮತ್ತು ನೀವು, ನಿಮ್ಮಿಬ್ಬರಲ್ಲಿ ಬಹಳ ಆತ್ಮೀಯತೆ ಇದೆ. ಈಗ ಅವರೇ ರಿಕ್ವೆಸ್ಟ್ ಮಾಡಿಕೊಂಡ ಮೇಲೆ ಸರ್ಕಾರದ ವಿರುದ್ಧ ಏನು ಪ್ರತಿಭಟನೆ ಮಾಡಬೇಕೋ ಅದನ್ನು ಮಾಡೋಣ. ಈಗ ಅವರೇ ಹೇಳಿದ ಮೇಲೆ ಅದನ್ನು ನೀವು ಹರಿದು ಬಿಸಾಕಿಬಿಡಿ; ಅವರಿಗೇ ಕೊಟ್ಟುಬಿಡಿ. ಅದನ್ನೂ ಅವರು ಜೇಬಿನಲ್ಲಿಟ್ಟುಕೊಳ್ಳಲಿ.

ಶ್ರೀ ವಾಟಾಳ್ ನಾಗರಾಜ್ : ಸರ, ಇದರಲ್ಲ ತಪ್ಪು ಏನಾಗುತ್ತದ?

ಅಧ್ಯಕ್ಷರು : ಸದನದಲ್ಲಿ ಕೆಲವನ್ನು ನಾವು ಮಾಡಬಾರದು. ಚೆನ್ನಾಗಿರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಬೆಲೆ ಇಲ್ಲ. ಅನೈತಿಕವಾದಂಥ ವರದಿ. ಅದಕ್ಕಾಗಿ ನಾನು ಇದಕ್ಕೆ ಬೆಂಕಿ ಇಡಬೇಕು ಎನ್ನುವಂಥಾದ್ದು ನನ್ನ ನಿರ್ಧಾರ ನನ್ನ ನಿರ್ಧಾರಕ್ಕೆ ತಾವು ಅಡ್ಡಿಪಡಿಸಿದಿರಿ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ನಿಮ್ಮ ವೇದನೆಯಿಂದಾಗಿ ನಾನು ಹಿಂದೆ ಸರಿಯಬೇಕಾಗಿದೆ. ಬೇರೆ ಯಾವ ವೇದನೆಯಿಂದಲೂ ಅಲ್ಲ. ಆದರೆ ರಾಜ್ಯಾದ್ಯಂತ ಇದನ್ನು ಸುಡತಕ್ಕಂಥ ಕಾರ್ಯಕ್ರಮವನ್ನು ನಾನು ಹಾಕಿಕೊಳ್ಳುತ್ತೇನೆ. ರಸ್ತೆ ರಸ್ತೆಗಳಲ್ಲಿ ಬೀದಿ ಬೀದಿಗಳಲ್ಲಿ ಈ ಅನೈತಿಕವಾದಂಥ ವರದಿಯನ್ನು ಸುಡುತ್ತೇನೆ. ಇದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ನೀವು ನನ್ನನ್ನು ಅತ್ಯಂತ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಸಿದ್ದೀರಿ ಎಂದು ಹೇಳಿದಿದ್ದರೂ ಕೂಡ ನಾನು ಸಾಮಾನ್ಯವಾಗಿ ಯಾರ ಮಾತಿಗೂ ಬಗ್ಗುವವನಲ್ಲ.

ಏಕೋ ಏನೋ ನೀವು ನನ್ನನ್ನು ಅಸಹಾಯಕನನ್ನಾಗಿ ಮಾಡಿ, ನನ್ನನ್ನು ಬೃಹನ್ನಳೆ ವೇಷಕ್ಕೆ ತಂದಿಟ್ಟಿದ್ದೀರಿ. ಆದರೂ ಸಂತೋಷ. ನಾನು ಇದನ್ನು ಹರಿದು ಬಿಸಾಕುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ವರದಿಯನ್ನು ಹರಿದು ಹಾಕಿದರು)

ಶ್ರೀ ಹೆಚ್.ಎನ್. ನಂಜೇಗೌಡ : ಅಂತೂ ಒಂದು ಸಾರಿ ನೀವು ಅವರಿಗೆ ಸೀರೆ ಉಡಿಸಿಬಿಟ್ಟಿರಿ.

ಅಧ್ಯಕ್ಷರು : ಸರ್ಕಾರದಿಂದ ಉತ್ತರ ಕೊಡಿಸೋಣ.

ಶ್ರೀ ಡಿ.ಬಿ. ಜಯಚಂದ್ರ : ನಾನು 2 ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು : ಸಾಕು ಬಿಡಿ. ಏನು ವೈಜನಾಥ್?

ಶ್ರೀ ವೈಜನಾಥ್ ಪಾಟೀಲ್ : ನಾನು ಎರಡು ಮಾತನಾಕಡಬೇಕಾಗಿದೆ.

ಅಧ್ಯಕ್ಷರು : ಬೇಡಿ ಏಕೆ? The Hon'ble Leader of the House should come to my reseue.

ಶ್ರೀ ವೈಜನಾಥ್ ಪಾಟೀಲ್ : ಸಭಾನಾಯಕರು ಹೇಳುತ್ತಾರೆ, ನಾನು ಈ ಭಾಗದಿಂದ ಬಂದವನು. ಆಲಮಟ್ಟಿ ಬಗ್ಗೆ ನಾನು ಈ ಸರ್ಕಾರಕ್ಕೆ ಹೇಳಬೇಕಾಗಿರುವುದರಿಂದ ನನಗೆ ಅವಕಾಶ ಕೊಡಬೇಕು ಎಂದು ತಮ್ಮನ್ನು ಕೇಳುತ್ತಿದ್ದೇನೆ. ಸಮಯ ಇಲ್ಲ ಅಂದರೆ ತಮಗೆ ಬಿಟ್ಟಿದ್ದುದು.

MR. SPEAKER : When he insists an opportunity being given, it becomes very difficult for me. ಪುಟ್ಟಣ್ಣಯ್ಯನವರು ಮಾತನಾಡಿಬಿಡಲಿ. ನನ್ನದು ಏನೂ ಇಲ್ಲ, ತಮಗೆ ಅಡ್ಡಿಪಡಿಸಬೇಕು ಎಂದು ಅಲ್ಲ. ಎಲ್ಲರೂ ಮಾತನಾಡಿದ್ದಾರೆ. ಸರ್ಕಾರದ ಉತ್ತರ ಬರಬೇಕಲ್ಲಾ? ಈಗಾಗಲೇ 12.45 ಆಯಿತು. ಮತ್ತೆ ಪ್ರಶ್ನೋತ್ತರ ಬೇರೆ ತೆಗೆದುಕೊಳ್ಳ ಬೇಕು. ಸೋಮವಾರದಿಂದ ನಾವು ಬಿಸಿನೆಸ್ ಟ್ರಾನ್ಸ್‌ಸ್ಯಾಕ್ಟ್ ಮಾಡಿಲ್ಲ. ನಿಮ್ಮ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಬೇಗ ಮುಗಿಸಿ ಎಂದು ಎರಡು ನಿಮಿಷಕ್ಕಿಂತ ಜಾಸ್ತಿ ಬೇಡ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರುಗಳು ರಾಜಕೀಯವಾಗಿ ತಾಂತ್ರಿಕವಾಗಿ ಅತ್ಯಂತ ಗಂಭೀರವಾಗಿ ಸುಮಾರು ಎರಡು-ಎರಡೂವರೆ ಗಂಟೆಗಳ ಕಾಲ ಚರ್ಚೆ ನಡೆಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ನೀರಾವರಿ ಮಂತ್ರಿಗಳನ್ನು ಈ ವಿಷಯದಲ್ಲ ರಾಜಕೀಯವಾಗಿ ರಾಜೀನಾಮೆ ಕೇಳಿ ಆಗಿದೆ. ಆದರೆ ಮಾನ್ಯ ವಾಟಾಳ್ ನಾಗರಾಜ್ ಅವರು ಏನು ಆಂಧ್ರ ಸಭೆಯ ನಿರ್ಣಯವನ್ನು ಹರಿದುಹಾಕುವುದರ ಮೂಲಕ ಅದು ಅನೈತಿಕ ಪತ್ರ ಎಂದು ತಿರಸ್ಕಾರ ಮಾಡಿರಬಹುದು. ಆದರೆ ಅತ್ಯಂತ ಗಂಭೀರವಾಗಿ ನಾವು ಯೋಚನೆ ಮಾಡಬೇಕಾಗುತ್ತದೆ. ಆಲಮಟ್ಟಿ ವಿಷಯದ ರಾಷ್ಟ್ರದ ಮೇಲೆ ಎಂತಹ ಪರಿಣಾಮ ಬೀರಿದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ನಾವು ಮೇಲ್ದಂಡೆ ರಾಜ್ಯಗಳು. ತಮಿಳುನಾಡು, ಆಂಧ್ರಪ್ರದೇಶ ಎಲ್ಲಾ ಕೆಳದಂಡೆ ರಾಜ್ಯಗಳು. ನಾವು ಹಳ್ಳಿಗಳ ಕಡೆ ಹೇಳುತ್ತೇವೆ. ಇದು ತಾಳಮಡುವ ಗದ್ದೆಯವನಿಗೂ ಕೊನೆ

ಗದ್ದೆಯವನಿಗೂ ನಡೆಯುವ ಯುದ್ಧ. ಆದರೆ ರಾಷ್ಟ್ರದಲ್ಲಿ ಎಲ್ಲಾ ಪತ್ರಿಕೆಗಳೂ ಕರ್ನಾಟಕದವರು ಯಾವ ತರಹ ತೀಟೆ ಮಾಡುತ್ತಿದ್ದಾರೆ ಎಂಬ ಒಂದು ಪ್ರತಿಕ್ರಿಯೆ ಎಲ್ಲಾ ಕಡೆ ವ್ಯಕ್ತವಾಯಿತು. ನಾವು ಅದನ್ನು ತಿರಸ್ಕಾರ ಮಾಡಿರಬಹುದು. ನೀವು ಅದರ ವಿರುದ್ಧವಾಗಿ ನಿರ್ಣಯ ಮಾಡಿರಬಹುದು. ಆದರೆ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಕರ್ನಾಟಕದ ಬಗ್ಗೆ ಎಷ್ಟೊಂದು ಕೆಟ್ಟ ತೀರ್ಮಾನಕ್ಕೆ ಬರತಕ್ಕಂಥ ಪರಿಸ್ಥಿತಿ ಸೃಷ್ಟಿ ಆಯಿತು ಇದಕ್ಕೆ ಯಾರು ಹೊಣೆಗಾರರು? ಇದಕ್ಕೆ ತಾವೇ ಹೊಣೆಗಾರರು. "ಗುಡ್‌ವಿಲ್ ಕಮಿಟಿ" ಮಾಡುವಂಥ ಪರಿಸ್ಥಿತಿ ಏನಿತ್ತು? ಏನಾದರೂ ಬಚಾವತ್ ಆಯೋಗದ ಬಗ್ಗೆ ಕರ್ನಾಟಕ ಸರ್ಕಾರ ತಪ್ಪು ಮಾಡಿದ್ದರೆ ಸೆಂಟ್ರಲ್ ವಾಟರ್ ಕಮಿಷನ್ ಇತ್ತು. ಅದಕ್ಕೆ ಬೇಕಾದರೆ ಪರಿಶೀಲನೆ ಮಾಡಬಹುದಾಗಿತ್ತು.

ಅದಕ್ಕೆ ಸಮಿತಿಯು ಬೇಕಾಗಿರಲಿಲ್ಲ. ಇದಕ್ಕೆ ತನ್ನದೇ ಆದಂಥ ನಿಯಮಾವಳಿಗಳನ್ನು ಸೃಷ್ಟಿ ಮಾಡಿ ಬಚಾವತ ಆಯೋಗದ ಪ್ರಕಾರ ಕೆಲಸ ಮಾಡುತ್ತಿರತಕ್ಕಂಥ ಕರ್ನಾಟಕ ಸರಕಾರಕ್ಕೆ, ಇವರು ತಪ್ಪು ಮಾಡಿದ್ದರೆ ಸೆಂಟ್ರಲ್ ವಾಟರ್ ಕಮಿಷನ್‌ನವರು ಬಂದು ಪರಿಶೀಲನೆ ಮಾಡಬಹುದಾಗಿತ್ತು ಹೊರತಾಗಿ ಈ ಗುಡ್‌ವಿಲ್ ಕಮಿಟಿಯ ಅವಶ್ಯಕತೆಯೂ ಇರಲಿಲ್ಲ. ಆದರೆ ಗುಡ್‌ವಿಲ್ ಕಮಿಟಿಯು ಹೇಳಿರತಕ್ಕಂಥ ವಿಷಯ ರಾಷ್ಟ್ರದಾದ್ಯಂತ ಎಲ್ಲಾ ಪತ್ರಿಕೆಗಳ ಮೂಲಕ ಎಲ್ಲಾ ಜನರಿಗೆ ಗೊತ್ತಾಗತಕ್ಕಂಥ ವಿಷಯ. ಮೊದಲು ಮಾನ್ಯ ದೇವೇಗೌಡರು ಇದ್ದಾಗ ಒಂದು ಸಾರಿ ಕಾವೇರಿ ವಿಚಾರದಲ್ಲಿ ಹೇಳಿದ್ದ ನೆನಪು ಇದೆ. ಕರ್ನಾಟಕದ ಬಗ್ಗೆ ಕಾವೇರಿ ವಿಚಾರದಲ್ಲಿ ರಾಷ್ಟ್ರದಲ್ಲಿ ಒಂದು ಕೆಟ್ಟ ಅಭಿಪ್ರಾಯವು ಕ್ರೋಢೀಕರಿಸಿದೆ, ಅದನ್ನು ಇಡೀ ರಾಷ್ಟ್ರದ ಜನತೆಗೆ ನಾವು ಕೊಡಬೇಕಾಗುವುದರಿಂದ ನಾವು ಅತ್ಯಂತ ಜವಾಬ್ದಾರಿಯುತವಾಗಿ ಉತ್ತರವನ್ನು ಕೊಡಬೇಕಾಗಿದೆ ಎಂದು ಆವಾಗಲೇ ಮಾನ್ಯ ದೇವೇಗೌಡರು ಪ್ರತಿಕ್ರಿಯೆ ವ್ಯಕ್ತಪಡಿಸಿದರು. ನೀವು ನಾಲ್ಕು ಜನರ ಗುಡವಿಲಕಮಿಟಿಯವರನ್ನು ಸ್ವಾಗತ ಮಾಡಿಕೊಂಡು, ಬರಮಾಡಿಕೊಂಡು, ಮಾಡುವ ಪರಿಸ್ಥಿತಿಯು ನಿಮಗೆ ಏನಿತ್ತು ಎಂಬ ಬಗ್ಗೆ ದಯಮಾಡಿ ತಾವುಗಳು ಗಂಭೀರವಾಗಿ ಚಿಂತನೆ ಮಾಡಬೇಕು. ಇಲ್ಲಿ ರಾಜೀನಾಮೆಯನ್ನು ಯಾರು ಕೊಡಬೇಕು; ಯಾರು ಕೊಡಬಾರದು ಎಂಬ ಪ್ರಶ್ನೆಯು ಇಲ್ಲ. ರಾಜ್ಯದ ಜನತೆಗೆ ಅನ್ಯಾಯವಾದಲ್ಲಿ ಯಾರ ಹತ್ತಿರ ರಾಜೀನಾಮೆಯನ್ನು ತೆಗೆದುಕೊಳ್ಳಬೇಕೆಂಬ ತಯಾರಿಯಲ್ಲಿ ಅವರು ಇದ್ದೇ ಇರುತ್ತಾರೆ.

ಆದರೆ ಈ ತರಹದ ಸಮಸ್ಯೆಗಳ ಬಗ್ಗೆ, ವಿರೋಧ ಪಕ್ಷಗಳ ಜೊತೆಗೆ ಮಾತುಕತೆ ಮಾಡಬೇಕಾಗಿತ್ತು. ತಾವುಗಳು ಯಾವುದಕ್ಕೋಸ್ಕರವಾಗಿ ಈ ರೀತಿಯಾಗಿ ನಡೆದುಕೊಂಡಿದ್ದೀರಿ ಎಂದು ನನಗೆ ಗೊತ್ತಾಗಲಿಲ್ಲ. ಯಾವುದೋ ಒಂದು ವಿಷಯದಲ್ಲಿ ವಿರೋಧ ಪಕ್ಷ ಮಾನ್ಯ ಯಡಿಯೂರಪ್ಪನವರನ್ನು ಮತ್ತು ಮಾನ್ಯ ಖರ್ಗೆಯವರನ್ನು ಮಾತ್ರ ಕರೆದ ಮಾತನಾಡಿದರು, ನಮ್ಮೆಲ್ಲರನ್ನು ನಿರ್ಲಕ್ಷ್ಯ ಮಾಡಿದರು. ಆಗ ನಾವುಗಳು ವಿರೋಧ ಪಕ್ಷಗಳೇ ಅಥವಾ ವಿರೋಧಪಕ್ಷಗಳೇ ಒಂದು ಚರ್ಚೆಯಾಗಿತ್ತು. ಆಡಳಿತ ಪಕ್ಷಗಳು ಯಾವುದೇ ಇರಬಹುದು, ರಾಜ್ಯದ ಹಿತಚಿಂತನೆ ಬಗ್ಗೆ ವಿರೋಧ ಪಕ್ಷಗಳ ಜೊತೆಗೆ ಚರ್ಚಿಸಬೇಕು. ರಾಜ್ಯಕ್ಕೆ ಕೆಟ್ಟ ಹೆಸರು ಬರತಕ್ಕಂಥದ್ದರ ಬಗ್ಗೆ ಬಂದಾಗ ಎಲ್ಲಾ ರಾಜಕೀಯವನ್ನು ತಿರಸ್ಕಾರಮಾಡಿ ಒಂದು ಕಡೆ ಎಲ್ಲರೂ ಕುಳಿತು ಗಂಭೀರವಾಗಿ ಚರ್ಚೆ ಮಾಡಬೇಕು. ಈಗ ಆಲಮಟ್ಟಿಯ ವಿಷಯ ಅಂದರೆ ಒಂದು ರೀತಿಯ ಗೊಂದಲ ಸೃಷ್ಟಿಯಾದ ಹಾಗೆ ಆಗಿದೆ.

ಚಂದ್ರಬಾಬು ನಾಯ್ಡುರವರಿಗೂ ಮತ್ತು ಜೆ.ಹೆಚ್. ಪಟೇಲರಿಗೂ ಒಂದು ತರಹ ಕುಸ್ತಿ ಶುರುವಾದ ಹಾಗೆ ಆಗಿದೆ. ಆದ್ದರಿಂದ ಇಂಥ ಗೊಂದಲ ಸೃಷ್ಟಿಯಾಗಲು ರಾಜ್ಯ ಸರಕಾರದವರು ಅವಕಾಶ ಮಾಡಿಕೊಡಬಾರದು ಮತ್ತು ಅತ್ಯಂತ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಡಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೇ, ಆಲಮಟ್ಟಿ ಆಣೆಕಟ್ಟನ್ನು ಎತ್ತರಿಸುವ ವಿಷಯದಲ್ಲಿ ಆಂಧ್ರಪ್ರದೇಶದ ವಿಧಾನಸಭೆಯಲ್ಲಿ ಮತ್ತು ಸಂಸತ್ತಿನಲ್ಲಿ ವಿಷಯವು ಪ್ರಸ್ತಾಪವಾದ ಮೇಲೆ ನಾವು ನಮ್ಮ ಪಕ್ಷದ ಪರವಾಗಿ ಒಂದು ನಿಲುವಳಿ ಸೂಚನೆಯ ಮೂಲಕ ತಮ್ಮ ಗಮನಕ್ಕೆ ಸಭೆಯಲ್ಲಿ ಪ್ರಸ್ತಾಪಿಸಿ, ಆ ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಳ್ಳಬೇಕೆನ್ನತಕ್ಕಂಥ ರೀತಿಯಲ್ಲಿ ವಾದವನ್ನು ಮಂಡನೆ ಮಾಡಬೇಕೆನ್ನುವಂಥ ಹಂತದಲ್ಲಿದ್ದಾಗ ಸರ್ವಪಕ್ಷಗಳ ನಾಯಕರುಗಳ ಅಭಿಪ್ರಾಯದ ರೀತಿಯಲ್ಲಿ ಒಂದು ಸರ್ವಸಮ್ಮತವಾದ ನಿರ್ಣಯವನ್ನು ತರಬೇಕೆಂಬ ಸಲಹೆಯು ಎರಡೂ ಕಡೆಗಳಿಂದ ಮೂಡಿ ಬಂತು ಆ ಪ್ರಕಾರ ಈಗಾಗಲೇ ಒಂದು ನಿರ್ಣಯವನ್ನು ನಾವು ತಂದಿದ್ದೇವೆ. ಆ ನಿರ್ಣಯಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೂಡ ನಾವು ಕೊಡುತ್ತಿದ್ದೇವೆ. ಅನೇಕ ಸಂದರ್ಭಗಳಲ್ಲಿ ವಿಧಾನಸಭೆಯಲ್ಲಿ ಇಂಥ ನಿರ್ಣಯಗಳನ್ನು ತಂದಿದ್ದೇವೆ. ನಾವು ಯಾವಾಗ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿ ನಿರ್ಣಯಗಳನ್ನು ಅನುಮೋದನೆ ಮಾಡುತ್ತೇವೆ, ಅಂಗೀಕರಿಸುತ್ತೇವೆಯೋ, ಆ ಧಾಟಿಯಲ್ಲಿ ಇವೊತ್ತು ಅವುಗಳು ಜಾರಿಯಾಗಿಲ್ಲ. ಹಾಗಾದರೆ ಇವುಗಳನ್ನು ಸರಕಾರಗಳು ವಿರೋಧ ಮಾಡಿಲ್ಲವೇ ? ಅದಕ್ಕೆ ವಿರುದ್ಧವಾಗಿ ನಡೆದಿಲ್ಲವೇ ಎನ್ನುವುದನ್ನು ನೋಡಿದಾಗ ನಮಗೆ ಅನೇಕ ನಿದರ್ಶನಗಳು ಸಿಗಬಹುದು. ಇವೊತ್ತು ನಾವು ಈ ವಿಷಯಗಳನ್ನು ಚರ್ಚೆ ಮಾಡತಕ್ಕಂಥ ಅವಶ್ಯಕತೆ ಏನಿತ್ತು ಅಂದರೆ ಇವೊತ್ತು ನಾವು ತಂದಂಥ ನಿರ್ಣಯವು ಸರ್ವಾನುಮತವಾಗಿ ಎಲ್ಲರ ಒಂದೇ ಅಭಿಪ್ರಾಯಕ್ಕೆ ಒಳಪಟ್ಟಿದ್ದು, ಅದುರ ಪೂರ್ಣ ಜಾರಿಯಾಗಬೇಕೆನ್ನುವ ದೃಷ್ಟಿಯಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಸಮರ್ಥವಾದ ರೀತಿಯಲ್ಲಿ ವಾದವನ್ನು ಮುಂದಿಟ್ಟು ನೀವು ಯಾವರೀತಿಯಲ್ಲಿ ಮುಂದೆ ನಡೆಯಬೇಕೆಂಬ ರೀತಿಯಲ್ಲಿ ಎಚ್ಚರಿಕೆಯ ಮಾತುಗಳನ್ನು ಹೇಳಿದ್ದಾರೆ.

ನಾನು ಅದನ್ನು ಪುನಃ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇವೊತ್ತು ಇಲ್ಲಿ ಯಾರ ಹೆಸರನ್ನೂ ಕೂಡ ಪ್ರಸ್ತಾಪ ಮಾಡಬಾರದೆಂಬ ಆದೇಶವನ್ನು ತಾವುಗಳು ಕೊಟ್ಟಿದ್ದೀರಿ. ಅದನ್ನು ನಾವು ಪಾಲಿಸುತ್ತೇವೆ. ಪತ್ರಿಕೆಗಳಲ್ಲಿ ಮೊನ್ನೆ ಪ್ರಧಾನಿಯವರು ಬೆಂಗಳೂರಿಗೆ ಬಂದಂಥ ಸಂದರ್ಭದಲ್ಲಿ ಏನು ಪ್ರಸ್ತಾಪ ಮಾಡಿದ್ದರು ? ಬಚಾವತ್ ತೀರ್ಪಿಗೆ ಅನುಗುಣವಾಗಿಯೇ ಎಲ್ಲಾ ರಾಜ್ಯ ಸರಕಾರಗಳೂ ನಡೆದುಕೊಳ್ಳಬೇಕು ಅದು ಅಂತಿಮವಾದಂಥ ತೀರ್ಪು ಎಂದು ಹೇಳಿರತಕ್ಕಂಥಾದ್ದು ಒಂದುಕಡೆಯಾದರೆ ಆಂಧ್ರಪ್ರದೇಶದ ವಿಧಾನಸಭೆಯಲ್ಲಿ ಚಂದ್ರಬಾಬು ನಾಯ್ಡುರವರು ಏನು ಹೇಳುತ್ತಾರೆ ? ಈ ಸಮಿತಿಗೆ ಶಾಸನಬದ್ಧ ಅಧಿಕಾರವಿದೆಯೇ ಎಂದು ಕೇಳಿದ್ದಕ್ಕೆ ಉತ್ತರಿಸಿ ಸಮಿತಿಯನ್ನು ಪ್ರಧಾನಿಯವರೇ ರಚಿಸಿದ್ದಾರೆ ಮತ್ತು ಸಮಿತಿಯು ರಾಷ್ಟ್ರೀಯ ಅಭಿಪ್ರಾಯವನ್ನು ತಂದಿರುತ್ತದೆ ಎನ್ನತಕ್ಕಂಥಾದ್ದನ್ನು ಹೇಳಿದ್ದಾರೆ.

ಹಾಗಾದರೆ ಇಂಥ ಒಂದು ಸಂದಿಗ್ಧಕ್ಕೆ ಯಾರು ಕಾರಣರು ಎಂಬುದನ್ನು ತಾವು ಉತ್ತರ ಕೊಡುವಾಗ ಹೇಳಬೇಕಾಗುತ್ತದೆ. ಇವೊತ್ತು ರಾಜಕೀಯದಲ್ಲಿ ಹಿತಾಸಕ್ತಿಯನ್ನು ಕಾಪಾಡುವಂಥ ವಿಚಾರದಲ್ಲಿ ನೋಡಬೇಕು. ಅವರು ಒಂದು ಕಡೆ, ನಾವು ಕೋರ್ಟನಲ್ಲಿ ಹೋಗಿ ಹೋರಾಟ ಮಾಡುತ್ತೇವೆಂದು ಹೇಳುತ್ತಾರೆ. ಅದೇ ರೀತಿಯಲ್ಲಿ ರಾಜಕೀಯವಾಗಿಯೂ ನಾವು ಹೋರಾಟ ಮಾಡುತ್ತೇವೆಂದು ಹೇಳಬೇಕಾಗಿದ್ದರೆ ಇವೊತ್ತು ಆಂಧ್ರಪ್ರದೇಶದವರಿಂದ ಕೇಂದ್ರ ಸರಕಾರವು ನಿಂತಿರತಕ್ಕಂಥ ವಿಚಾರವು ಬರುತ್ತದೆ. ರಾಜಕೀಯ ಹೋರಾಟವನ್ನು ಮಾಡುತ್ತೇವೆಂದು ಹೇಳಿದುದರ ಅರ್ಥವಾದರೂ ಏನು? ಬಚಾವತ್ ತೀರ್ಪು ಇವೊತ್ತು ಗೆಜೆಟ್ ಆದಮೇಲೆ ಅದು ಎಲ್ಲರ ಮೇಲೂ ಕೂಡ ಎನ್‌ಫೋರ್ಸಿಬಲ್ ಎಂದು ಗೊತ್ತಿದ್ದಂಥ ಸಂದರ್ಭದಲ್ಲಿ ರಾಜಕೀಯವಾಗಿ ಅದನ್ನು ತೆಗೆದುಕೊಂಡು ಈ ರಾಜ್ಯಕ್ಕೆ ಸಂಬಂಧವಿಲ್ಲದ ನಾಲ್ಕು ಜನ ಮುಖ್ಯಮಂತ್ರಿಗಳನ್ನು ತೆಗೆದುಕೊಂಡು, ಅವರ ಒಂದು ತಜ್ಞಸಮಿತಿಯನ್ನು ಸೇರಿಸಿ, ಅವರುಗಳು ತಮ್ಮನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳದ ರೀತಿಯಲ್ಲಿ, ನೀವು ಅವರಿಗೆ ಎಲ್ಲಾ ಮಾಹಿತಿಗಳನ್ನು ಕೊಟ್ಟು ಆದಮೇಲೆ ಅವರು ಕೊಟ್ಟಂಥ ತೀರ್ಪು ನಿಮಗೆ ಏನಾದರೂ ಪರವಾಗಿ ಬಂತೇ? ತೀರ್ಪು ನಿಮ್ಮ ಪರವಾಗಿ ಬರಲಿಲ್ಲ.

ನಮ್ಮಲ್ಲಿರತಕ್ಕಂಥ ಎಲ್ಲಾ ಮಾಹಿತಿಗಳನ್ನು ಅವರು ತರಿಸಿಕೊಂಡರು, ಅವರು ಕೊಟ್ಟ ತೀರ್ಪನ್ನು ನಾವು ಈಗ ವಿರೋಧ ಮಾಡುತ್ತೇವೆಂದು ಹೇಳುವುದಾದರೆ ಹೇಗೆ? ಈಗಾಗಲೇ ಮಾನ್ಯ ನೀರಾವರಿ ಸಚಿವರೂ ಕೂಡ ಹೇಳಿದರು. ಇನ್ನು ಮುಂದೆ ಜ್ಯೋತಿಬಸುರವರು ಕರೆದರೆ ನಾವು ಹೋಗುವುದಿಲ್ಲ, ಬಹಿಷ್ಕಾರ ಮಾಡುತ್ತೇವೆ, ಅವರ ಮಾತಿಗೆ ನಾವು ಕಿವಿಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಹಾಗಾದರೆ ಇವೊತ್ತು ನಿಮಗೆ ಜ್ಞಾನೋದಯವಾಯಿತೆ? ಈ ಕೆಲಸವನ್ನು ವಿರೋಧ ಪಕ್ಷದವರು ಮಾಡಿಕೊಂಡು ಬರಲಿಲ್ಲವೇ? ನಾಲ್ಕುಜನ ಮುಖ್ಯಮಂತ್ರಿಗಳ ಸಭೆಯನ್ನು ಪ್ರಾರಂಭಗೊಂಡು ತಜ್ಞರ ಸಮಿತಿಯ ನೇಮಕವನ್ನು ಪ್ರಾರಂಭಗೊಂಡು, ತಜ್ಞರ ಸಮಿತಿಯು ಬೆಂಗಳೂರಿಗೆ ಬಂದಂಥ ಸಂದರ್ಭದಲ್ಲಿ, ಆಲಮಟ್ಟಿಗೆ ಹೋದಂಥ ಸಂದರ್ಭದಲ್ಲಿ ಎಲ್ಲಾ ವಿರೋಧ ಪಕ್ಷಗಳು ಸೇರಿ ಸರಕಾರದ ಗಮನಕ್ಕೆ ತರುವಂಥ ಪ್ರಯತ್ನವನ್ನು ಮಾಡಿದಾಗಲೂ ಕೂಡ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ವಿರೋಧ ಪಕ್ಷಗಳು ಕೊಟ್ಟಂಥ ಸಲಹೆಗಳನ್ನೂ ಕೂಡ ಗಣನೆ ಮಾಡದಂಥ ಸಂದರ್ಭದಲ್ಲಿ ನೀವು ನಡೆದುಕೊಂಡಂಥ ರೀತಿಯನ್ನು ನೋಡಿದಾಗ ನಿಜವಾಗಿಯೂ ಕೂಡ ನಿಮ್ಮ ವರ್ತನೆಯಿಂದಾಗಿ ರಾಜ್ಯದ ಹಿತಕ್ಕೆ ಧಕ್ಕೆಯಾಗಿದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಇದಕ್ಕೆ ಪೂರಕವಾಗಿ ಇವೊತ್ತಿನ ನಿರ್ಣಯದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದರಲ್ಲಿ ಪ್ರಾಮುಖ್ಯವಾಗಿರತಕ್ಕಂಥಾದ್ದು ಅಂದರೆ ಆಂಧ್ರಪ್ರದೇಶದವರು ಈಗಾಗಲೇ ಹೋರಾಟವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಸ್ಕೀಮ್ (ಬಿ)ಯಲ್ಲಿ ಅವರಿಗೆ ಬರಬೇಕಾಗಿರತಕ್ಕಂಥ ನೀರಿಗಿಂತ ಹೆಚ್ಚು ನೀರನ್ನು ಅವರು ಬಳಕೆ ಮಾಡಿಕೊಳ್ಳಲು ಏನು ಪ್ರಯತ್ನ ಮಾಡುತ್ತಿದ್ದಾರೆ ಆ ಎಲ್ಲಾ ಯೋಜನೆಗಳಿಗೆ ತಡೆ ಹಾಕಬೇಕೆಂಬ ವಿಚಾರದಲ್ಲಿ ಸರಕಾರಕ್ಕೆ ಮನವಿ ಮಾಡಿಕೊಳ್ಳಲೇಬೇಕು.

ಸ್ಕೀಮ್ (ಬಿ) ಪ್ರಕಾರ ಅದರ ನಿಯಮಗಳನ್ನು ಜಾರಿಗೊಳಿಸಬೇಕು. ಅದನ್ನು ಜಾರಿಗೊಳಿಸ ಬೇಕಾದಲ್ಲಿ ಇವೊತ್ತು ಬಚಾವತ್ ತೀರ್ಪಿನಲ್ಲಿ ಇರಬೇಕಾದ ರೀತಿಯಲ್ಲಿ by an Act of Parliament ಇರಬಹುದು, ಅಥಾರಿಟಿ ಕ್ರಿಯೇಟ ಮಾಡುವ ಮುಖೇನ ಜಾರಿಗೊಳಿಸಬೇಕಾದುದು ಬಹಳ ಅವಶ್ಯ ಎನ್ನುವ ದೃಷ್ಟಿಯಲ್ಲಿ ನಿರ್ಣಯವನ್ನು ತಂದಿದ್ದೇವೆ. ನಿರ್ಣಯದ ಹೊರಗೆ ಬರತಕ್ಕಂಥ ಅನೇಕ ವಿಷಯಗಳು ಕೂಡ ಇವೊತ್ತು ಪ್ರಸ್ತಾಪವಾಗಿದೆ. ಆಂಧ್ರಪ್ರದೇಶದಲ್ಲಿ ನಡೆಯತಕ್ಕಂಥ ಕಾಮಗಾರಿಗಳು ಏನಿವೆ, ಅವುಗಳು ಬಚಾವತ್ ತೀರ್ಪಿಗೆ ವಿರುದ್ಧವಾಗಿ ನಡೆಯುತ್ತಿರತಕ್ಕಂಥ ಯಾವುದೇ ಯೋಜನೆಗಳು ಇರಬಹುದು ಅವುಗಳನ್ನು ನೋಡಿ ಪರೀಕ್ಷಿಸತಕ್ಕಂಥ ಅವಕಾಶ ಬಚಾವತ್ ತೀರ್ಪಿಗೆ ಇದ್ದರೂ ಕೂಡ ನೀವು ಯಾವ ಸಮಿತಿಯನ್ನೂ ಕೂಡ ಕಳುಹಿಸಿಲ್ಲ. ಆ ಬಗ್ಗೆ ನೀವು ಯಾವುದೇ ಆಕ್ಷೇಪಣೆ ಎತ್ತಿಲ್ಲ. ಇವೊತ್ತು ಬಚಾವತ್ ತೀರ್ಪಿನಲ್ಲಿ ಅದನ್ನು ತೋರಿಸಿದ್ದಾರೆ. ನಾನು ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾನು ಅದನ್ನು ನೋಡಿಯೇ ಹೇಳುತ್ತಿದ್ದೇನೆ.

``Each State shall send records annually to other States summary abstract of the said records. The records shall be open to inspection for other States through their accredited representatives at all reasonable times and at all reasonable place or places."

What does it mean?

``Records of guaging mentioned in the Annexure-B to this order shall be open to the inspection of all the States through their accredited representatives at all reasonable times and at all reasonable places."

What does it mean? ಇಂಥ ಸಂದರ್ಭ ಇದ್ದಾಗ, ನೀವು ಅವರು ಮಾಡುವ ಕಾಮಗಾರಿಯ ಕೆಲಸವನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬಹುದಾಗಿತ್ತು.

1.00 ಪಿ.ಎಂ

ಅದು ಆಗಿಲ್ಲವೆಂದರೆ ಕೂಡ ಇವತ್ತೂ ನೀವು ಕಳುಹಿಸಬಹುದು ತೊಂದರೆ ಏನೂ ಇಲ್ಲ. ಇವತ್ತೂ ನೀವು ನಮ್ಮ ರಾಜ್ಯದ ಪ್ರತಿನಿಧಿಗಳನ್ನು ಕಳುಹಿಸಿ ಅವರು ಮಾಡುತ್ತಿರತಕ್ಕಂತಹ ಯೋಜನೆಗಳನ್ನು ತಡೆಗಟ್ಟುವ ಕೆಲಸವನ್ನು ನೀವೇಕೆ ಮಾಡಲಿಲ್ಲವೆಂದು ಕೇಳುತ್ತಿದ್ದೇನೆ. ಅದೇ ರೀತಿಯಾಗಿ ಅವರ ಯೋಜನೆಗಳು ಜುರಾಲಾ ಆಗಿರಬಹುದು ಶ್ರೀ ಶೈಲಂ ಯೋಜನೆ ಇರಬಹುದು ಈ ಎಲ್ಲಾ ಯೋಜನೆಗಳಿಂದ ಸಂಪೂರ್ಣವಾಗಿ ಅವರ ಹಕ್ಕನ್ನು ಮೀರಿ ಬಳಸಿಕೊಳ್ಳುತ್ತಾರೆ ಅದನ್ನು ತಡೆಗಟ್ಟುವ ರೀತಿಯಲ್ಲಿ ಕೆಲಸ ಮಾಡಬೇಕು. ಮತ್ತೊಂದು ಪ್ರಾಮುಖ್ಯವಾದ ಮಾತನ್ನು ಹೇಳುತ್ತೇನೆ. ಬಚಾವತ್ ತೀರ್ಪು ಎಲ್ಲರಿಗೂ ಗೊತ್ತಿದೆ. ಒಂದುಸಲ ಗೆಜೆಟ್ಟಿನಲ್ಲಿ ತೀರ್ಮಾನವಾದಂತಹ ಸಂದರ್ಭದಲ್ಲಿ ನೀರಿನ

ಬಳಕೆ ಮಾಡುವುದರ ಬಗ್ಗೆ ರಾಜ್ಯದ ಚಿಂತನೆ ಹರಿಸಬೇಕಾಗುತ್ತದೆ. ನಮ್ಮ ಸ್ಕೀಮ್ 'ಎ' ನಲ್ಲಿ 734 ಟಿ.ಎಂ.ಸಿ.ನೀರು ಏನು ಬರುತ್ತವೆ ಅದರ ಬಳಕೆಯನ್ನು ನಾವು ಇನ್ನೂ ಸಂಪೂರ್ಣಗೊಳಿಸಲಿಕ್ಕಾಗಿಲ್ಲ. ಯಾವುದೇ ಸರಕಾರವಿರಲಿ ಇದರ ಬಗ್ಗೆ ಇನ್ನೂ ಪ್ರಯತ್ನ ಮಾಡುತ್ತಿದ್ದೇರೆ. ನಮ್ಮ ಸ್ಕೀಮ್ (ಬಿ)ನಲ್ಲಿ ಒತ್ತಾಯ ಇನ್ನೊಂದು ಕಡೆ ಮಾಡುತ್ತಿದ್ದೇವೆ. ಅದು ಜಾರಿಯಾಗಬೇಕು. ನಾಳೆ ಒಂದು ಪಕ್ಷ ಜಾರಿಯಾಗುವ ಸಂದರ್ಭ ಬಂದರೆ ಯಾವ ರೀತಿ ಯೋಜನೆಯನ್ನು ಮಾಡಿದ್ದೀರಿ ಆ ಯೋಜನೆಗಳನ್ನು ಜಾರಿಗೊಳಿಸಬೇಕಾಗುತ್ತದೆ. ಇವತ್ತು ನಮಗೆ ಬರಬೇಕಾದ ನಮ್ಮ ಸಂಪೂರ್ಣ ಪಾಲಿನ ನೀರನ್ನು ಉಪಯೋಗಿಸಬೇಕಾದರೆ ಯಾವ ರೀತಿ ಯೋಜನೆಗಳನ್ನು ಮಾಡಿದ್ದೀರಿ ಎಂದು ಕೇಳಬೇಕಾಗುತ್ತದೆ. ಆಲಮಟ್ಟಿ ವಿಚಾರಕ್ಕೆ ಹೊರತಾದಂತ ವಿಷಯವನ್ನು ಮುಖ್ಯವಾಗಿ ಹೇಳಬಯಸುತ್ತೇನೆ. ಸ್ಕೀಮ್ (ಬಿ)ನಲ್ಲಿ ಬರತಕ್ಕಂತಹ 161 ಟಿ.ಎಂ.ಸಿ. ನೀರು ಇರಬಹುದು ಇಲ್ಲವೇ ಸ್ಕೀಮ್(ಎ)ನಲ್ಲಿ ಬಳಸದೇ ಇರುವ ಇನ್ನೊಂದು ನೀರು ಇರಬಹುದು. ತುಂಗಭದ್ರಾ ಡ್ಯಾಮಿನ ಅಡಿಯಲ್ಲಿ ಸಿಲ್ಟಿನಿಂದಾಗಿ ಇವತ್ತು 23 ಟಿ.ಎಂ.ಸಿ ನೀರನ್ನು ಉಪಯೋಗಿಸುವುದಕ್ಕಾಗುವುದಿಲ್ಲ.

ದೇಶದಲ್ಲಿ ವಿದೇಶದಲ್ಲಿ ಭಾರತ ಮಟ್ಟದಲ್ಲಿ ಬರತಕ್ಕಂತಹ ತಜ್ಞರ ಸಮಿತಿ ಕೂಡ ಇಲ್ಲಿ ಸಿಲ್ಟ್ ಆಫ್ ಆಗಿರಬಹುದು ನಿಜ 23 ಟಿಎಂಸಿ ನೀರನ್ನು ಬಳಕೆ ಮಾಡುವುದಕ್ಕೆ ಸಾಧ್ಯವಾಗಿಲ್ಲವೆಂಬ ಅಭಿಪ್ರಾಯ ಕೊಟ್ಟಾಗ ಯಾವ ರೀತಿ ಯೋಚನೆ ಮಾಡುತ್ತೀರಿ ಎಂದು ಕೇಳುತ್ತೇನೆ. ಬಚಾವತ್ ತೀರ್ಪಿನಲ್ಲಿ ಇವತ್ತು ಡ್ರಾಟ್ ಫ್ರೋನ್ ಏರಿಯಾಗೋಸ್ಕರವೇ ಈ ನೀರನ್ನು ಮೀಸಲಿಡುವಂತಹ ತೀರ್ಮಾನವಿರಬೇಕಾದರೆ ಸ್ಕೀಮ್(ಎ)ನಲ್ಲಿ ಸ್ಕೀಮ್ (ಬಿ)ಬರಬೇಕಾಗಿರುವ ಅನೇಕ ಯೋಜನೆಗಳನ್ನು ನೀವು ಕೈಗೆತ್ತಿಕೊಳ್ಳಲು ನೀವು ಪ್ರಯತ್ನ ಮಾಡಲಿಲ್ಲ. ಭದ್ರಾ ಮೇಲ್ದಂಡೆ ಯೋಜನೆ ಇರಬಹುದು ಈ ಭದ್ರಾ ಮೇಲ್ದಂಡೆ ಯೋಜನೆಗೆ ಈಗಾಗಲೇ ತೀರ್ಪು ಬಂದು 20 ವರ್ಷಗಳಾದರೂ ಕೂಡ ಈ ಯೋಜನೆಯನ್ನು ಜಾರಿಗೊಳಿಸಲು ಯಾವುದೇ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಯಾವುದೇ ರೀತಿಯ ಕಾರ್ಯಕ್ರಮ ರಾಜ್ಯ ಮಟ್ಟದಲ್ಲಿ ಆಗಿಲ್ಲ. ಈಗಾಗಲೇ ತುಮಕೂರು ಮತ್ತು ಚಿತ್ರದುರ್ಗ ಭಾಗಗಳು ಏನು ಇದೆ ಅದಕ್ಕೆ ನಮಗೆ ಬರತಕ್ಕಂತಹ ನೀರಿನ ಪ್ರಮಾಣ ಏನು ಇದೆ ಅದಕ್ಕಾಗಿ ಈ ಯೋಜನೆ ಮಾಡಬೇಕಾಗುತ್ತದೆ. ಕೇಂದ್ರ ಸರಕಾರಕ್ಕೆ ನೀವು ಮುಂದೆ ಹೋದಂತಹ ಸಂದರ್ಭದಲ್ಲಿ ನಿಮಗೆ ಎಲ್ಲಿ ಹಕ್ಕು ಇದೆ ಎಂದು, ಸ್ಕೀಮ್(ಎ) ನೀರನ್ನು ಬಳಕೆ ಮಾಡಿಲ್ಲವೆಂದಾಗ ಸ್ಕೀಮ್ (ಬಿ)ಗೆ ಎಲ್ಲಿ ವಾದವನ್ನು ಸಮರ್ಥವಾಗಿ ಮಂಡನೆ ಮಾಡುವುದಕ್ಕೆ ನಿಮಗೆ ಅವಕಾಶ ಎಲ್ಲಿ ಇದೆ ಎಂದು ಹೇಳಿದಂತಹ ಸಂದರ್ಭದಲ್ಲಿ ಕಷ್ಟವಾಗುತ್ತದೆ. ಬಚಾವತ್ ತೀರ್ಪಿನ ಅಡಿಯಲ್ಲಿ ಇರತಕ್ಕಂತಹ ಭದ್ರಾ ಮೇಲ್ದಂಡೆ ಯೋಜನೆಯನ್ನು...

ಅಧ್ಯಕ್ಷರು : ನೀವು ಟೀಮ್ ಹೋಗುವುದಕ್ಕೆ ಅವಕಾಶ ಇದೆ ಎಂದು ಮೆನ್‌ಷನ್ ಮಾಡಿದಿರೋ?

ಶ್ರೀ ಟಿ.ಬಿ. ಜಯಚಂದ್ರ : ಹೋಗುವುದಕ್ಕೆ ಅವಕಾಶ ಇದೆ.

MR. SPEAKER : It is very clear.

"Each State shall send annually to other States a summary abstract of the said records. The said records shall be open to inspection by other States through their accredited representatives at all reasonable times and at all reasonable place or places."

All this is with reference to the abstract of records, that is sent from State to the other States. There is no provision for sending a team.

ಶ್ರೀ ಟಿ.ಬಿ. ಜಯಚಂದ್ರ : ತಾವು ಹೇಳಿದ್ದನ್ನೂ ನಾನು ಒಪ್ಪುತ್ತೇನೆ. ಈ ಪ್ರಯತ್ನವೇನಾದರೂ ಆಗಿದೆಯೇ? ಆ ಸಂದರ್ಭದಲ್ಲಿಯಾದರೂ ಕೂಡ ಅವರೇನು ಮರೆ ಮಾಡುತ್ತಿದ್ದಾರೆಂದು ಗಮನಕ್ಕೆ ಬರುತ್ತಿತ್ತು. ತಾವು ಕೊಡತಕ್ಕಂತಹ ತೀರ್ಪಿಗೆ ನಾನು ಒಪ್ಪುತ್ತೇನೆ.

ಅಧ್ಯಕ್ಷರು : ನಾನು ತೀರ್ಪು ಕೊಡುತ್ತಿಲ್ಲ. I am only referring to the document that you have placed.

ಶ್ರೀ ಟಿ.ಬಿ. ಜಯಚಂದ್ರ : ಆ ಪ್ರಯತ್ನವನ್ನಾದರೂ ಮುಖ್ಯವಾಗಿ ಮಾಡಬೇಕಾಗಿತ್ತು. ಅದನ್ನಾದರೂ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದೇವೆಂದು ಹೇಳಿದರೆ ನಾನು ಒಪ್ಪುತ್ತೇನೆ. ಭದ್ರಾ ಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸುವ ಸಂದರ್ಭ ಇದೆ ಅದಕ್ಕೆ ನೀರನ್ನು ಮೀಸಲಿಡುವುದು ಏನು ಇದೆ ಮತ್ತು ಹೆಚ್ಚುವರಿ ದೊರೆಯತಕ್ಕಂತಹ ನೀರನ್ನು ಮೀಸಲಿಡುವ ತೀರ್ಮಾನ ಮಾಡದೇ ಈ ಸ್ಕೀಮ್ 'ಬಿ' ಯನ್ನು ಒತ್ತಾಯ ಮಾಡುವುದಕ್ಕೆ ನಿಮಗೆ ಯಾವುದೇ ರೀತಿಯ ಅಧಿಕಾರ ಇಲ್ಲವೆಂಬ ಅಭಿಪ್ರಾಯ ಕೇಂದ್ರ ಸರಕಾರಕ್ಕೆ ಬರುತ್ತದೆ. ಈಗಾಗಲೇ ಸಮಯವಾಗಿದೆ.

1.00 ಪಿ.ಎಂ

ಮಾನ್ಯ ಮುಖ್ಯಮಂತ್ರಿಯವರ ತವಕವೇನೆಂಬುದು ಅರ್ಥವಾಗಿದೆ. ನಮ್ಮ ಆಕ್ಷೇಪಣೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಬಹಳ ಉತ್ಸುಕರಾಗಿರುವ ಸಂದರ್ಭದಲ್ಲಿ ನಾನು ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ. ಭದ್ರಾ ಮೇಲ್ದಂಡೆ ಯೋಜನೆ ಜಾರಿಗೊಳಿಸಬೇಕಾದರೆ ಸಂಪೂರ್ಣವಾಗಿ ವಾಟರ್ ಅಲೊಕೇಷನ್ ಅನ್ನು ಸ್ಕೀಮ್ (ಬಿ)ನಲ್ಲಿ ಬರತಕ್ಕಂಥಾದ್ದು ಮತ್ತು ಸ್ಕೀಮ್(ಎ)ನಲ್ಲಿ ಉಳಿಯತಕ್ಕಂತಹ ನೀರನ್ನು ಸಂಪೂರ್ಣವಾಗಿ ಮೀಸಲಿಡುವ ಕೆಲಸ ಮಾಡುತ್ತೇವೆಂದು ಹೇಳಿದರೆ ನಮಗೆ ತೃಪ್ತಿಯಾಗುತ್ತದೆ. ನಮ್ಮ ಎಲ್ಲ ಎಚ್ಚರಿಕೆಯ ಮಾತನ್ನು ಸರಕಾರ ಗಮನದಲ್ಲಿಡಬೇಕು. ವಿರೋಧ ಪಕ್ಷದವರು ಹಂತಹಂತವಾಗಿ ಮಾಡಿಕೊಂಡು ಬಂದಂತಹ ಪ್ರತಿಭಟನೆಗೆ ನಿಜವಾಗಲು ಜಯ ಸಿಕ್ಕಿದೆ ಎಂದರ ತಪ್ಪಾಗಲಾರದು. ಆಡಳಿತ ಪಕ್ಷದವರು ಮಾಡಿರತಕ್ಕಂತಹ ಜನರ ಹಿತಕ್ಕೆ ಧಕ್ಕೆ ಬರತಕ್ಕಂತಹ ಕೆಲಸವನ್ನು ಖಂಡಿಸಿ ನಮ್ಮ ನಾಯಕರು ಒತ್ತಾಯ ಪಡಿಸಿರುವ ರೀತಿಯಲ್ಲಿ ನೀವು ರಾಜೀನಾಮೆ ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಬಸವರಾಜ್ ರವರೇ, ತಾವು ಮಾತನಾಡಬೇಕೇ ? ತಮ್ಮ ಎಲ್ಲಾ ನಾಯಕರು ಮಾತನಾಡಿದ್ದಾರೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ವೈ. ರಾಮಕೃಷ್ಣ : ಅವರು ಆರಸ್ಪ್ ಆಗಿದ್ದವರು. ಅವರಿಗೆ ಎರಡು ನಿಮಿಷ ಕೊಡಿ.

ಶ್ರೀ ಹೆಚ್.ಡಿ.ಬಸವರಾಜ್ : ನಾನು ಮಾತನಾಡುವುದಕ್ಕಿಂತ ಮುಂಚೆ ಆ ಭಾಗದ ಹಿರಿಯ ಸದಸ್ಯರಾದ ಶ್ರೀಮಾನ್ ವೈಜನಾಥ್ ಪಾಟೀಲ್‌ರವರು ಆ ಭಾಗದ ಸಮಸ್ಯೆಯನ್ನು ಚೆನ್ನಾಗಿ ಅರಿತಿದ್ದಾರೆ. ಅವರು ನಾನು ಮಾತನಾಡುವ ಮೊದಲು ಮಾತನಾಡಿದರೆ ಒಳ್ಳೆಯದು. ಅವರು ಮಾತನಾಡಿದ ನಂತರ ನಾನು ಮಾತನಾಡುತ್ತೇನೆ.

+ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಕ್ಲಾರಿಫಿಕೇಷನ್ ಅನ್ನು ಮತ್ತೆ ಬೇಕಾದರೆ ಕೇಳಲಿ. ವಿರೋಧಪಕ್ಷದ ನಾಯಕರು ನಿನ್ನೆ ನಾವು ಸದನ ಒಪ್ಪಿಕೊಂಡಿದ್ದಂತಹ ಸರ್ವಾನುಮತದ ನಿರ್ಣಯದ ಹಿನ್ನೆಲೆಯಲ್ಲಿ ಉದ್ಭವಿಸಬಹುದಾದಂತಹ ಕಾರಣಗಳ ಬಗ್ಗೆ ಮಾತನಾಡಿದರು. ನಿರ್ಣಯವನ್ನು ಸರ್ವಾನುಮತದಿಂದ ಒಪ್ಪಿಕೊಂಡಿದ್ದೇವೆಂದು ಎಲ್ಲರೂ ಇಡೀ ಸದನ ಒಪ್ಪಿಕೊಂಡಿದೆ. ಅದರ ಹಿಂದೆ ಏನು ಇರಬಹುದೆನ್ನುವುದನ್ನು ಇವರೇಕೆ ಇಷ್ಟು ಏನು ಅಂತಹ ಮಹಾ ಕೆಲಸವಾಗಿದೆ. ಆಲಮಟ್ಟಿ ಕೆಲಸವೇನಾದರೂ ನಿಂತಿದೆಯೇ ಅಥವಾ ಅವರದ್ದೇ ಶ್ರೀ ಶೈಲಂ ಎಡದಂಡೆ ಬಲದಂಡೆಯಲ್ಲಿ ಏನು ಅವರು ಕಾನೂನು ರಹಿತವಾಗಿ ನೀರು ತೆಗೆದುಕೊಳ್ಳುತ್ತಿದ್ದಾರೆ ಅದನ್ನು ನಿಲ್ಲಿಸುವುದಕ್ಕಾಗಿ ಯಾವುದಾದರೂ ಅಥಾರಿಟಿ ಮಾಡಿದ್ದೇವೆಯೇ? ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಹೇಳುತ್ತಾರೆ ಎಲ್ಲಿ? ಮಾನ್ಯ ನಂಜೇಗೌಡರು ಹೇಳಿದ್ದನ್ನು ನಾನು ಕೇಳಿದ್ದೇನೆ. ಇವತ್ತು ಕರ್ನಾಟಕದ ನೀರಾವರಿಯ ಹಿತರಕ್ಷಣೆ ಅದರ ಬಗ್ಗೆ ಚಿಂತನೆ ಶುರುವಾಗಿರುವುದು ಈ ನಮ್ಮ ಪ್ರಧಾನಿ ಬಂದ ಮೇಲೆ. ತಾವೇ ಹೇಳಿದ ಹಾಗೆ ತಾವು ಲೋಕಸಭಾ ಸದಸ್ಯರಾಗಿ ಈ ರಾಜ್ಯದ ಪ್ರತಿನಿಧಿಯಾಗಿ ಹಿಂದೆ ಇದ್ದ ಎಲ್ಲಾ ಪ್ರಧಾನ ಮಂತ್ರಿಗಳಿಗೂ ಎಷ್ಟು ಅರ್ಜಿ ಕೊಟ್ಟಿದ್ದೆವು ಎಷ್ಟು ಮೆಮೊರ್‍ಯಾಂಡಮ್ ಕೊಟ್ಟಿದ್ದೇವೆ ಎಷ್ಟು ಸಲ ಮುಖ್ಯಕ್ಕೆ ಹೋಗಿ ಹೇಳಿದ್ದೆವು ಏನು ಆಗಲಿಲ್ಲ ಎಂದು ಎಲ್ಲಿ ಹೋಗಿತ್ತು ಆಗ ಪೌರುಷ ಎಲ್ಲಿತ್ತು ಪೌರುಷ? ಆಗಿದ್ದ ಮುಖ್ಯಮಂತ್ರಿಗಳೇನು ಮಾಡುತ್ತಿದ್ದರು ? ಹೇಳುವುದಕ್ಕೂ ಒಂದು ರೀತಿ ನೀತಿ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ನಾನು ಕೇಳುವುದು ಅನ್ ಅಫಿಷಿಯಲ್ ಸಮಿತಿ ಬಗ್ಗೆ ನೀವು ಮಾಡಿದಂತಹ ಕಮಿಟ್‌ಮೆಂಟ್ ಕೇಳುತ್ತಿದ್ದೇವೆ ಎಲ್ಲಿ ಹೋಗಿದ್ದರು ಹಿಂದೆ ಏನು ಮಾಡುತ್ತಿದ್ದರು ಎಂದು ಅಲ್ಲ. ಅವರೇನು ಮಾನ್ಯತೆ ಕೊಟ್ಟಿದ್ದರಾ? ಪ್ಲಾನಿಂಗ್ ಕಮಿಷನ್‌ನವರು ನಿಲ್ಲಿಸಿದರಾ ? ವಿಶ್ವ ಬ್ಯಾಂಕ್ ಲೋನ್ ನಿಲ್ಲಿಸಿದ್ದಿರಾ ? ಅಪ್ರೂವಲ್ ನಿಲ್ಲಿಸಿದ್ದಿರಾ ?

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಇವರು ಮಾತನಾಡುವಾಗ ನಾನು ಎಲ್ಲವನ್ನೂ ಕೇಳಿದ್ದೇನೆ. ಪಾರ್ಲಿಮೆಂಟರಿ ಪ್ರೊಸೀಜರ್ ಅಡಾಪ್ಟ್ ಮಾಡಿಕೊಂಡಿದ್ದೇವೆ. ಮಾನ್ಯ ನಂಜೇಗೌಡರವರು ಹೇಳಿದ್ದುದು ಏನು ? ನೀವು ಎಡವಿದ್ದೀರಿ ಎಂದು ಹೇಳಿದರು. ಹಿಂದೆ ನಡೆದ ಘಟನೆಗಳು,ಹಿಂದೆ ನಮ್ಮ ರಾಜ್ಯಕ್ಕೆ ಆಗಿರುವ ಅನ್ಯಾಯದ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ.

ಆಂಧ್ರದವರು ಮತ್ತು ತಮಿಳುನಾಡಿನವರು ಪರಸ್ಪರ ಹೊಂದಾಣಿಕೆ ಮಾಡಿಕೊಂಡು ನೀರನ್ನು ಅವರು ಬಳಸಿದರು. ನಾವು ಮಾತು ಬಳಸಿದೆವು. ಬರೀ ಇದೇ ನಮ್ಮ ಚಟ. ಅದಕ್ಕೆ ಈಗ ಏನು, ಕಮಿಟಿ; ಗುಡ್‌ವಿಲ್ ಕಮಿಟಿ. ಗುಡ್‌ವಿಲ್ ಕಮಿಟಿಯಿಂದ ಕಾನೂನು ಸುಪ್ರೀಂ ಕೋರ್ಟಿಗೆ ಹೋಗುತ್ತದೆಂದರೆ, ನಾನು ಒಂದು ಚೂರು ಕಾನೂನು ಓದಿದ್ದೇನೆ. ಸುಪ್ರೀಂ ಕೋರ್ಟಿಗೆ ಎವಿಡೆನ್ಸ್‌ನ್ನು, ಅದರ ವ್ಯಾಲ್ಯೂ ಏನು, ಅದರ ಜಡ್ಜಸ್ ಮೇಲೆ ಏನು ಪ್ರಭಾವವಾಗಬಹುದು ಎನ್ನುವುದಕ್ಕೆ ಜ್ಯೋತಿಬಸು ಅವರಿಗೆ, ಆ ಪತ್ರ ಬಂದತಕ್ಷಣ, ಈ ನಿಮ್ಮ ವರದಿಗೆ ಏನೂ ಬೆಲೆ ಇಲ್ಲ ಇದು unacceptable and on the basis of this report, I am not prepared to participate in any discussion hereafter, ಎಂದು ಹೇಳಿದ್ದೇನೆ. ಇದಕ್ಕಿಂತ ನಾನು ಹೇಳುವುದು ಇನ್ನೇನು ಬೇಕು. ಜ್ಯೋತಿಬಸು ಅವರ ಹಿರಿತನಕ್ಕೆ, ಅವರ ಅನುಭವಕ್ಕೆ ಕರುಣಾನಿಧಿ ಅವರ ಹಿರಿತನಕ್ಕೆ, ಅವರ ಅನುಭವಕ್ಕೆ ನಾವು ಬೆಲೆಯನ್ನು ಕೊಟ್ಟಿದ್ದೇವೆ. ಕುರ್ಚಿ ಉಳಿಸಿಕೊಳ್ಳುವುದು ಏನಿಲ್ಲಿ ಈ ಕುರ್ಚಿಯನ್ನು ಯಾರೂ ಕೇಳಲಿಲ್ಲ, ತಾನಾಗಿಯೇ ಬಂತು. What a strange people they are? They are supporting DeveGowda's Government there. Let them withdraw, if they have the courage. We will go to the people.

SRI M. MALLIKARJUNA KHARGE : Mr. Speaker Sir, I differ, ನೀವು ಇಲ್ಲಿ ಹೇಳಿ. ನೀವು ಮಾಡಿದಂಥ ತಪ್ಪುಗಳಿಂದ ಹೀಗಾಗಿದೆ. ನೀವು ಏಕೆ ಹೇಳುತ್ತಿದ್ದೀರಿ. ಅದಕ್ಕೂ, ಇದಕ್ಕೂ ಏನು ಸಂಬಂಧ ಇದೆ? ನೀವು ಮಾಡಿದ ತಪ್ಪನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಈ ಮಾತನ್ನು ಹೇಳುತ್ತಾ ಇದ್ದೀರಿ. ನಿಮ್ಮ ಪೌರುಷ ನಮಗೆ ಬೇಕಾಗಿಲ್ಲ. ನಿಮ್ಮ ತಪ್ಪನ್ನು ಮುಚ್ಚುವುದಕ್ಕೋಸ್ಕರ, ಯುನೈಟೆಡ್ ಫ್ರೆಂಟ್‌ಗೆ ಸಪೋರ್ಟ್ ಮಾಡುತ್ತೇವೆಂದು ಹೇಳುತ್ತಿರಿ? ನಾನು ಈ ಮಾತನ್ನು ಖಂಡಿಸಬೇಕಾಗುತ್ತದೆ. Purposely, he wants to deviate discussion. What folly he has committed, to hide it, he is doing it. It is a mischievous statement.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂತಹ ಆರ್ಗ್ಯುಮೆಂಟ್ ಕೇಳುವುದಕ್ಕೆ ನಾವು ಇಲ್ಲಿ ಕುಳಿತಿಲ್ಲ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಇವರಿಗೆ ಕೇಳಿಸುವುದಕ್ಕೆ ನಾವೂ ಇಲ್ಲ. ಇವರು ಕೇಳಿದರೆಷ್ಟು, ಬಿಟ್ಟರೆಷ್ಟು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರೇನು ಅನ್ ಅಫಿಷಿಯಲ್ಲಾಗಿ ಮಾಡುತ್ತಿದ್ದಾರಲ್ಲಾ, ಈ ರೀತಿ ತಪ್ಪು ಮಾಡಿ, ಇವತ್ತೇನು ಅಪೋರ್ಚುನಿಟಿ ಕ್ರಿಯೇಟ್ ಮಾಡತಕ್ಕ ಪ್ರಯತ್ನ ಮಾಡಿದವರಲ್ಲಾ, ಅದಕ್ಕೆ ನಾಚಿಕೆ ಬರಬೇಕು. ನಮಗೆ ಹೇಳುತ್ತಾರೆ. ನಿಮಗೆ ಪಾಠ ಕಲಿಸೇ ಕಲಿಸೋಣ. ನಮ್ಮ ಕರೇಜು ಕೇಳುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೀವು ಹೇಳಿದ್ದನ್ನೆಲ್ಲವನ್ನೂ ನಾವು ಕುಳಿತು ಕೇಳಲಿಲ್ಲವೇ? ನೀವು ಅಯೋಗ್ಯ ಸರ್ಕಾರ ಎಂದು ಹೇಳಿದಿರಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜ್ಯಕ್ಕೆ ದ್ರೋಹ ಮಾಡಿದ್ದನ್ನು ನಾವು ಹೇಳಬೇಕಾಗುತ್ತದೆ. ಈ ರೀತಿಯಾದ ಮಾತು ಕೇಳುವುದಕ್ಕೆ ನಾವು ಬಂದಿಲ್ಲ. ಅವರು ಸ್ಪಷ್ಟವಾಗಿ ಹೇಳಲಿ. ಯಾವ ಕಾರಣಕ್ಕಾಗಿ ಮಾಡಿದ್ದೇವೆ ಎಂಬುದು ಸ್ಪಷ್ಟವಾಗಿ ಹೇಳಲಿ. ಇಲ್ಲದೇ ಹೋದರೆ, ನಾವು ಒಂದು ಕ್ಷಣವೂ ಕೂಡ ಅವರ ಮಾತು ಕೇಳುವುದಕ್ಕೆ ತಯಾರಿಲ್ಲ. ಅದನ್ನು ವಿರೋಧಿಸಿ, ಅವರ ರಾಜೀನಾಮೆ ಕೇಳಿ, ನಾವು ವಾಕ್ಔಟ್ ಮಾಡುತ್ತೇವೆ. We don't want to listen.

(ಕಾಂಗ್ರೆಸ್ (ಐ) ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು.)

ಶ್ರೀ ಜೆ.ಹೆಚ್ ಪಟೇಲ್ : ಅವರಿಗೆ ಏನಾದರೂ sense of respect ಇದ್ದರೆ.

MR. SPEAKER : You should thank them also. They are not withdrawing the support. They are only walking out.

ಶ್ರೀ ಡಿ.ವಿ. ಸದಾನಂದಗೌಡ : ಇಲ್ಲಿ ಕಾಂಗ್ರೆಸ್‌ನವರನ್ನು ನಮ್ಮ ಜೆ.ಹೆಚ್. ಪಟೇಲರು ವಾಕ್ಔಟ್ ಮಾಡಿಸಿದರು. ಅದರಂತೆ ಕೇಂದ್ರದಲ್ಲಿ ಅವರನ್ನು ವಾಕ ಔಟ ಮಾಡಿಸಿದರೆ ತುಂಬಾ ಚೆನ್ನಾಗಿತ್ತು.

ಶ್ರೀ ಜೆ.ಹೆಚ್. ಪಟೇಲ್ : ಅದಕ್ಕೆಲ್ಲಾ ನಾವು ತಯಾರಾಗಿಯೇ ಕುಳಿತಿದ್ದೇವೆ. ಯಾರೂ ಅದರ ಬಗ್ಗೆ ಒಂದು ಘಳಿಗೆ ಆಲೋಚನೆ ಮಾಡುವುದಿಲ್ಲ. ಮೇಲಾಗಿ ನಮ್ಮ ಪ್ರಧಾನಿಯವರ ಮನದಲ್ಲಿ, ಈ ರಾಜ್ಯದ ಹಿತಕ್ಕೆ ಧಕ್ಕೆ ಆಗುವುದಾದರೆ, ಒಂದು ನಿಮಿಷ, ಒಂದು ಸೆಕೆಂಡ ಅಲ್ಲಿ ಇರುವುದಿಲ್ಲ. ಇವರೆಲ್ಲಾ ಏನು ಮಾಡುತ್ತಾರೆ. ಒಂದು ಮಾತು ನೆನಪಾಗುತ್ತದೆ. ಏನಿದ್ದರೂ ಮುಂದೆ ಹೋರಾಟ ನಮಗೂ ಮತ್ತು ನಿಮಗೂ ಅವರು ಉಳಿಯುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಇದ್ದಾಗಲೇ ಈ ಮಾತನಾಡಬೇಕಾಗಿತ್ತು. ಇನ್ನು ಮುಂದೆ ನಾವೂ ಮತ್ತು ಬಿ.ಜೆ.ಪಿಯವರೇ ಉಳಿಯುವುದು. ಕಾಂಗ್ರೆಸ್‌ನವರು ಉಳಿಯುವುದಿಲ್ಲವೆಂದು ಅವರು ಇದ್ದಾಗ ಹೇಳಿ.

ಶ್ರೀ ಜೆ.ಹೆಚ್. ಪಟೇಲ್ : ಹೇಳಿದೆ. ಇಲ್ಲಿಯೂ ಹೇಳಿದ್ದೇವೆ, ಹೊರಗೂ ಹೇಳಿದ್ದೇವೆ. ಅವರೇ ಸ್ವತಃ ಯಾರು ಯಾರು ಉಳಿಯುತ್ತಾರೋ, ಹೋಗುತ್ತಾರೋ ನೀವು ನೋಡುತ್ತಾ ಇರಿ. ನಿಮ್ಮ ಇಬ್ಬರ ನಿಲುವು ರಾಜ್ಯದ ಹಿತದೃಷ್ಟಿಯಿಂದ ನಾವೇನಾದರೂ ತಪ್ಪು ಮಾಡಿದ್ದರೆ ಅಥವಾ ಆ ಕಮಿಟಿ ಬಗ್ಗೆಯೂ ಹೇಳಿ. ಕಮಿಟಿ ಆದದ್ದು, ಲೀಗಲಿ, ಕಾನ್‌ಸ್ಟಿಟ್ಯೂಷನ್ ಆಗಲೀ, ನಮ್ಮ ರಾಜ್ಯಸರ್ಕಾರದ ಪ್ರಾವಿಷನ್ ಆಗಲೀ, ವೆಸ್ಟ್ ಬೆಂಗಾಲ್ ಸರ್ಕಾರದ ಪ್ರಾವಿಷನ್ ಆಗಲೀ, ಯಾವ ಸರ್ಕಾರದ ಭಾಗವೂ ಇಲ್ಲಿ ಸೇರಿಲ್ಲ. No government has participated. ಸ್ಟೀರಿಂಗ್ ಕಮಿಟಿಯಲ್ಲಿ ನಾವು 6 ಜನ ಇದ್ದಾಗ, ಯಾವ ಸ್ಟೀರಿಂಗ್ ಕಮಿಟಿ ಯು.ಎಫ್. ಗವರ್ನಮೆಂಟ್‌ಗೆ ಸಪೋರ್ಟ್ ಮಾಡತಕ್ಕಂಥ ಸ್ಟೀರಿಂಗ್

ಕಮಿಟಿ. ಇದೇನೂ ಸೀಕ್ರೆಟ್ ಕಮಿಟಿ ಅಲ್ಲ. It is a political body. ಅಲ್ಲಿ ಆರು ಜನ ಚೀಫ್ ಮಿನಿಸ್ಟರುಗಳು ಇದ್ದು, ಯು.ಎಫ್. ಗವರ್ನ್‌ಮೆಂಟಿಗೆ ಸಪೋರ್ಟ್ ಇರುವಾಗ, ಜ್ಯೋತಿಬಸು as an elderly person, why not we settle it among ourselves, why should we go to court ಎಂದು ಹೇಳಿದರು. ಪ್ರಧಾನ ಮಂತ್ರಿ ಇರಲಿಲ್ಲ, ಪ್ರಧಾನಮಂತ್ರಿ ಇದರೊಳಗೆ ಭಾಗವಹಿಸಿಲ್ಲ. ಅವರು ಎಲ್ಲಿಯೂ ಭಾಗವಹಿಸಿಲ್ಲ. ಬೇಕಾದರೆ ನೀವು ಮಾಡಿಕೊಳ್ಳಿ. ಯುನೈಟೆಡ್ ಫ್ರಂಟ್ ಗವರ್ನ್‌ಮೆಂಟ್ ಉಳಿಯಬೇಕೋ ಬಿಡಬೇಕೋ ಅದು ನಿಮಗೆ ಬಿಟ್ಟಿದ್ದುದು, ಆದರೆ, ರಾಜ್ಯದ ಹಿತದಲ್ಲಿ ಅವರು he has never compromised, he has never yielded and he is not a party. As you have rightly said, I am a party. I own it. ಏಕೆಂದರೆ ಸ್ಟೀರಿಂಗ್ ಕಮಿಟಿಯಲ್ಲಿ 6 ಜನ ಮುಖ್ಯಮಂತ್ರಿಗಳು ಇದ್ದಾಗ, ಮಾನ್ಯ ಅಧ್ಯಕ್ಷರೇ, ತಾವು ಅಲ್ಲಿಯ ಸಿಚ್ಯುಯೇಷನ್ ಬಗ್ಗೆಯೂ ಆಲೋಚನೆ ಮಾಡಬೇಕು. ನೀವು ಸೇರಿ ಬಗೆಹರಿಸಿಕೊಳ್ಳಿ ಎಂದು ಹೇಳಿದಾಗ, ಚಂದ್ರಬಾಬು ನಾಯ್ಡು ಆಗಬಹುದು ಎಂದು ಹೇಳಿದರು. ನಾನೊಬ್ಬ ನಾನು ಶೂರಾಧಿಶೂರ, ನಾನು ಚಾಳುಕ್ಯ ವಂಶದಿಂದ ಬಂದವನು. ನಾನೆಂದೂ ಮಾತಾಕಿಯೇ ಗೊತ್ತಿಲ್ಲ ನನಗೆ. ಬೇಕಾದರೆ ನೀವು ಬನ್ನಿ, ಬೇಡ ಎಂದರೆ ಹೋಗಿ ಎಂದು ಯಾರಾದರೂ ಹೇಳುತ್ತಾರೆಯೇ? ನಾವು ಆರು ಜನರೂ ಸೇರಿ ಏನು ಎಂಬುದನ್ನು ಮಾತನಾಡೋಣ. ನಾವು ಮಾತನಾಡುವುದಕ್ಕೆ ಏಕೆ ಅಂಜಬೇಕು? ಇನ್ನೂ ಚಂದ್ರಬಾಬುನಾಯ್ಡು ಅಂಜಬೇಕು. ತಪ್ಪು ಮಾಡಿದವರು ಅಂಜಬೇಕು. ಕರ್ನಾಟಕ ಏಕೆ ಅಂಜಬೇಕು; We have not violated the single point of the Bachwat Asward. ನಮಗೆ 734ರಲ್ಲಿ 5 ಟಿ.ಎಂ.ಸಿ ಕುಡಿಯುವ ನೀರಿಗೆ ಕೊಟ್ಟರೆ, ಇನ್ನು 729 ಟಿ.ಎಂ.ಸಿ ನೀರಿನಲ್ಲಿ ಎಷ್ಟು ಸ್ಟೋರ್ ಮಾಡಿದ್ದೇವೆ? ಸ್ಟೋರ್ ಮಾಡುವುದಕ್ಕೆ ಯಾರ್‍ಯಾರು ಏನೇನು ಕಸರತ್ತು ಮಾಡಿದರು. ಅದೇ ದೇವಗೌಡರು ಇಲ್ಲಿ ಮುಖ್ಯಮಂತ್ರಿಯಾದ ತಕ್ಷಣ ಇದನ್ನು ತಡ ಮಾಡಿದರೆ ಕೈಮೀರಿ ಹೋಗುತ್ತದೆಂದು, ಎಲ್ಲಾ ರೀತಿಯಿಂದ ಪ್ರಯತ್ನ ಮಾಡಿ, 4 ವರ್ಷದಲ್ಲಿ ಆಗದೇ ಇರುವ ಕೆಲಸ 6 ತಿಂಗಳಲ್ಲಿ ಆಯಿತು. ಈಗ್ಗೆ ಒಂದು ವರ್ಷದಲ್ಲಿ ಆಯಿತು. ಇದನ್ನು ತಾವುಗಳು ಅರ್ಥಮಾಡಿಕೊಳ್ಳಿ, ಕೆಲಸ ಮುಖ್ಯ, ಮಾತನಾಡುವುದಲ್ಲ ಮುಖ್ಯ. ನಾನೂ ಕೂಡ ಬೇಕಾದ ಘರ್ಜನೆ ಮಾಡಬಲ್ಲೆ. ನೀರು ಸ್ಟೋರ್ ಮಾಡಿಕೊಳ್ಳದೇ ಬರೀ ಘರ್ಜಿಸಿದರೆ ಏನು ಪ್ರಯೋಜನ ಬಂತು? ಅವರು ಘರ್ಜನೆ ಮಾಡದೇ, ನಯವಾಗಿ ಮಾತನಾಡಿಕೊಳ್ಳುತ್ತಾ, ನೀರು ಸ್ಟೋರೇಜ್ ಮಾಡಿಕೊಂಡು ಅವರು ಹೋಗುವುದು, ನಾವು ಈ ರೀತಿ ಆಗುವುದು. ಆದ್ದರಿಂದ, ಈಗ ಆ ಕಮಿಟಿಯ ಎವಿಡೆನ್‌ಷಿಯರಿ ವ್ಯಾಲ್ಯು, ಲೀಗಲ್ ಅಕ್ಸೆಪ್ಟಬಿಲಿಟಿ ಅಥವಾ ನಮ್ಮ ಸರ್ಕಾರದ ಮೇಲೆ, ಯಾವುದೇ ಸರ್ಕಾರದ ಮೇಲೆ, ಬೈಂಡಿಂಗ್ ಅಲ್ಲ ಎನ್ನುವುದಕ್ಕೆ ಕೇಂದ್ರ ಸರ್ಕಾರವೇ ಹೇಳಿದ; we have nothing to do. ಅದಕ್ಕಿಂತ ಇನ್ನೇನು ಬೇಕು. ಕೇಂದ್ರ ಸರ್ಕಾರ ಹೇಳಿದೆ, ಆಂಧ್ರ ಸರ್ಕಾರದವರು ಅಡಾಪ್ಟ್ ಮಾಡಿರುವ ನಿರ್ಣಯಕ್ಕೂ ನಮಗೂ ಏನೂ ಸಂಬಂಧವಿಲ್ಲ ಎಂದು. ನಾವು ನಿರ್ಣಯ ಮಾಡಿದ್ದುದು ಏಕೆ ಎಂದರೆ, ಅವರು ಮಾಡಿದರಲ್ಲಾ ಎಂದು. ಅವರು ಮಾಡದೇ ಇದ್ದರೆ, ಆ ವಿಷಯವೇ ಹೋಗುತ್ತಿತ್ತು. ಆದ್ದರಿಂದ, ಇಲ್ಲಿ ಮತ್ತೊಮ್ಮೆ ನೀವು ಯಾರನ್ನು ಕೇಳಿ ಹೋದಿರಿ ಎಂದರು.

ನಾವು ಯಾವುದೋ ಒಂದು ನೆಂಟಸ್ತನವನ್ನು ರಮೇಶ್‌ಕುಮಾರರವರ ಮನೆತನದಲ್ಲಿ ಮಾಡಬೇಕೆಂದು ಹೋಗುತ್ತೇವೆ. ಅವರ ಮನೆಯ ಮಗಳನ್ನು ಕೊಡುವ ಹಾಗೆ ಇದದಾರೋ ಅಥವಾ ಮಗನಿಗೆ ಕೊಡುವಹಾಗೆ ಇದ್ದಾರೋ ನೋಡಿಕೊಂಡು ಬನ್ನಿ ಎಂದು ಪುರೋಹಿತರನ್ನು ಕಳುಹಿಸಿದರೆ, ಪುರೋಹಿತ ಹೇಳಿದಹಾಗೆ ನಾವು ಕೇಳುತ್ತೇವೆಯೇ? ಈಗ ಆ ಪುರೋಹಿತನ ರಿಪೋರ್ಟ್ ಏನಿದೆ ಅವನಿಗೂ ಬೇಡ ಎಂದಾಯಿತು, ಇವನಿಗೂ ಬೇಡ ಎಂದಾಯಿತು. ಮದುವೆ ಕ್ಯಾನ್ಸಲ್ ಆಯಿತು. ಪುರೋಹಿತ ಮನೆಗೆ ಹೋದ. Why do you worry about it. ಅವರು ಹೇಳಿದ್ದು ಬಹಳ ಕರೆಕ್ಟ್ we are unncessarily giving more importance to that committee'report. It is nothing. ಅದಕ್ಕೆ ಸದನ ನಿನ್ನೆ ಏನು ಸರ್ವಾನುಮತದಿಂದ ನಿರ್ಣಯ ಮಾಡಿದೆ, ಆ ನಿರ್ಣಯವನ್ನು ಜಾರಿಗೊಳಿಸುವುದಕ್ಕೆ ಏನು, what steps can be taken by this august House and by all of us. ಏಕೆಂದರೆ, ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿರಬೇಕು. ಅದು ನಮ್ಮ ಇಚ್ಛೆ. ಅವರಿಗೆ ಎಲ್ಲಾ ಬೆಂಬಲ ಕೊಡುವುದಕ್ಕೆ, ನಾವೆಲ್ಲರೂ ಸಿದ್ಧರಿದ್ದೇವೆ. ಆದರೆ, not at the cost of the State, We want Mr. DeveGowda to continue, we want Jyothi Basu to support us, we want Karunanidhi to come with us, we want Chandrababu Naidu to realise his mistake. This is our politically declared policy. ಇದೇನು ಕಳ್ಳುಬೆಳ್ಳಿಯ ಮಾತಲ್ಲ. ಒಂದು ರಾಷ್ಟ್ರದ ಸರ್ಕಾರವನ್ನು ನಡೆಸುವ ಸುದಿನ ನಮಗೆ ಬಂದಿದೆ. ಆ ದಿನ ಬಂದಿರುವುದರಿಂದಲೇ ನಮಗೆ ಎಷ್ಟು ಅನುಕೂಲಗಳಾಗುತ್ತಿದೆ ಎನ್ನುವುದನ್ನು ನಾವು ಇವತ್ತು ಬಹಿರಂಗವಾಗಿ ಹೇಳುವ ಹಾಗೆ ಇಲ್ಲ. ನಾವೇ ಮುಚ್ಚಿಕೊಂಡು ಒಂದು ರೀತಿ ಏನೋ ಮಹಾಪರಾಧ ಮಾಡಿದ್ದೇವೆ ಎನ್ನುವ ಹಾಗೆ ಇರಬೇಕು. ಅದನ್ನೂ ನಮ್ಮ ಸ್ನೇಹಿತರು ಅರ್ಥಮಾಡಿಕೊಳ್ಳದಿದ್ದರೆ ಈ ಸಂದರ್ಭದಲ್ಲಿ ಎಷ್ಟು ಇದನ್ನು ಕೆಡಿಸಬೇಕು, ಎಷ್ಟು ಇದನ್ನು ಮಾಡಬೇಕು, ಅಷ್ಟೇ ನೋಡಿಕೊಳ್ಳುತ್ತಾ ಅದರಲ್ಲಿ ಪಾಯಿಂಟ್ ಒಂದೊಂದೇ ಹುಡುಕಿಕೊಂಡು ಪ್ಯಾರಾ 3 ರಲ್ಲಿ, ಪ್ಯಾರಾ 3 ರಲ್ಲೂ ಇಲ್ಲ. ಪ್ಯಾರಾ 100 ರಲ್ಲೂ ಇಲ್ಲ. ಅಬ್‌ವಿಯಸ್ ಆಗಿ ಇದು ಗೊತ್ತಿದೆ. We want our Prime Minsiter to help our State, we want him to help us ನಮ್ಮ ರಾಜ್ಯದ ನೀರಾವರಿ ಬಗ್ಗೆ ಎಷ್ಟು ಕಳಕಳಿ ಇಟ್ಟುಕೊಂಡಿದ್ದರು ಎಂದು ತಾವೇ ಹೇಳಿದ್ದೀರಿ. ನಾನು ಹೇಳುವುದೇ ಬೇಕಾಗಿಲ್ಲ. ನೀರಾವರಿಗೆ ಮೊದಲನೇ ಸಾರಿ ರಾಜ್ಯಗಳಿಗೆ ಹಳ್ಳಿಗಳ ರಸ್ತೆಗೆ ಮೊದಲನೇ ಬಾರಿಗೆ ದುಡ್ಡು ಕೊಟ್ಟವರು ಈ ಸರ್ಕಾರ ಬಡ ಜನರಿಗೆ ಕೆಲವು ನಾವೇನು ಸೋಷಿಯಲ್ ಪ್ರೋಗ್ರಾಮ್ಸ್ ಹಾಕಿಕೊಂಡಿದ್ದೇವೆ, ಆಹಾರಧಾನ್ಯ. ಮೊದಲನೇ ಬಾರಿಗೆ ಕೇಂದ್ರ ಸರ್ಕಾರದವರು ದುಡ್ಡು ಕೊಟ್ಟರು. ಇವನ್ನೆಲ್ಲಾ ನಾವು ಇವತ್ತು ತಿಳಿದುಕೊಂಡು ನಮಗೆ ಈಗ ಆಗಿರುವ ಅನುಕೂಲಗಳನ್ನು ಇನ್ನೂ ಆಗಬೇಕಾದವುಗಳನ್ನು ಆದಷ್ಟು ಬೇಗ ನಾವು ಮಾಡಿಕೊಳ್ಳುವುದಕ್ಕೆ ಏನು ಮಾಡಬೇಕು ಎನ್ನುವುದನ್ನು ಬಿಟ್ಟು ಹುಲಿ ಹೊಡೆಯುವುದಕ್ಕೆ ನೀನು ಹೋಗು ಎಂದರೆ ಪಕ್ಕದಲ್ಲಿರುವ ನಾಯಿಯನ್ನೇ ನೋಡುತ್ತಾ ಹೋಗುವುದು. ಹುಲಿಯನ್ನು ನೋಡುವುದೇ ಇಲ್ಲ. ಇವತ್ತು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಅವರು ಯಾರು ಏನು ಬೇಕಾದರೂ ಹೇಳಿಕೊಳ್ಳಲಿ, ಇವರು ಕುರ್ಚಿಗೋಸ್ಕರ ಎಂದು

ಹೇಳುತ್ತಾರೆ. ಕುರ್ಚಿಯೇ! ಅದಕ್ಕೆ ನಾವು ಸಿಂಹಾಸನ ಒಂದು ಕರೆಯುತ್ತೇವೆ. ನಮ್ಮ ಚಕ್ರವರ್ತಿ ಆ ಸಿಂಹಾಸನದಲ್ಲಿ ಇರಬೇಕು. ಏನು ತಿಳಿದುಕೊಳ್ಳುತ್ತಾರೋ ತಿಳಿದುಕೊಳ್ಳಲಿ, ಬಿಟ್ಟರೆ ಬಿಡಲಿ ನಮಗೇನು? ಹಳ್ಳಿಗಾಡಿನ ಜನರಿಗೆ ಒಂದು ಮಾತನ್ನು ಈ ಸದನದಲ್ಲಿ ಹೇಳಬೇಕು. ಹಳ್ಳಿಗಾಡಿನ ಜನರ ಬಗ್ಗೆ ಅರಿತು ಅವರ ಬಗ್ಗೆ ಅನುಕಂಪ ಮತ್ತು ಭಾವನೆಗಳು ಈ ಪ್ರಧಾನಮಂತ್ರಿಯಿಂದ ಹೊರಬಂದ ಹಾಗೆ ವ್ಯಕ್ತವಾದ ಹಾಗೆ ಹಿಂದೆ ಯಾವ ಪಾರ್ಟಿಯವರೇ ಇರಲಿ, ಯಾರಿಂದಲೂ ಬರಲಿಲ್ಲ. ಇನ್ನೂ ಬಹಳ ಪಾಂಡಿತ್ಯ ಇದ್ದವರು. ಪ್ರೊಫೆಸರ್ಸ್, ಸ್ಕಾಲರ್ಸ್ ಇದ್ದಿರಬಹುದು. ನಾವು ಮಣ್ಣಿನ ಮಗ ಎಂದು ಏನು ಹೇಳುತ್ತೇವೆ, ಅದಲ್ಲ. He is man down to earth.

ಭೂಮಿಯನ್ನು ತಿಳಿದುಕೊಂಡು, ಭೂಮಿಯ ಮೇಲೆ ಇರುವ ಜನರ ಕಷ್ಟಗಳು, ಅವರು ಸ್ವರ್ಗ, ಮರ್ತ್ಯ, ಪಾತಾಳದಲ್ಲಿ ಪ್ರಧಾನ ಮಂತ್ರಿಗಳು ಇದ್ದಿರಬಹುದು, ಇವರು ಮಾತ್ರ ಮರ್ತ್ಯದಲ್ಲಿರುವವರು. ಆದ್ದರಿಂದ ನಾವು ಇವತ್ತು ಅವರು ಉಳಿಯಬೇಕು. ಅವರು ಉಳಿಯಬೇಕು ಎಂದು ಪಾಲಿಟಿಕ್ಸ್ ಮಾಡುತ್ತೇವೆ. ಅದನ್ನೇಕೆ ಮಾಡಬಾರದು? ಅವರನ್ನು ಉಳಿಸುಕೊಳ್ಳುವುದಕ್ಕೋಸ್ಕರವೇ ಅವರು ಇರಬೇಕು. ದೇಶದ ಹಿತದೃಷ್ಟಿಯಿಂದಲೂ ಇರಬೇಕು ಮತ್ತು ನಮ್ಮ ರಾಜ್ಯದ ಹಿತದೃಷ್ಟಿಯಿಂದಲೂ ಅವರು ಇರಬೇಕು. ಆ ಕಾರಣವಾಗಿ ಸ್ಪಷ್ಟವಾಗಿ ನಾನು ಇವತ್ತು ಹೇಳಿದೆ. ಇದರಲ್ಲಿ ಮುಚ್ಚುಮರೆ ಏನು ಇದೆ? ಈಗ ಅವರು ಕಳುಹಿಸಿದ ಟೀಮ್, ಕಳುಹಿಸಿದ ಟೀಮನ್ನು ಏಕೆಂದರೆ ಅವರು ಸರ್ಕಾರಿ ಅಧಿಕಾರಿಗಳು. ಅವರನ್ನು ನಾವು ಕರೆದು ಆಂಧ್ರಪ್ರದೇಶಕ್ಕೆ ಹೋಗಿ ಎಂದರು. ಮೊದಲನೇ ಬಾರಿಗೆ ಒಂದು ಟೀಮ್ ಎರಡೂ ರಾಜ್ಯಗಳನ್ನು ನೋಡ ಬಂದವರು. ನಾನು ಮಾನ್ಯ ನಂಜೇಗೌಡರ ಮಾತನ್ನು ಒಪ್ಪುತ್ತೇನೆ. ಹಾಗೆ ಹೋದ ಟೀಮ್‌ನವರು ಮೊದಲೇ ಮನಸ್ಸು ಮಾಡಿಕೊಂಡು ಹೋಗಿದ್ದಾರೆ ಏನು ಬರೆಯಬೇಕು ಎಂದು. ಅವರೇನು ಹೊಸದಾಗಿ ನೋಡಿ ಸತ್ಯವನ್ನು ಬರೆಯಬೇಕು ಎಂದು ಹೋಗಿಲ್ಲ. ಇಂಥದ್ದು ಬರೆಯುವುದಕ್ಕೋಸ್ಕರವೇ ಅಲ್ಲಿಗೆ ಹೋದರು. ಆ ದೃಷ್ಟಿಯಿಂದ ನಾವು ಇವತ್ತು ಅದನ್ನು ಹೇಳಿದ್ದೇವೆ. ಇದು ಟೀಮೂ ಅಲ್ಲ, ಇದು ಎಕ್ಸ್‌ಪರ್ಟ್ಸ್ ಅಲ್ಲ. ಇದಕ್ಕೆ ಯಾವ ಬೆಲೆ ಕೊಡುವುದಕ್ಕೂ ಯೋಗ್ಯ ಇಲ್ಲ ಎಂದು ಅದನ್ನು ಜ್ಯೋತಿಬಸುರವರಿಗೆ ಬರೆದಿದ್ದೇನೆ. because we respect him ನನ್ನ ಪತ್ರದಲ್ಲಿ ಬರೆದಿದ್ದೇನೆ. ಆ ನಂತರ ಹೇಳಿದ್ದೇನೆ, ಈ ರಿಪೋರ್ಟಿನ ಆಧಾರದ ಮೇಲೆ ಇನ್ನು ಮುಂದೆ ಮಾತುಕತೆ ಆಡುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದೇನೆ. Very recently, Mr. Speaker, Sir, on 1.3.1997 we have filed an original suit, I think you are aware of it. In this Original Suit before the Supreme Court.

ಅವರೇನು ಕೋರ್ಟಿಗೆ ಹೋಗುತ್ತೇವೆ ಎಂದು ಹೇಳುತ್ತಿದ್ದರಲ್ಲಾ, ಅವರು ಹೇಳುವುದಕ್ಕಿಂತ ನಾವು ಕಾಂಕ್ರೀಟ್ ಆಗಿ ಇಂಥಿಂಥ ಯೋಜನೆಯಲ್ಲಿ ಇಷ್ಟಿಷ್ಟು ಇವರು ವಯಾಲೇಟ ಮಾಡಿದ್ದಾರೆ. ಯಾರು, ಆಂಧ್ರಪ್ರದೇಶದವರು. ನಾವು ಇನ್ನು ಎಷ್ಟೆಷ್ಟು ಸ್ಟೋರ್ ಮಾಡಿಕೊಳ್ಳಬೇಕಾಗಿರುವ ಕೆಪಾಸಿಟಿ ಎಷ್ಟು? ಮಾಡಿರುವುದು ಇಷ್ಟು? ಇವತ್ತು ಇದನ್ನು ಹೇಳಿ ಸುಪ್ರೀಂಕೋರ್ಟಿಗೆ ಇವತ್ತು ಕೇಸ ಹಾಕಿದ್ದೇವೆ. ನಾವು ಕೇಸನ್ನು ಹಾಕಿದ್ದೇವೆ. ಸುಪ್ರೀಂ ಕೋರ್ಟಿನಲ್ಲಿ ಬರಲಿ. ಒಂದು, ಈ ನಾಡಿನಲ್ಲಿ ಹುಟ್ಟಿ ಬೆಳೆದವನಿಗೆ

ದಕ್ಕೆ ದ್ರೋಹ ಮಾಡುವುದಕ್ಕಿಂತ ಅವನು ಸಾಯುವುದು ಮೇಲು. ಹಿಂದೆ ಮಹಾದ್ರೋಹಿಗಳು ನಮ್ಮ ನಾಡಿಗೆ ದ್ರೋಹ ಮಾಡಿ ದ್ರೋಹಿಗಳು ಎಂದು ಹೆಸರಾಗಿ ಹೋದವರು ಇದ್ದಾರೆ. ಅವರು ಇತಿಹಾಸಕ್ಕೆ ಹೋಗಿದ್ದಾರೆ ದ್ರೋಹಿಗಳು ಎಂದು. ಅವರು ಕೊನೆಯತನಕವೂ ಪಾಪಿಗಳಾಗಿಯೇ ಉಳಿಯುತ್ತಾರೆ. ಪಾಪ, ಅವರು ಆ ತಪ್ಪನ್ನು ಮಾಡತಕ್ಕಂಥವರಲ್ಲ. ಗರ್ಜನೆ ಕಡಿಮೆಯಾಗಿದೆ ಎಂದು ನೀವು ಹೇಳಿದಿರಿ. ಗರ್ಜನೆ ಕಡಿಮೆ ಇಲ್ಲ. ಕೆಲಸ ಜಾಸ್ತಿ ಮಾಡಿ ಸ್ವಲ್ಪ ಗರ್ಜನೆ ಕಡಿಮೆ ಮಾಡಿದ್ದೇವೆ. ಕೆಲಸ ಕಡಿಮೆಯಾದಾಗ ಗರ್ಜನೆ ಮಾಡಿಕೊಳ್ಳುತ್ತಾ ಹೋಗುವುದು. ಇನ್ನೊಂದು, ಈ ರಾಜ್ಯದ ಹಿತಾಸಕ್ತಿಗೆ ಎಲ್ಲಾದರೂ ಕುಂದುಕೊರತೆಯಾದರೆ ನಾನು ನಿಮ್ಮಗಳನ್ನು ಬಿಟ್ಟು ಇನ್ಯಾರನ್ನು ಕನ್‌ಸಲ್ಟ್ ಮಾಡಲಿ? ಚಂದ್ರಬಾಬು ನಾಯ್ಡು ಹತ್ತಿರ ಹೋಗಲೇ? ಕನ್‌ಲ್ಟ್ ಮಾಡುವುದು ನಿಮ್ಮನ್ನೇ. ಯಾವ ಸಂದರ್ಭದಲ್ಲಿ ಕನ್‌ಸಲ್ಟ್ ಮಾಡಬೇಕು ಎನ್ನುವ ಅವಶ್ಯಕತೆ ಕಂಡಾಗ ಮಾತ್ರ ಮಾಡುವುದು. ನಮಗೆ ಊಟಕ್ಕೆ ನಾವೆಲ್ಲಾ ರೆಡಿ ಮಾಡಿಕೊಂಡು ಊಟ ಹಾಕುವ ಆಗಿದ್ದರೆ ಕರೆಯಬಹುದಾಗಿತ್ತು. ಅಲ್ಲೇನೂ ಇಲ್ಲದೆ ಸುಮ್ಮನೆ ಕರೆದು ಏನು ಮಾಡುವುದು? ಅದಕ್ಕೆ ಏನೂ ಇರಲಿಲ್ಲ. ಮಾತುಕತೆಗೆ ಏನೂ ವಸ್ತು ಇಲ್ಲದೇ ಇದ್ದುದರಿಂದ ಕರೆಯಲಿಲ್ಲ. ಅದರ ಅವಶ್ಯಕತೆ ಇದ್ದಾಗ ಎಲ್ಲರನ್ನೂ ಕರೆಯುತ್ತೇನೆ. ಅವಶ್ಯಕತೆ ಇದ್ದಾಗ. ವಿನಾಕಾರಣ ಕರೆದು ಮಾತನಾಡುವುದರಿಂದ ಕೆಲವು ಸಾರಿ ಏನಾಗುತ್ತದೆ ಎಂದರೆ ನಾವು ಯಾವ ಉದ್ದೇಶವನ್ನು ಮನಸ್ಸಿನಲ್ಲಿಟ್ಟು ಕೊಂಡಿರುತ್ತೇವೋ ಅವು ಕನ್‌ಫ್ಯೂಸ್ ಆಗುತ್ತಾ ಹೋಗುತ್ತವೆ. ಅದರಲ್ಲಿ ಪ್ರಕಟಣೆಗಳು ಬೇರೆ ಬೇರೆ ರೀತಿ ಹೋಗುತ್ತವೆ. ಹಾಗೆ ಆಗಬಾರದು ಎಂದು ಆ ದೃಷ್ಟಿಯಿಂದ ನಾನು ಮಿನಿಮೈಸ್ ಮಾಡಿದ್ದೇನೆ. ಬಿಟ್ಟಿಲ್ಲ. ಇನ್ನು ಮುಂದೂ ಸಹ ಅತ್ಯಂತ ಅವಶ್ಯಕತೆ ಇದ್ದಾಗ ನಾನು ಕೇಳಿ ಸದನವನ್ನು ಬಿಟ್ಟು, ಅರೆ ಈ ಸದನವನ್ನು ಬಿಟ್ಟು ನಾನು ಹೊರಗೆ ಇದ್ದು ಏನು ಮಾಡುವುದಕ್ಕೆ ಹೋಗಲಿ? ಆದ್ದರಿಂದ ಮಾನ್ಯ ಸದಸ್ಯರು ನಿನ್ನೆ ಏನು ಸರ್ವಾನುಮತದಿಂದ ಆ ನಿರ್ಣಯವನ್ನು ಒಪ್ಪಿಕೊಂಡರೋ ಅದಕ್ಕೆ ಧನ್ಯವಾದಗಳು. ನಾವು ಇದೇ ರೀತಿ, ಇದೇ ಶಿಸ್ತನ್ನು ಇದೇ ಉದ್ದೇಶಗಳನ್ನು ನಾವು ನಡೆಸಿಕೊಂಡು ಹೋಗೋಣ. ನಮಗೆ ಇನ್ನು ಕೆಲವು ಅನಿರೀಕ್ಷಿತ ಆತಂಕಗಳು ಬರಬಹುದು. ಆದರೂ ಚಿಂತೆಯಿಲ್ಲ. ನಾವು ಈ ನಾಡಿನ ರಕ್ಷಣೆಗೆ ಎಂಥ ಸಂದರ್ಭ ಬಂದರೂ ಚಿಂತೆಯಿಲ್ಲ. ಹಿಂದೆ ಬೀಳುವುದು ಬೇಡ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ನಾನೊಂದು ಲೀಗಲ್ ಪಾಯಿಂಟ್ ಎತ್ತಿದ್ದೆ. ಸುಪ್ರೀಂ ಕೋರ್ಟ್ ವಿಚಾರ, it creates evidence ಎಂದು ಅದು ಇದು ವಿಚಾರ ಹೇಳಿದಿರಿ. ನಾನು ಅಂದುಕೊಂಡೆ ಮಾನ್ಯ ಮುಖ್ಯಮಂತ್ರಿಗಳು ನಾವು ಇಂಥ ಕಡೆ ಎಡವಿದ್ದೇವೆ, ನಿಜವಾಗಿಯೂ ಕೂಡ ಇದನ್ನು ನಾವು ಸರಿಪಡಿಸಿಕೊಂಡು ನಾವು ಮುಂದೆ ಹೋಗುತ್ತೇವೆ ಎನ್ನುವ ಅಭಿಪ್ರಾಯ ಇಲ್ಲ. 'ಸೋತರೂ ಮೀಸೆ ಮಣ್ಣಾಗಲಿಲ್ಲ' ಎನ್ನುವ ವಾದ ಏನು ಇದೆ, ಸೋತರೂ ಕೂಡ ಮೀಸೆ ಮಣ್ಣಾಗಲಿಲ್ಲ ಎಂದು ಹೇಳಿದ್ದಾರೆ. ಆಮೇಲೆ

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಆಮೇಲೆ ನೀವು ಕಂಟಿನ್ಯೂ ಮಾಡಬಹುದು. ಒಂದೇ ಒಂದು ಮಾತು ಹೇಳುತ್ತೇನೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ವಾಕ್ ಔಟ್ ಮಾಡುವುದಕ್ಕಿಂತ ಮುಂಚೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ನೀವು ವಾಕ್ ಔಟ್ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಪರ್ಮನೆಂಟ್ ಆಗಿ ಇನ್ನು ಮೂರು ವರ್ಷಕ್ಕೂ ಹೊರಗೆ ಹೋಗಿ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ಸರ್ಕಾರದಲ್ಲಿ ಯಾವ ಯಾವ ಸಂದರ್ಭದಲ್ಲಿ ಅನ್ಯಾಯ ಮಾಡಿದೆ ಎಂದು ತಾವು ಹೇಳುತ್ತಲೇ ಇಲ್ಲವಲ್ಲಾ. ಎಲ್ಲರೂ ಹೊರಗೆ ಹೋಗಿ ಎಂದು ಯಾರಿಗೆ ಹೇಳುತ್ತೀರಿ ?

ಶ್ರೀ ಜೆ.ಹೆಚ್. ಪಟೇಲ್ : ಏನಾದರೂ ತಪ್ಪು ಮಾಡಿದ್ದರೆ ತಪ್ಪು ಎಂದು ಹೇಳುತ್ತೇವೆ. ತಪ್ಪು ಮಾಡದಿದ್ದರೆ ಏಕೆ ತಪ್ಪು ಎನ್ನುತ್ತಾರೆ. ರಾಜ್ಯದ ಹಿತವನ್ನು ಎಷ್ಟು ಚೆನ್ನಾಗಿ ಕಾಪಾಡುತ್ತಾರೆ ನೋಡಿ. ಇವರೆಲ್ಲಾ ರಾಜ್ಯದ ಹಿತವನ್ನು ಕಾಪಾಡುವವರು!

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಸಭಾತ್ಯಾಗ ಮಾಡಿದರು. ಮತ್ತು ಮಾನ್ಯ ವಾಟಾಳ್, ನಾಗರಾಜ್‌ರವರು ಸಹ ಸಭಾತ್ಯಾಗ ಮಾಡಿದರು.)

ಶ್ರೀ ಜೆ.ಹೆಚ್.ಪಟೇಲ್ : ಇವರು ಹೇಳಿದ್ದೆಲ್ಲಾ ಹೇಗಾಯಿತು ಎಂದರೆ ಇಷ್ಟೊತ್ತಿನತನಕ ಅವರ ಭಾಷಣಗಳನ್ನು ಕೇಳಿದಾಗ ಒಂದು ಖಾಲಿ ಕ್ಯಾನವಾಸ್ ಇತ್ತು. ದೊಡ್ಡದಾದ ಪಟ. ಅವರಿಗೆ ನಾನು ಕೇಳಿದೆ, ಪಟದಲ್ಲಿ ಏನಿದೆ ಎಂದು. ಖಾಲಿ ಇದೆ ಎಂದಾಗ ಅರೆ, ಒಂದು ಆಕಳು ಹುಲ್ಲು ಮೇಯುತ್ತಾ ಇದೆ, ಅದನ್ನು ನೋಡಲಿಲ್ಲವೇ ? ಎಂದು ಅವರು ಅಪೋಜಿಷನ್ ಲೀಡರ್ ಹೇಳಿದರು. ಹುಲ್ಲು ಎಲ್ಲಿ ಕಾಣುವುದಿಲ್ಲವಾ ಎಂದಾಗ ಆಕಳು ಮೇಯ್ದಿದೆ ಎಂದು, ಆಮೇಲೆ ಆಕಳು ಎಲ್ಲಿ ಎಂದಾಗ ಮೇಯ್ದ ಕೂಡಲೇ ಅದು ಹೊರಟುಹೋಯಿತಲ್ಲಾ. ಹೀಗೆ ಅವರು ಇಷ್ಟೊತ್ತಿತನಕ ತವಡು ಕುಟ್ಟಿದರು. ತವಡು ಕುಟ್ಟುವುದು ಎಂದರೆ ಇದೇ. ಏನೂ ಇಲ್ಲದ ಕ್ಯಾನವಾಸ್‌ನಲ್ಲಿ ಹುಲ್ಲು, ಆಕಳನ್ನು ಕಂಡವರು ಇವರು. ಆದ್ದರಿಂದ ಇದು ತಮಗೆ ವೇದ್ಯವೇ ಇದೆ. ಈ ಪಾರ್ಟಿ, ಈ ಸರ್ಕಾರ ನಮಗೆ ಎಲ್ಲಾ ರೀತಿಯಿಂದ We want our Prime Minister to continue as long as possible. ಅದಕ್ಕೆ ಬೇಕಾಗುವ ಸ್ನೇಹವನ್ನು ಗಳಿಸಿಕೊಳ್ಳುವುದಕ್ಕೆ ಎಲ್ಲಾ ಮಾಡುತ್ತೇವೆ. ಆದರೆ ರಾಜ್ಯದ ಹಿತವನ್ನು ಮಾತ್ರ ಯಾವ ಕಾಲಕ್ಕೂ ಬಿಡುವುದಿಲ್ಲ ಎಂದು ಹೇಳಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಉಪಸಭಾಧ್ಯಕ್ಷರು ಬಂದಿಲ್ಲ. ಎಲ್ಲಾ ವಿರೋಧ ಪಕ್ಷಗಳವರೂ ಹೊರಗಿದ್ದಾರೆ. ಎಲ್ಲರೂ ಊಟ ಮಾಡಿಕೊಂಡು ಬರೋಣ. ಮತ್ತೆ 3-00 ಗಂಟೆಗೆ ಸೇರೋಣ.

(ಸದನವು 1-30ಕ್ಕೆ ಮುಕ್ತಾಯಗೊಂಡು ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸದನವು ಪುನಃ 3.10ಕ್ಕೆ ಪ್ರಾರಂಭವಾಯಿತು.

ಉಪಾಧ್ಯಕ್ಷರಾದ (ಶ್ರೀ ಚಂದ್ರಶೇಖರ್. ಸಿ. ಮಾಮನಿ) ಅವರು ಉಪಸ್ಥಿತರಾಗಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಪೌರಾಣಿಕ ನಾಟಕ ಕಲಿಸುವ ಮಾಸ್ತರರುಗಳಿಗೆ ಪ್ರೋತ್ಸಾಹ ಧನ

181 - ಶ್ರೀ ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪ್ರವಾಸೋಧ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಪೌರಾಣಿಕ ನಾಟಕಗಳನ್ನು ಕಲಿಸುವ ಮಾಸ್ತರುಗಳು ಬೀದಿ ಪಾಲಾಗಿದ್ದು, ಇವರಿಗೆ ಪ್ರೋತ್ಸಾಹ ಧನವನ್ನು ಕೊಡುವ ಆಲೋಚನೆ ಇದೆಯೇ?

ಆ) ಇವರಿಗೆ ಪ್ರೋತ್ಸಾಹ ಧನವನ್ನು ಕೊಡುವ ದರದ ಮೂಲಕ ಗ್ರಾಮಾಂತರ ಪ್ರದೇಶದ ಕಲೆಯು ನಶಿಸಿಹೋಗದಂತೆ ತಡೆಯುವುದಿಲ್ಲವೆ;

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಗ್ರಾಮಾಂತರ ಪ್ರದೇಶಗಳಲ್ಲಿ ಪೌರಾಣಿಕ ನಾಟಕಗಳನ್ನು ಕಲಿಸುವ ಮಾಸ್ತರುಗಳು ಬೀದಿ ಪಾಲಾಗಿದ್ದು, ಇವರಿಗೆ ಪ್ರೋತ್ಸಾಹ ಧನವನ್ನು ಕೊಡುವ ಆಲೋಚನೆ ಇದೆಯೇ ಎಂದು ಕೇಳಿದ್ದೇನೆ; ಅದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇವರಿಗೆ ಪ್ರೋತ್ಸಾಹಧನವನ್ನು ಕೊಡುವುದರ ಮೂಲಕ ಗ್ರಾಮಾಂತರ ಪ್ರದೇಶದ ಕಲೆಯು ನಶಿಸಿಹೋಗದಂತೆ ತಡೆಯುವುದಿಲ್ಲವೇ ಎಂದು ಕೇಳಿರುವಂಥದ್ದಕ್ಕೆ "ಉದ್ಭವಿಸುವುದಿಲ್ಲ" ಎಂದು ಹೇಳಿದ್ದಾರೆ. ಅಂದರೆ ಪ್ರಶ್ನೆ ಕೇಳಬೇಕಾಗಿಲ್ಲ ಎಂದು ಆಯಿತು. ನಿಜವಾಗಿಯೂ ಜಾನಪದ ಕಲೆ, ಸಂಸ್ಕೃತಿ, ಕನ್ನಡ ಭಾಷೆ ಅವಿದ್ಯಾವಂತರಿಗೆ ಅಲ್ಪಸ್ವಲ್ಪ ಜ್ಞಾನ ಬರತಕ್ಕಂಥ ಕೆಲಸವನ್ನು ಸುಮಾರು 40-50 ವರ್ಷಗಳಿಂದ ಮಾಡಿಕೊಂಡು ಬಂದಂಥ ಮಾಸ್ತರುಗಳಿಗೆ ಇವೊತ್ತು ಊಟ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಇವೊತ್ತು ಅವರು ಬೀದಿಪಾಲಾಗಿದ್ದಾರೆ. ಕನಿಷ್ಟ ಅವರಿಗೆ ಯಾವ ನಿಯಮಾವಳಿಯಲ್ಲಿ ಮಾಶಾಸನ ಕೊಡಬಹುದು, ಯಾವುದಾದರೂ ಮಾಶಾಸನ ಕೊಡತಕ್ಕಂಥ ಪದ್ಧತಿ ಇದೆಯೇ, ಮಾಶಾಸನ ಕೊಡಬೇಕಾದರೆ ಸರ್ಕಾರ ಏನು ಆಲೋಚನೆ ಮಾಡಿದೆ ಎಂಬುದನ್ನು ದಯವಿಟ್ಟು ಹೇಳಬೇಕು. ಮತ್ತು ಬೀದಿ ಪಾಲಾಗಿರತಕ್ಕ ಆ ಮಾಸ್ತರಿಗೆ ಆಶ್ರಯ ಮನೆ ಯೋಜನೆಯಲ್ಲಿ ಕನಿಷ್ಠ ವಾಸಕ್ಕೆ ಒಂದು ಮನೆಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ನಂತರ ಅವರಿಗೆ ಹಸಿರುಕಾರ್ಡು ಕೊಡತಕ್ಕ ವ್ಯವಸ್ಥೆಯನ್ನು